ಮಂಗಳವಾರ, ಫೆಬ್ರುವರಿ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 54 | ಪುಟ 12

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಸುಖನಿದ್ರೆಯು ಶರೀರವನ್ನು ತಾಯಿಯಂತೆ ಕಾಪಾಡುತ್ತದೆ; ವಿಷ್ಣುವು ಹೇಗೆ ಲೋಕರಕ್ಷಕನೋ ಹಾಗೆ ನಿದ್ರೆಯು ಶರೀರವನ್ನು ಆರೋಗ್ಯಪೂರ್ಣವಾಗಿ ಕಾಪಾಡುತ್ತದೆ.

ಅನುಭವ ಮಂಟಪ ಮಾತು ಕೊಟ್ಟು, ಅನ್ಯಾಯ ಮಾಡುವುದು ಸರಿಯೆ?

ರಾಮ ಮಂದಿರ: ಸಿದ್ದರಾಮಯ್ಯ ಕುಟುಂಬ ನೆರವು 6

ಮಹಾರಾಷ್ಟ್ರ: ಕೋವಿಡ್ ತಡೆಗೆ ಮತ್ತಷ್ಟು ಬಿಗಿ ಕ್ರಮ 11

ಸೆನ್ಸೆಕ್ಸ್	ನಿಫ್ಟಿ	₹/$
49,744 ▼	14,676 ▼	72.49 ▲

ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ಒಕ್ಕಲಿಗ ಮೀಸಲಾತಿ ಶೇ 10 ಕ್ಕೆ ಹೆಚ್ಚಿಸಲು ಮನವಿ 6

ಇಂದಿನ ಪಾಡ್‌ಕಾಸ್ಟ್ ವಿಶೇಷ

ಸುದ್ದಿ ಸ್ವಾರಸ್ಯ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೋವಿಡ್ ನೆಗೆಟಿವ್ ವರದಿ ಕಡ್ಡಾಯ: ತಲಪಾಡಿ ಚೆಕ್‌ಪೋಸ್ಟ್ ಬಳಿ ಗೊಂದಲ

ಕೇರಳ ಗಡಿಯಲ್ಲಿ ಕಟ್ಟುನಿಟ್ಟು

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇರಳದಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲಾಡಳಿತವು ಕೇರಳದಿಂದ ರಾಜ್ಯಕ್ಕೆ ಬರುವವರಿಗೆ ಕೆಲವು ನಿರ್ಬಂಧಗಳನ್ನು ಹೇರಿದೆ. ಗಡಿ ಪ್ರದೇಶದ ನಾಗರಿಕರಿಂದ ಈ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ತಲಪಾಡಿಯಲ್ಲಿ ಆರೋಗ್ಯ ಅಧಿಕಾರಿಗಳು ಸೋಮವಾರ ಚೆಕ್‌ಪೋಸ್ಟ್ ಆರಂಭಿಸಿದ್ದಾರೆ. ಕೋವಿಡ್ ನೆಗೆಟಿವ್ ವರದಿ ಇರುವವರನ್ನು ಮಾತ್ರ ಗಡಿಯೊಳಗೆ ಬರಲು ಬಿಡುವುದರಿಂದ, ಕೇರಳದಿಂದ ನಗರಕ್ಕೆ ಬರುವ ವಿದ್ಯಾರ್ಥಿಗಳು, ನೌಕರರು, ರೋಗಿಗಳು ಹಾಗೂ ಪ್ರಯಾಣಿಕರು ಗೊಂದಲಕ್ಕೆ ಒಳಗಾದರು.

'ಆರ್‌ಟಿಪಿಸಿಆರ್ ವರದಿ ಕೈಯಲ್ಲಿದ್ದಲ್ಲಿ ಮಾತ್ರ ಮಂಗಳವಾರದಿಂದ ಕರ್ನಾಟಕ ಪ್ರವೇಶಕ್ಕೆ ಅವಕಾಶ ಇರುತ್ತದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಕ್ರೋಶ: ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಕಡ್ಡಾಯ ಮಾಡಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಗಡಿ ಭಾಗದ ಜನರು ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

11ನೇ ಪುಟ ನೋಡಿ

ತಲಪಾಡಿಯಲ್ಲಿ ಸೋಮವಾರ ಕೇರಳದಿಂದ ಮಂಗಳೂರಿಗೆ ಬರುವವರ ತಪಾಸಣೆ ನಡೆಸಲಾಯಿತು

ಮದುವೆ ಸಮಾರಂಭಕ್ಕೆ ಮಾರ್ಷಲ್ ನೇಮಕ

ಬೆಂಗಳೂರು: ಮದುವೆ ಸಮಾರಂಭಗಳಲ್ಲಿ ಕೋವಿಡ್ ಸುರಕ್ಷತಾ ಕ್ರಮ ಪಾಲಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸಲು ಇನ್ನು ಮುಂದೆ ಮಾರ್ಷಲ್‌ಗಳನ್ನು ನಿಯೋಜಿಸಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು. 11

ವರದಿ ಇಲ್ಲದಿದ್ದರೂ ಪ್ರವೇಶ

ಕಲಬುರ್ಗಿ: ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ, ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳ ಗಡಿಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರೆದು, ಮಹಾರಾಷ್ಟ್ರದಿಂದ ಬರುವವರನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ.

ಅಫಜಲಪುರ ತಾಲ್ಲೂಕಿನ ಮಾಶಾಳ ಚೆಕ್‌ಪೋಸ್ಟ್‌ನಲ್ಲಿ ಮಾತ್ರ ಕೋವಿಡ್ ನೆಗೆಟಿವ್ ವರದಿ ಇಲ್ಲದವರನ್ನು ವಾಪಸ್ ಕಳಿಸಲಾಯಿತು. ಉಳಿದಂತೆ ಹೆಚ್ಚಿನ ಕಡೆಗಳಲ್ಲಿ ವರದಿ ಇಲ್ಲದಿದ್ದರೂ ಜನರಿಗೆ ರಾಜ್ಯಕ್ಕೆ ಪ್ರವೇಶ ನೀಡಲಾಗಿದೆ.

'ಕಮಲನಗರ, ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪುರ ಹಾಗೂ ಔರಾದ್ ತಾಲ್ಲೂಕಿನ ವನಮಾರಪಳ್ಳಿ ಬಳಿ ಚೆಕ್‌ಪೋಸ್ಟ್ ಆರಂಭಿಸಲಾಗಿದೆ. ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವ ಬಸ್‌ಗಳ ಚಾಲಕ ಮತ್ತು ನಿರ್ವಾಹಕರ ತಪಾಸಣೆ ನಡೆಸಲಾಗುತ್ತಿದೆ' ಎಂದು ಬಸವ ಕಲ್ಯಾಣ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಪ್ರವೀಣ ಹೂಗಾರ ತಿಳಿಸಿದ್ದಾರೆ.

ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಖಜೂರಿ, ಹಿರೋಳಿ, ನಿಂಬಾಳ, ಅಫಜಲಪುರ ತಾಲ್ಲೂಕಿನ ಬಳೂರ್ಗಿ ಸಮೀಪದ ಚೆಕ್‌ಪೋಸ್ಟ್‌ಗಳಲ್ಲಿ, ಮಹಾರಾಷ್ಟ್ರದಿಂದ ಬರುವ ಪ್ರತಿಯೊಬ್ಬರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ.

ತೆಲಂಗಾಣದಿಂದ ರಾಜ್ಯಕ್ಕೆ ಬರುವವರ ತಪಾಸಣೆ ನಡೆಸುತ್ತಿಲ್ಲ. ತೆಲಂಗಾಣ ಗಡಿಯಲ್ಲಿ ಚೆಕ್‌ಪೋಸ್ಟ್ ತೆರೆಯುವಂತೆ ಸರ್ಕಾರದಿಂದ ನಿರ್ದೇಶನ ಬಂದಿಲ್ಲ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಸಮಿತಿ ರಚನೆಯ ದಿನಾಂಕ ಘೋಷಿಸಿ'

ಬೆಂಗಳೂರು: 'ಮೀಸಲಾತಿ ಬೇಡಿಕೆಗೆ ಸಂಬಂಧಿಸಿ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸುವ ದಿನಾಂಕವನ್ನು ಕೂಡಲೇ ಘೋಷಿಸಬೇಕು. ಎಷ್ಟು ದಿನದಲ್ಲಿ ಸಮಿತಿಯು ವರದಿ ನೀಡಲಿದೆ ಎಂಬುದನ್ನೂ ಸ್ಪಷ್ಟಪಡಿಸಬೇಕು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸೋಮವಾರ ಒತ್ತಾಯಿಸಿದರು. 6

ಹೆಚ್ಚುವರಿ ನೀರಿನ ಬಳಕೆಗೆ ಅವಕಾಶ ಇಲ್ಲ: ಬಿಎಸ್‌ವೈ

ಬೆಂಗಳೂರು: ಕಾವೇರಿ ನದಿಯ ಹೆಚ್ಚುವರಿ ನೀರಿನ ಬಳಕೆಗೆ ತಮಿಳು ನಾಡು ರೂಪಿಸಿರುವ ಯೋಜನೆಯ ಅನುಷ್ಠಾನಕ್ಕೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

7ನೇ ಪುಟ ನೋಡಿ

ಪುದುಚೇರಿ ಸರ್ಕಾರ ಪತನ

ಪುದುಚೇರಿ (ಪಿಟಿಐ): ಪುದುಚೇರಿಯಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವು ಸೋಮವಾರ ಪತನಗೊಂಡಿದೆ. ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತು ಮಾಡಲು ಸಾಧ್ಯವಾಗದೆ, ವಿ. ನಾರಾಯಣಸ್ವಾಮಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಅಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾಗುವ ಸಾಧ್ಯತೆ ಇದೆ. 7

ವರವರ ರಾವ್‌ಗೆ ಜಾಮೀನು

ಮುಂಬೈ: ಸಾಮಾಜಿಕ ಕಾರ್ಯಕರ್ತ ಮತ್ತು ಕವಿ ವರವರ ರಾವ್ ಅವರಿಗೆ ಆರೋಗ್ಯ ಪರಿಸ್ಥಿತಿಯ ಆಧಾರದ ಮೇಲೆ ಬಾಂಬೆ ಹೈಕೋರ್ಟ್ ಸೋಮವಾರ ಆರು ತಿಂಗಳು ಮಧ್ಯಂತರ ಜಾಮೀನು ನೀಡಿದೆ. 82 ವರ್ಷದ ರಾವ್ ಅವರ ಆರೋಗ್ಯ ಮತ್ತಷ್ಟು ಹದಗೆಡುವುದನ್ನು ನೋಡುತ್ತ 'ಮೌನ ವೀಕ್ಷಕನಾಗಲು' ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ. 11

ಮೆದುಳು ಜ್ವರ ದಿನ: ರೆಡ್ ಅಲರ್ಟ್

ಬೆಂಗಳೂರು: ವಿಶ್ವ ಮೆದುಳು ಜ್ವರ ದಿನಾಚರಣೆ ಅಂಗವಾಗಿ ನಗರದ ಹಲವು ಕಟ್ಟಡಗಳು ಸೋಮವಾರ ರಾತ್ರಿ ಕೆಂಪು ಬಣ್ಣದ ದೀಪಗಳಿಂದ ಬೆಳಗಿದವು.

ನಿಮ್ಹಾನ್ಸ್ ಸಂಸ್ಥೆಯ ಏಳು ಕಟ್ಟಡಗಳ ಮೇಲೆ ಎಚ್ಚರಿಕೆಯ ಸಂಕೇತವಾದ ಕೆಂಪು ಬಣ್ಣದ ದೀಪಗಳನ್ನು ಬೆಳಗಿಸುವ ಮೂಲಕ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ನಿಮ್ಹಾನ್ಸ್‌ನ ವೈರಾಣು ತಜ್ಞ ಡಾ. ವಿ. ರವಿ ಹೇಳಿದರು.

ವಿಕಾಸಸೌಧ, ವಿಧಾನಸೌಧ, ಹೈಕೋರ್ಟ್, ಆರೋಗ್ಯಸೌಧ, ಬಿಬಿಎಂಪಿ ಕಚೇರಿ, ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡಗಳ ಮೇಲೆ ಕೆಂಪು ಬಣ್ಣದ ದೀಪಗಳನ್ನು ಬೆಳಗಿಸಲಾಯಿತು.

‘ಕಳೆದ ವರ್ಷ 15 ಜನರಿಗೆ ಮೆದುಳು ಜ್ವರ ಕಾಣಿಸಿಕೊಂಡಿದ್ದು, ಯಾರು ಮೃತಪಟ್ಟಿಲ್ಲ. ಕೋವಿಡ್ ಲಾಕ್‌ಡೌನ್ ಇದ್ದ ಕಾರಣ ಸಾಂಕ್ರಾಮಿಕ ರೋಗಗಳು ಕಳೆದ ವರ್ಷ ಕಡಿಮೆ ವರದಿಯಾದವು’ ಎಂದು ಹೇಳಿದರು.

ರೈಲು ಗಾಲಿ ಕಾರ್ಖಾನೆ
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ. ಆರ್‌ಡಬ್ಲ್ಯುಎಫ್/ಡಬ್ಲ್ಯು/20–21/11 ದಿನಾಂಕ : 20–02–2021

ಇ–ಟೆಂಡರ್‌ಗಳು : ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಪ್ರಧಾನ ಇಂಜಿನಿಯರ್‌ರವರು ಕೆಳಗಿನ ಕೆಲಸಗಳಿಗಾಗಿ ವೆಬ್‌ಸೈಟ್ http://www.ireps.gov.in (works) ಮೂಲಕ ಆನ್‌ಲೈನ್‌ನಲ್ಲಿ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರ್ ಸಂಖ್ಯೆ ಮತ್ತು ವಿವರ	ಅಂದಾಜು ಮೌಲ್ಯ ರೂ.ಗಳಲ್ಲಿ
1	ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು–64 ರಲ್ಲಿ ಡಬ್ಲ್ಯು.496/ಆರ್‌ಡಬ್ಲ್ಯುಎಫ್/ವೈಎನ್‌ಕೆ/953. ವಾರ್ಷಿಕ ನಿರ್ವಹಣೆ. ಗಾಲಿ ಕಾರ್ಯಾಗಾರ 20–21 ಮತ್ತು ವಾರ್ಷಿಕ ನಿರ್ವಹಣೆ. ಗಾಲಿ ಕಾರ್ಯಾಗಾರ 20–21 (ಹಂತ–2).	₹ 19461099.51

ಮುಕ್ತಾಯದ ದಿನಾಂಕ ಮತ್ತು ಸಮಯ : 10–03–2021 ರಂದು 11.00 ಗಂಟೆ.
ವಿವರವಾದ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಕೆಳಕಂಡ ಟೆಂಡರ್‌ನ ರದ್ದತಿ
ಇ–ಟೆಂಡರ್ ಪ್ರಕಟಣೆ ಸಂಖ್ಯೆ. ಆರ್‌ಡಬ್ಲ್ಯುಎಫ್/ಡಬ್ಲ್ಯು/20–21/10 ದಿನಾಂಕ : 11–02–2021ರ ಕ್ರ.ಸಂ. 1 ವಾರ್ಷಿಕ ನಿರ್ವಹಣೆ ಕಾಮಗಾರಿಗಳು – ಗಾಲಿ ಕಾರ್ಯಾಗಾರ 2020–21 ನ್ನು ರದ್ದುಪಡಿಸಲಾಗಿದೆ.

ಉಪ ಪ್ರಧಾನ ಇಂಜಿನಿಯರ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ಆಯುಕ್ತರು (ಕಂದಾಯ)ರವರ ಕಛೇರಿ,
ನಗರ ಪಾಲಿಕೆ ಕಛೇರಿಗಳು, ಎನ್. ಆರ್. ಚೌಕ, ಬೆಂಗಳೂರು–560 002

ಸಂಖ್ಯೆ : ಜಆ(ಕಂ)/ಎನ್.ಎ/ಪಿ.ಆರ್/113,114,115,116&117 ದಿನಾಂಕ: 17.02.2021

ಪ್ರಕಟಣೆ

ನಗರದ ರಸ್ತೆಗಳು, ಕಾಲೋನಿ, ಸಮುದಾಯ ಭವನ, ರಂಗಮಂದಿರಗಳಿಗೆ ನಾಮಕರಣ ನಿರ್ಣಯಕ್ಕೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಆಹ್ವಾನ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಕೆಳಕಂಡ **ನಗರದ ರಸ್ತೆಗಳು, ಕಾಲೋನಿ, ಸಮುದಾಯ ಭವನ, ರಂಗಮಂದಿರಗಳಿಗೆ** ಈ ಕೆಳಕಂಡಂತೆ ನಾಮಕರಣ ಮಾಡಲು ತೀರ್ಮಾನಿಸಲಾಗಿದೆ.

1) ಸಂಖ್ಯೆ : ಜಆ(ಕಂ)/ಎನ್.ಎ/ಪಿಆರ್:113:2020–21, ದಿನಾಂಕ : 17.02.2021ರ ಅನ್ವಯ ವಾರ್ಡ್ ಸಂಖ್ಯೆ: 95ರ ವ್ಯಾಪ್ತಿಯ ಮಲ್ಲೇಶ್ವರಂ ಸಂಪಿಗೆ ಥಿಯೇಟರ್ ರಸ್ತೆಯ ಪಕ್ಕದಲ್ಲಿರುವ ಸೌತ್ ಎಂಡ್ ರಸ್ತೆಗೆ ಡಾ॥ ಬಿ. ಆರ್. ಅಂಬೇಡ್ಕರ್ ರವರ ಧರ್ಮಪತ್ನಿಯವರಾದ **“ಡಾ॥ ಸವಿತಾ ಅಂಬೇಡ್ಕರ್ ರಸ್ತೆ”**.

2) ಸಂಖ್ಯೆ : ಜಆ(ಕಂ)/ಎನ್.ಎ/ಪಿಆರ್:114:2020–21, ದಿನಾಂಕ : 17.02.2021ರ ಅನ್ವಯ ವಾರ್ಡ್ ಸಂಖ್ಯೆ: 115ರ ವನ್ನಾರಪೇಟೆ ವಾರ್ಡ್ ವ್ಯಾಪ್ತಿಯ ವಿವೇಕನಗರದ ಆಂಧ್ರ ಕಾಲೋನಿಗೆ **“ಶ್ರೀ ಜ್ಯೋತಿ ನಗರ”**.

3) ಸಂಖ್ಯೆ : ಜಆ(ಕಂ)/ಎನ್.ಎ/ಪಿಆರ್:115:2020–21, ದಿನಾಂಕ : 17.02.2021ರ ಅನ್ವಯ ವಾರ್ಡ್ ಸಂಖ್ಯೆ: 111ರ ಶಾಂತಲಾನಗರ ವಾರ್ಡ್ ವ್ಯಾಪ್ತಿಯ ಡಾ॥ ಬಿ. ಆರ್. ಅಂಬೇಡ್ಕರ್ ರಸ್ತೆಯಲ್ಲಿರುವ ಆಸ್ಟಿನ್ ಟೌನ್ ಸಮುದಾಯ ಭವನಕ್ಕೆ **“ಡಾ॥ ಬಿ. ಆರ್. ಅಂಬೇಡ್ಕರ್ ಸಮುದಾಯ ಭವನ”**.

4) ಸಂಖ್ಯೆ : ಜಆ(ಕಂ)/ಎನ್.ಎ/ಪಿಆರ್:116:2020–21, ದಿನಾಂಕ : 17.02.2021ರ ಅನ್ವಯ ವಾರ್ಡ್ ಸಂಖ್ಯೆ: 112ರ ದೊಮ್ಮಲೂರು ವಾರ್ಡ್‌ನ ರಂಗಮಂದಿರಕ್ಕೆ **“ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರಂಗಮಂದಿರ”**.

5) ಸಂಖ್ಯೆ : ಜಆ(ಕಂ)/ಎನ್.ಎ/ಪಿಆರ್:117:2020–21, ದಿನಾಂಕ : 17.02.2021ರ ಅನ್ವಯ ವಾರ್ಡ್ ಸಂಖ್ಯೆ: 110 ಸಂಪಂಗಿರಾಮನಗರದಲ್ಲಿರುವ ಆಸ್ತಿ ಸಂಖ್ಯೆ 18ರಿಂದ ರಿಚ್‌ಮಂಡ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಅಂದರೆ ವುಡ್‌ಲ್ಯಾಂಡ್ ಹೋಟೆಲ್ ಪಕ್ಕದಲ್ಲಿ ಹಾದುಹೋಗುವ ರಸ್ತೆಗೆ **“ಸಮ್ಮಿಟ್ ರಸ್ತೆ”**.

ಆದುದರಿಂದ ಸದರಿ ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ ನಾಮಕರಣ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನಗಳ ಒಳಗಾಗಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು–560 002, ರವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಸಹಿ/–
ಜಂಟಿ ಆಯುಕ್ತರು (ಕಂದಾಯ)

ದೊಡ್ಡ ಕಟ್ಟಡಗಳಲ್ಲಿ ಇ–ವಾಹನ ಚಾರ್ಜಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಮುಚ್ಚಯಗಳು ಸೇರಿದಂತೆ ದೊಡ್ಡ ಕಟ್ಟಡಗಳಲ್ಲಿ ಕಡ್ಡಾಯವಾಗಿ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್‌ಗೆ ವ್ಯವಸ್ಥೆಯನ್ನು ಹೊಂದಿರುವುದಕ್ಕೆ ಪೂರಕವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಹಾರ್ವರ್ಡ್ ಇಂಡಿಯಾ ಕಾನ್ಫರೆನ್ಸ್ ವತಿಯಿಂದ ಸೋಮವಾರ ಆಯೋಜಿಸಿದ್ದ ‘ಭವಿಷ್ಯದ ಸುಸ್ಥಿರ ಸಾರಿಗೆ’ ಕುರಿತ ವರ್ಚುವಲ್ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಲೆಕ್ಟ್ರಿಕ್ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದರ ಜತೆಯಲ್ಲಿ ಅವುಗಳ ಚಾರ್ಜಿಂಗ್‌ಗೂ ಪೂರಕ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಸುಧಾರಣೆ ತರಲು ಸಾಧ್ಯ’ ಎಂದರು.

ಮುಂದಿನ ದಿನಗಳಲ್ಲಿ ಬ್ಯಾಟರಿ ಆಧಾರಿತ ವಾಹನಗಳೂ ಮಾರುಕಟ್ಟೆಗೆ ಬರಲಿವೆ. ಬಾಡಿಗೆಗೆ ಬ್ಯಾಟರಿಗಳನ್ನು ಪಡೆದು ವಾಹನ ಚಲಾಯಿಸಲು ಅವಕಾಶ ದೊರಕಲಿದೆ. ಆಗ ಪೆಟ್ರೋಲ್ ಬಂಕ್‌ಗಳ ಮಾದರಿಯಲ್ಲಿ ಬ್ಯಾಟರಿ ಬಂಕ್‌ಗಳೂ ಆರಂಭವಾಗಲಿವೆ ಎಂದು ಹೇಳಿದರು.

ತಾಲ್ಲೂಕು ಪಂಚಾಯತಿ, ಕಾರ್ಯಾಲಯ, ಮಾಲೂರು

ಸಂಖ್ಯೆ: ತಾಪಂಮಾ/ಸಿಬ್ಬಂದಿ ಶಾಖೆ/ಹೊವಾಚಾನೇ/ಸಿಆರ್.01/2020–21 ದಿನಾಂಕ: 10.02.2021

ಅಲ್ಪಾವಧಿ ಟೆಂಡರ್

ಮಾಲೂರು ತಾಲ್ಲೂಕು ಪಂಚಾಯತಿಗೆ ಕಛೇರಿಯಲ್ಲಿ ಖಾಲಿ ಇರುವ 01 ವಾಹನ ಚಾಲಕ ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ರವರ ಪತ್ರದ ಸಂಖ್ಯೆ: ಜಿಪಂಕೋ: ಸಿಬ್ಬಂದಿ(9):ಸಿಆರ್.01/2020–21, ದಿನಾಂಕ: 27.01.2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ರವರ ಪತ್ರದನ್ವಯ 2020–21 ಮತ್ತು 2021–22ನೇ ಸಾಲಿನ ಮಾರ್ಚ್–2021ರಿಂದ ಫೆಬ್ರವರಿ–2022 ಅವಧಿಗೆ ತಾಲ್ಲೂಕು ಪಂಚಾಯತಿ ಮಾಲೂರು ಕಛೇರಿಯಲ್ಲಿ ಖಾಲಿ ಇರುವ 01 ಚಾಲಕ ಹುದ್ದೆಗೆ ವಾಹನ ಚಾಲಕರ ಸೇವೆಯನ್ನು ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ಅವಶ್ಯವಿರುತ್ತದೆ. ಆದುದರಿಂದ ಇಚ್ಛೆವುಳ್ಳ ನೋಂದಾಯಿತ ಸಂಸ್ಥೆಯವರು ಈ ಕೆಳಕಂಡ ಅರ್ಹತೆಗಳುಳ್ಳ ವಾಹನ ಚಾಲಕರ ಸೇವೆಯನ್ನು ಒದಗಿಸುವ ಸಂಬಂಧ ಪ್ರತಿ ಮಾಹೆಗೆ ತಗಲುವ ವೆಚ್ಚದ ಕುರಿತು ದಿನಾಂಕ: 25.02.2021ರ ಒಳಗಾಗಿ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಗಳನ್ನು ಸಾಯಂಕಾಲ 5.30 ಗಂಟೆ ಒಳಗಾಗಿ ತಾಲ್ಲೂಕು ಪಂಚಾಯತಿ ಕಛೇರಿಗೆ ಅಂಚೆ ಅಥವಾ ಮುದ್ದಾಂ ಮೂಲಕ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗೆ ತಾಲ್ಲೂಕು ಪಂಚಾಯತ್ ಕಾರ್ಯಾಲಯದ ವ್ಯವಸ್ಥಾಪಕರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಅಭ್ಯರ್ಥಿಯ ಅಗತ್ಯ ಅರ್ಹತೆಗಳು: (1) ಅಭ್ಯರ್ಥಿಯು ಮೋಟಾರು/ಕಾರುಗಳಿಗೆ ಮಾನ್ಯ ಚಾಲನಾ ಪರವಾನಗಿ ಹೊಂದಿರಬೇಕು. (2) ಅಭ್ಯರ್ಥಿಯು ಮೋಟಾರು/ಕಾರುಗಳ ಕಾರ್ಯವಿಧಾನದ ಜ್ಞಾನ ಮತ್ತು ವಾಹನದಲ್ಲಿನ ಸಣ್ಣ ದೋಷಗಳನ್ನು ಸರಿಪಡಿಸಬೇಕು. (3) ಅಭ್ಯರ್ಥಿಯು ಕಳೆದ ಮೂರು ವರ್ಷಗಳಲ್ಲಿ ಮೋಟಾರು/ಕಾರುಗಳ ಚಾಲನೆ ಮಾಡಿದ ಅನುಭವ ಇರಬೇಕು. (4) ಅಭ್ಯರ್ಥಿಯು ಮಾನ್ಯತೆ ಪಡೆದ ಮಂಡಳಿಯಿಂದ 10ನೇ ತರಗತಿ ಉತ್ತೀರ್ಣರಾಗಿರಬೇಕು. (5) ದರಪಟ್ಟಿ ಸಲ್ಲಿಸುವ ಸಂಸ್ಥೆಯು ಜಿ.ಎಸ್.ಟಿ. ನಂ. ಹೊಂದಿರಬೇಕು ಮತ್ತು ಚಾಲ್ತಿಯಲ್ಲಿರಬೇಕು. (6) ದರಪಟ್ಟಿ ಸಲ್ಲಿಸುವ ಸಂಸ್ಥೆಯು 03 ವರ್ಷ ಐ.ಟಿ. ರಿಟರ್ನ್ಸ್ ದರಪಟ್ಟಿಯೊಂದಿಗೆ ಸಲ್ಲಿಸಬೇಕು. (7) ದರಪಟ್ಟಿ ಸಲ್ಲಿಸುವ ಸಂಸ್ಥೆಯು ಒಂದು ವರ್ಷದ ಅನುಭವ ಪ್ರಮಾಣ ಪತ್ರವನ್ನು ದರಪಟ್ಟಿಯೊಂದಿಗೆ ಸಲ್ಲಿಸಬೇಕು. (8) ದರಪಟ್ಟಿ ಅಂಗೀಕಾರ/ಅಂತಿಮ ನಿರ್ಧಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಲೂರು ರವರ ಅಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾಲೂರು
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 406/ಎಂಸಿಎ/2020–21

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಮಾನ ನಿಲ್ದಾಣದಲ್ಲಿ ಡಿಸಿಎಂ ಕಾಮಗಾರಿ ವೀಕ್ಷಣೆ

ರನ್‌ವೇ: ತಿಂಗಳಾಂತ್ಯಕ್ಕೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹಳೇ ರನ್‌ವೇ ಪುನರ್ ನಿರ್ಮಾಣ ಕಾಮಗಾರಿ ಇದೇ ತಿಂಗಳ ಕೊನೆಗೆ ಮುಗಿಯಲಿದೆ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲನೆ ನಡೆಸಿದ ಅವರು, ‘ಕಾಮಗಾರಿ ಬಹುತೇಕ ಮುಗಿಯುತ್ತಾ ಬಂದಿದ್ದು, ಅಂತಿಮ ಹಂತದ ಕೆಲಸಗಳು ನಡೆಯುತ್ತಿವೆ’ ಎಂದು ಹೇಳಿದರು.

ಸದ್ಯ ಹೊಸ ರನ್‌ವೇನಲ್ಲಿಯೇ ವಿಮಾನಗಳ ಸಂಚಾರ ನಡೆಯುತ್ತಿದೆ. ಮುಂದಿನ ತಿಂಗಳ ಅಂತ್ಯದಿಂದ ಪುನರ್ ನಿರ್ಮಾಣವಾದ ಹಳೆಯ ರನ್‌ವೇನಲ್ಲೂ ವಿಮಾನ ಸಂಚಾರ ಆರಂಭವಾಗಲಿದೆ. ಮುಂಬೈನ ಎಐಸಿ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ಈ ಯೋಜನೆಯನ್ನು ₹260 ಕೋಟಿ ವೆಚ್ಚದಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ನಿರ್ಮಿಸಿದೆ ಎಂದು ಅವರು ವಿವರಿಸಿದರು.

ರನ್‌ವೇ 4 ಕಿ.ಮೀ ಉದ್ದವಿದ್ದು, ರನ್‌ವೇ ಮಧ್ಯದಲ್ಲೂ ಈಗ ವಿದ್ಯುದ್ದೀಪಗಳನ್ನು ಅಳವಡಿಸಲಾಗಿದೆ. ಇದರಿಂದ ವಿಮಾನಗಳ ಸಂಚಾರಕ್ಕೆ ಹೆಚ್ಚು ಅನುಕೂಲ ಆಗುತ್ತದೆ. ಜತೆಗೆ ಟ್ಯಾಕ್ಸಿ ವೇ ಹಾಗೂ ಒಳಚರಂಡಿ, ಏರ್‌ಫೀಲ್ಡ್ ಬೆಳಕಿನ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ಅವರು ಹೇಳಿದರು.

ಈ ರನ್‌ವೇ ಕಾರ್ಯಾರಂಭವಾದ ಮೇಲೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಒಟ್ಟು ಎರಡೂ ರನ್‌ವೇಗಳ ಮೂಲಕ ವರ್ಷಕ್ಕೆ 6 ರಿಂದ 7 ಕೋಟಿ ಪ್ರಯಾಣಿಕರನ್ನು ನಿಭಾಯಿಸಬಲ್ಲದು. ಇದರಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಉತ್ತಮ ಲಾಭವಾಗಲಿದೆ ಎಂದು ಉಪಮುಖ್ಯಮಂತ್ರಿ ತಿಳಿಸಿದರು.

ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ರನ್‌ವೇ ಕಾಮಗಾರಿ ವೀಕ್ಷಿಸಿದರು.

ಮುಖ್ಯಾಂಶಗಳು
- 4 ಕಿ.ಮೀ.ಉದ್ದದ ಹಳೆಯ ರನ್‌ವೇ
- ₹ 260 ಕೋಟಿ ವೆಚ್ಚದಲ್ಲಿ ಕಾಮಗಾರಿ
- ಎರಡೂ ರನ್‌ವೇಯಿಂದ ವರ್ಷಕ್ಕೆ 7 ಕೋಟಿ ಪ್ರಯಾಣಿಕರ ನಿರ್ವಹಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ರಾಮನಗರ
ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ದೂ : 080–29573912

ಸಂ : ಶಿಅಯೋ/ರಾ/ಜ.ಹ/ಇ–ಟೆಂಡರ್/2020–21 ದಿನಾಂಕ: 20–02–2021

ಟೆಂಡರ್ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಮನಗರ ಜಿಲ್ಲೆಯ ತಾಲ್ಲೂಕು ರಾಮನಗರ ಶಿಶು ಅಭಿವೃದ್ಧಿ ಯೋಜನೆ ಅಡಿಯಲ್ಲಿ 355 ಅಂಗನವಾಡಿಗಳಿಗೆ ಮತ್ತು ಕಚೇರಿಯ ಉಪಯೋಗಕ್ಕಾಗಿ (1) 361 ರ್‍ಯಾಕ್ಸ್, (Crc sheet 4 sheet Multipurpose storage Rack with Adgatable 24 Gauge, 48*36*12inches, 91.4*30.5*121.9 cms, Approx 9kgs, Free standing Rectangle shape, 8liters) **(2) 3 ಆಫೀಸರ್ಸ್ ಛೇರ್ಸ್,** (Seat & back assembly, 45*6 kg/M3, 990 MM * 880 MM* 899MM, 360 degree rotation) **(3) 3 ಆಫೀಸರ್ಸ್ ಟೇಬಲ್ಸ್,** (1800*900*740, 25 MM thinness, Box drawers and filing drawers Drawers tray of 0.6 MM thickness, Drawers Separation 0.6 MM thickness) **(4) 6 ಕಂಪ್ಯೂಟರ್ ಟೇಬಲ್ಸ್,** (900*500*750, 18 MM thinness, Key Board Traly Attached, 10 kg load baring, 200MM * 400 MM * 500 MMM) **(5) 4 ಬೀರು,** (19*36*78 self, 5 Compartment, 6½ Height, 76.5 cm, 20-22 gauge steel sheets) **(6) 1 ವಾಟರ್ ಪ್ಯೂರಿಫೈಯ್,** (8 liters, wall mountable, RO+UV+UF+TDS Control+UV in Tank, 20, CPH Waters Purifier) ಈ ಸಾಮಾಗ್ರಿಗಳನ್ನು ಖರೀದಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **18.02.2021** ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸಂಬಂಧಪಟ್ಟ ಟೆಂಡರ್‌ದಾರರು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಖ್ಯೆ: DWCD/2020-21/Ind1469, **http://eproc.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ ಟೆಂಡರ್‌ದಾರರು ದಿನಾಂಕ: **10.03.2021** ರಂದು ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **http://eproc.karnataka.gov.in** ವೆಬ್‌ಸೈಟ್‌ಗೆ ಸಂಪರ್ಕಿಸಲು ಕೋರಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ
ರಾಮನಗರ, ರಾಮನಗರ ಜಿಲ್ಲೆ
ಹಿಸನಿ/ವಾಸಸಂಇ/ರಾನ/460/ಯಕ್ಷಿ/2020–21

ನಗರದಲ್ಲಿ ಇಂದು

ಯುನಾನಿ ದಿನಾಚರಣೆ ಅಂಗವಾಗಿ **‘ಕೋವಿಡ್ ಕಾಲದಲ್ಲಿ ಯುನಾನಿ ವೈದ್ಯ ಪದ್ಧತಿಗೆ ಅವಕಾಶ, ಸವಾಲುಗಳು’ ವಿಚಾರ ಸಂಕಿರಣ ಹಾಗೂ ಕೋವಿಡ್ ಸೇನಾನಿಗಳಿಗೆ ಅಭಿನಂದನೆ:** ಅತಿಥಿಗಳು–ಜಾವೇದ್ ಅಖ್ತರ್, ಮೀನಾಕ್ಷಿ ನೇಗಿ, ಬಿ.ಎಸ್.ಶ್ರೀಧರ್, ಶೈಲಜಾ, ಅಧ್ಯಕ್ಷತೆ–ರಾಮಚಂದ್ರ, ಆಯೋಜನೆ–ಆಯುಷ್ ಇಲಾಖೆ, ಸ್ಥಳ–ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10

ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಪ್ರೌಢ ಪರೀಕ್ಷಾ ಮಂಡಳಿಯ ‘ಯಶೋಗಾಥೆ’ ಪುಸ್ತಕ, ‘ವಿದ್ಯಾಸಂಜೀವಿನಿ’ ಹಾಗೂ ‘ಡಿಜಿಟಲ್ ಕ್ರಾಂತಿ ಕಿರಣ’ ಸಾಕ್ಷ್ಯಚಿತ್ರ ಬಿಡುಗಡೆ: –ಎಸ್.ಸುರೇಶ್ ಕುಮಾರ್, ಸ್ಥಳ–ಸಮಗ್ರ ಶಿಕ್ಷಣ ಕರ್ನಾಟಕ ಸಭಾಂಗಣ, ಹೊಸ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಟ್ಟಡಗಳು, ನೃಪತುಂಗ ರಸ್ತೆ, ಮಧ್ಯಾಹ್ನ 2.30

ಇಮ್ಯುನೊಥೆರಪಿ ಕುರಿತು ವಿಚಾರ ಸಂಕಿರಣ: ಉದ್ಘಾಟನೆ–ಸಿ.ರಾಮಚಂದ್ರ, ಮಾತನಾಡುವವರು–ಲೋಕನಾಥ್, ಅರುಣ್ ಕುಮಾರ್, ವಸುಧಾ ರಾವ್, ಅಶ್ವಿನಿ, ಆಯೋಜನೆ–ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್, ಭಾರತೀಯ ವಿದ್ಯಾಭವನ, ಕಿದ್ವಾಯಿ, ಸ್ಥಳ–ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಚಿತ್ರಕಲಾ ಪ್ರದರ್ಶನ: ಆಯೋಜನೆ–ಐಕ್ಯ, ಸ್ಥಳ–ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11ರಿಂದ ಸಂಜೆ 6

ದಾವಣಗೆರೆಯ ಆವರಗೆರೆಯಲ್ಲಿರುವ ನಾಗೇಶ್ವರ ಪಾರ್ಶ್ವ ಭೈರವ ಜೈನ ದೇವಾಲಯದಲ್ಲಿ ಸನ್ಯಾಸ ದೀಕ್ಷೆ ಸ್ವೀಕರಿಸಲು ವರ್ಧಿಚಂದ್ ಜೀ ಅವರ ಕುಟುಂಬದ ಸದಸ್ಯರು ವೇದಿಕೆಯತ್ತ ಬಂದರು. – ಪ್ರಜಾವಾಣಿ ಚಿತ್ರ / ಸತೀಶ ಬಡಿಗೇರ್

ಜೈನ ಸನ್ಯಾಸಿಗಳಾದ ಒಂದೇ ಕುಟುಂಬದ ಐವರು

ದಾವಣಗೆರೆ: ಒಂದೇ ಕುಟುಂಬದ ಮೂರು ತಲೆಮಾರಿನ ಐವರು ಸದಸ್ಯರು ಸೇರಿ ಆರು ಜನರು ಇಲ್ಲಿನ ಆವರಗೆರೆಯಲ್ಲಿರುವ ನಾಗೇಶ್ವರ ಪಾರ್ಶ್ವ ಭೈರವ ಜೈನ ದೇವಾಲಯದಲ್ಲಿ ಸೋಮವಾರ ಮುಂಜಾನೆ ಜೈನ ಸನ್ಯಾಸ ದೀಕ್ಷೆ ಪಡೆದರು.

ನಗರದ ವರ್ಧಿಚಂದ್ ಜೀ (75), ಪುತ್ರ ಅಶೋಕ್ ಕುಮಾರ್ ಜೈನ್ (47), ಸೊಸೆ ಭಾವನಾ ಅಶೋಕ್ ಜೈನ್ (45) ಮೊಮ್ಮಕ್ಕಳಾದ ಪಕ್ಷಾಲ್ ಜೈನ್ (17) ಮತ್ತು ಜಿನಾಂಕ್ ಕುಮಾರ್ ಜೈನ್ (15) ಜೊತೆಗೆ ಚೆನ್ನೈನ ಲಕ್ಷಕುಮಾರ್ ಜೈನ್ (23) ಅವರೂ ಜೈನ ಧರ್ಮದ ಸನ್ಯಾಸಿಗಳಾದರು.

ಆಚಾರ್ಯ ವಿಜಯ ಉದಯ್ ಪ್ರಭ್ ಸುರೀಶ್ವರಜೀ ಅವರು ಪ್ರತಿಜ್ಞಾವಿಧಿ ಬೋಧಿಸುವ ಮೂಲಕ ದೀಕ್ಷೆ ನೀಡಿದರು. ಇದಕ್ಕೂ ಮೊದಲು ಭಾನುವಾರ ರಾತ್ರಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು. ಎಲ್ಲರಿಗೂ ವೈರಾಗ್ಯ ಭಾವನೆ ಮೂಡಲಿ ಎಂಬುದು ಇದರ ಉದ್ದೇಶವಾಗಿತ್ತು.

‘ದೀಕ್ಷೆ ಸ್ವೀಕರಿಸುವ ಮೊದಲು ಅವರ ಸ್ಥಿರ ಆಸ್ತಿಯನ್ನು ದಾನ ಮಾಡಿದರು’ ಎಂದು ಸಮಾಜದ ಗೌತಮ್ ಜೈನ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ವಿಧಾನಸೌಧ ಚಲೋ

ಬೆಂಗಳೂರು: ರೈತರ ಅಭಿವೃದ್ಧಿ ಪ್ರಾಧಿಕಾರ ರಚನೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರೈತರ ಹಿತರಕ್ಷಣಾ ವೇದಿಕೆ ವತಿಯಿಂದ ಫೆ.24 ಮತ್ತು 25 ರಂದು ಪಾದಯಾತ್ರೆ ಮೂಲಕ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಅಧ್ಯಕ್ಷ ಗುಡ್ಡೇಗೌಡ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,‘ ಫೆ.24ರಂದು ಮಧ್ಯಾಹ್ನ 12 ಗಂಟೆಯಿಂದ ಮಾಗಡಿಯಿಂದ ಪಾದಯಾತ್ರೆ ಹೊರಡಲಿದೆ. 25 ರಂದು ಬೆಳಿಗ್ಗೆ 9 ಗಂಟೆಗೆ ಸ್ವಾತಂತ್ರ್ಯ ಉದ್ಯಾನ ತಲುಪಿ, ವಿಧಾನಸೌಧಕ್ಕೆ ತೆರಳುವ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು’ ಎಂದರು.

‘ಅಂಗನವಾಡಿಗೆ ಸ್ಥಳ ನೀಡಿ’

ಬೆಂಗಳೂರು:ವೈಟ್‌ಫೀಲ್ಡ್‌ನ ವಿಜಯನಗರದಲ್ಲಿರುವ ಅಂಗನವಾಡಿ ಕಟ್ಟಡಕ್ಕೆ ಹೊಂದಿಕೊಂಡಂತೆ ಇರುವ ಖಾಲಿ ಜಾಗದಲ್ಲಿ ರಸ್ತೆ ವಿಸ್ತರಣೆ ಮಾಡಲಾಗುತ್ತಿದ್ದು, ಇದಕ್ಕೆ ತಡೆ ನೀಡಿ ಆ ಜಾಗವನ್ನು ಅಂಗನವಾಡಿಗೆ ಬಿಟ್ಟುಕೊಡಬೇಕು ಎಂದು ಸಾಮಾಜಿಕ ಕಾರ್ಯಕರ್ತೆ ಎನ್.ಸುಬ್ಬಮ್ಮ ಬಿ.ಅಶ್ವಥಯ್ಯ ಮನವಿ ಮಾಡಿದರು.

ಆಯೋಗದಿಂದ ವರದಿ: ಬೊಮ್ಮಾಯಿ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವ ಸಂಬಂಧ ಹಿಂದುಳಿದ ವರ್ಗಗಳ ಆಯೋಗ ಅಧ್ಯಯನ ನಡೆಸಿ ವರದಿ ಕೊಡಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಹಿಂದುಳಿದ ವರ್ಗಗಳ ಆಯೋಗ ಅರೆ ನ್ಯಾಯಿಕ ಸಂಸ್ಥೆ. ಆಯೋಗವೂ ತನ್ನದೇ ಆದ ರೀತಿಯಲ್ಲಿ ಅಧ್ಯಯನ ನಡೆಸಿ ಕ್ರಮ ಬದ್ಧವಾಗಿ ವರದಿ ಕೊಡಲಿದೆ. ಮೀಸಲಾತಿ ಯಾವಾಗ ಕೊಡಬೇಕು ಎನ್ನುವುದನ್ನೂ ಆಯೋಗವೇ ನಿರ್ಧಾರ ಮಾಡುತ್ತದೆ ಎಂದು ತಿಳಿಸಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್
NABARD **NATIONAL BANK FOR AGRICULTURE AND RURAL DEVELOPMENT**
“ನಬಾರ್ಡ್ ಟವರ್”, ನಂ.46, ಕೆಂಪೇಗೌಡ ರಸ್ತೆ, ಪಿ.ಬಿ. ಸಂ.9944, ಬೆಂಗಳೂರು - 560 009
ದೂರವಾಣಿ : +91 80 2207 6561
ಇ ಮೇಲ್: dpsp.bangalore@nabard.org

ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ, ಕೆ ಜಿ ರಸ್ತೆ, ಬೆಂಗಳೂರು ಇಲ್ಲಿನ ಸೌಲಭ್ಯ ನಿರ್ವಹಣೆ, ಭದ್ರತಾ ಸಿಬ್ಬಂದಿ ಸೇವೆಗಳು ಮತ್ತು ಗಾಜಿನ ಮುಂಭಾಗ ಶುಚಿಗೊಳಿಸುವ ಕಾಮಗಾರಿಗೆ ವಾರ್ಷಿಕ ನಿರ್ವಹಣಾ ಗುತ್ತಿಗೆಗೆ ಟೆಂಡರ್ ಆಹ್ವಾನ ಪ್ರಕಟಣೆ

ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ ಇವರು 01.04.2021 ರಿಂದ 31.03.2023 ಅವಧಿಗೆ ಕೆಳಕಂಡ ಕಾಮಗಾರಿಗಳ ವಾರ್ಷಿಕ ನಿರ್ವಹಣಾ ಗುತ್ತಿಗೆ (ಎಎಮ್‌ಸಿ) ಕಾಮಗಾರಿಗಾಗಿ ಪ್ರತಿಷ್ಠಿತ ಹಾಗೂ ಅನುಭವಿ ಗುತ್ತಿಗೆದಾರರಿಂದ/ಸಂಬಂಧಿತ ಕ್ಷೇತ್ರದಲ್ಲಿನ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

1. ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ ಪ್ರಾಂಗಣ ಇಲ್ಲಿನ ಒಟ್ಟಾರೆ ಸೌಲಭ್ಯಗಳ ನಿರ್ವಹಣೆ ಮತ್ತು ಹೌಸ್‌ಕೀಪಿಂಗ್ ಸೇವೆಗಳು – ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 15.03.2021 ರಂದು 14.00 ಗಂಟೆ.
2. ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿಗೆ ಮತ್ತು ಬೆಂಗಳೂರಿನಲ್ಲಿರುವ ವಿವಿಧ ಸಿಬ್ಬಂದಿ ವಸತಿಗೃಹಗಳಿಗೆ ಶಸ್ತ್ರರಹಿತ ಭದ್ರತಾ ಸಿಬ್ಬಂದಿ ಸೇವೆಗಳು –ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 15.03.2021 ರಂದು 14.00 ಗಂಟೆ.
3. ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ ಕಟ್ಟಡದಲ್ಲಿನ ಹೊರಭಾಗದ ಗಾಜು ಮತ್ತು ಆಲ್ಕೊ ಪ್ಯಾನಲ್ (ಗಾಜಿನ ಮುಂಭಾಗ) ಶುಚಿಗೊಳಿಸುವ ಕಾಮಗಾರಿ – ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 10.03.2021 ರಂದು 14.00 ಗಂಟೆ.

ಆಸಕ್ತಿಯುಳ್ಳ ಗುತ್ತಿಗೆದಾರರು/ಸಂಸ್ಥೆಗಳು ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಮ್ಮ www.nabard.org ವೆಬ್‌ಸೈಟ್‌ಗೆ ಮತ್ತು ಸೆಂಟ್ರಲ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಿಪಿಪಿ) ಜಾಲತಾಣಕ್ಕೆ ಭೇಟಿ ನೀಡಬಹುದು.

ELCITA
TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore: 560 100 has invited tenders as detailed below:

Sl.No	Tender name	Tender number	Last date to apply	Closing timings
1	Engineering and Construction of civil works for 1.6 MLD Capacity STP based on Membrane Bio Reactor (MBR) Technology at Electronic City	ELCITA/UDD/2020-21/OW/WORK_INDENT 1270	20/03/2021	5:00 PM
2	Design, Supply, Erection, commissioning of Electromechanical works for 1.6MLD capacity STP based on Membrane Bio Reactor(MBR) Technology including Trial Runs for 3 Months plus Operation and Maintenance for 1 year at Electronic City	ELCITA/UDD/2020-21/OW/WORK_INDENT 1298	20/03/2021	5:00 PM

Details of the Tenders can be downloaded from the e-procurement website eproc.karnataka.gov.in under **Urban Development Department-Electronics city Industrial Township Authority. Also details are available in www.elcita.in**
For queries Contact : 080-4660 2222 / write to : coo@elcita.in
Electronics City Industrial Township Authority (ELCITA)
7 (P), West Phase, Electronics City, Bangalore : 560 100
Website : www.elcita.in
Phone : 080-4660 2222

PUBLIC NOTICE
To Place your Classified Ads Contact:
9880856233

KARNATAKA ENGINEERS ACADEMY
C.A. Site No.1, 8th Main, 2nd Crs, Kamalanagar, Bengaluru-79
Ph: 080-23232294. e-mail: admin@engineersacademy.co
No. KEA/Sola/73/2020-21
TENDER NOTICE
The Secretary invite the tender on behalf of Karnataka Engineers Academy at Kamala nagar, Bengaluru-79 from eligible Bidders for Engineering, **Design, Supply, Installation & Commission & Comprehensive Operation & Maintenance** For 5 Years of 100kwp Grid tied Solar Roof -top PV plant, on the roof-top of the KEA Buildings, under Net-metering scheme, as per the Scope, of the work and the terms and condition indicated in the Tender Document. Soft copy of the bid documents containing the terms & conditions of the contract, qualifying requirement and eligibility criteria of bidders, scope of the services to be provide etc, may be downloaded from the website: http://www.engineersacademy.co/
Calendar of Events:
1. Tender documents can be downloaded from Karnataka Engineers Academy official website http:// www.engineersacademy.co/ from 24th FEB 2021.
2. Bid Security (EMD) for an amount of Rs. 1,00,000/- (Rupees One lakhs only). D.D in the favour of Secretary K.E.A.
3. Last date for submission of tenders through registered post/speed on post/courier: or before 08.03.2021 at 4.00 PM. No hand delivery will be consider for submission of tender
4. Bid opening 10.03.2021 at 11:00A.M
5. Time for completion – 3months from the LOI
Further information, please contact helpdesk Mobile No: 9845163619, 9448057634. The KEA Management reserves the right to alter, modify, withdraw part or full scope of Tender without assigning any reason what so ever and the decision of the Board will be final.
Er. Ramachandamurthy S. M
Secretary, KEA
Date:- 19.02.2021

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

BUSINESS

Business to Business

Business

GET 24% Annual ROI in Your Own Trading/ Demat Account. Capital Required Min 3Lakhs. Call: 7872221837

Finance

NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

Business Offers

Business For Sale

GIFT SHOP For Sale, Near Muddalpallya Circle (Nagarabhavi Main Road) Size 11x16 Rent. 15000/- Good For Medical/ Cloth Shop: 9739407265

General

WELL ESTABLISHED AGRI Business for sale with E-Commerce website @Davanagere. DK Conslultancy 7676388918

JOB OPPORTUNITIES

General

REQUIRED HR Admin, Manager, Accounts, BE, Diploma, B-Tech, M-Tech, MSc, Mechanical, Electrical, Computer Engineers: 7676760299

PERSONAL

Change of Name

I, SANTABAI (Old Name) mother of No JC-413722Y SUB Ranmale Raju Maruti residing at The Parachute Regt Trg Center JC Nagar Bangalore- 06, have changed my name to HIRABAI MARUTI RANMALE (New Name) vide affidavit dated 12/02/2021 sworn before notary G.B. Turamari, Bangalore

SIDDAPPA F/O 14833910L- Sep- BASAPPA S TOLAMARDI R/a Waderahatti, Gokak, Belagavi, Karnataka, changed name from SIDDAPPA to SIDDAPPA TOLAMARDI notary Harisha G Bangalore.

NINGAVVA M/O 14833910L- Sep- BASAPPA S TOLAMARDI R/a Waderahatti, Gokak, Belagavi, Karnataka, changed name from NINGAVVA to NINGAVVA SIDDAPPA TOLAMARDI notary Harisha G Bangalore.

RINU BAI W/o. 6497943Y, SEP/ASH, Ram Singh, Vill/Post: Gawakheda Ashta Sehore, MP, my name RINU BAI to RINKU BAI, notary K.V Mani, Bangalore.

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

Accommodation Wanted

Commercial

WANTED OFFICE for Rent in Madekeri market,ground floor (Approx 25 to 35Sqft) Contact: 7066540011/ 8640866660

ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿ.
ನೋಂದಾಯಿತ ಕಛೇರಿ: ಹೆಚ್. ನಂ. 123, ಅನಗಪ್ಪ ನಾಯಗನ್ ಸ್ಟ್ರೀಟ್, ಚೆನ್ನೈ–600001.
ಆಡಳಿತ ಕಛೇರಿ, #259/31, 1ನೇ ಮಹಡಿ, ಅಕ್ಷೋದಯ ಕಟ್ಟಡ, ಹೊಂಬೇಗೌಡ ಬಾಯ್ಸ್ ಹೈಸ್ಕೂಲ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–560027,ದೂ: 080–42451699 / 90717 76501
SHRIRAM City – MONEY WHEN YOU NEED IT MOST

ಚಿನ್ನಾಭರಣ ಹರಾಜು ಹಾಗೂ ಆಹ್ವಾನ ಸೂಚನಾ ಪತ್ರ

ಈ ಕೆಳಕಂಡ ಗ್ರಾಹಕರು ತಾವು ಬಾಕಿ ಉಳಿಸಿಕೊಂಡಿರುವ ಚಿನ್ನಾಭರಣಗಳ ಸಾಲದ ಸೌಲಭ್ಯ (ಸೌಲಭ್ಯ) ವನ್ನು ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. (ಎಸ್‌ಸಿಯುಎಫ್) ಯವರು ತೀರಿಸಲು ಸೂಚನಾ ಪತ್ರಗಳನ್ನು ಕಳುಹಿಸಿದ್ದರೂ ಕೂಡ ಬಾಕಿ ತೀರಿಸಲು ವಿಫಲರಾಗಿರುವುದರಿಂದ ಗ್ರಾಹಕರು ಅಡಮಾನ ಮಾಡಿದಂತಹ ಚಿನ್ನಾಭರಣಗಳು ಹರಾಜು ಪ್ರಕ್ರಿಯೆಯಲ್ಲಿ ನಾವು **12–03–2021** (ಹರಾಜು ದಿನಾಂಕ) ದಿನಾಂಕದಂದು ಮಾಡುತ್ತಿದ್ದೇವೆ. ಸದರಿ ಹರಾಜಿನ ಮೂಲಕ ಬಂದ ಹಣವನ್ನು ಒಂದು ವೇಳೆ ನಮಗೆ ಬರಬೇಕಾದ ಎಲ್ಲಾ ಬಾಕಿಗಳನ್ನು ಸರಿದೂಗಿಸಿ ಹೆಚ್ಚಿನ ಹಣ ಉಳಿದಲ್ಲಿ ಸಂಬಂಧಪಟ್ಟ ಗ್ರಾಹಕರಿಗೆ ಹಿಂದಿರುಗಿಸಲಾಗುವುದು ಮತ್ತು ಹರಾಜು/ಮಾರಾಟವಾದ ನಂತರವೂ ಬಂದ ಹಣ ತಮ್ಮ ಸಾಲದ ಒಟ್ಟು ಮೊತ್ತಕ್ಕಿಂತ ಕಡಿಮೆಯಾದಲ್ಲಿ ಬರಬೇಕಾದ ಬಾಕಿ ಹಣಕ್ಕಾಗಿ ಸೂಕ್ತ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. **ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್** ಲಿ. ರವರು ಈ ಕೆಳಕಂಡ ಗ್ರಾಹಕ ಖಾತೆಗಳ ಪಟ್ಟಿಯಲ್ಲಿ ಯಾವುದೇ ಒಂದು ಅಥವಾ ಕೆಲವು ಖಾತೆಗಳನ್ನು ಮುನ್ಸೂಚನೆಯಿಲ್ಲದೆ ತೆಗೆದು ಹಾಕುವ ಅಧಿಕಾರ ಹೊಂದಿರುತ್ತಾರೆ. ಮುಂದುವರಿದು ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. ರವರು ಹರಾಜು ಪ್ರಕ್ರಿಯೆ ದಿನಾಂಕವನ್ನು ನಿರೀಕ್ಷಿಸಲು ಸಾಧ್ಯವಾಗದ ಸಂದರ್ಭದಲ್ಲಿ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಜೆ.ಪಿ ನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಅಸ್ಗರ್ ಪಾಷಾ	QJPNGPJ2006060008	ಎಂ ಎನ್ ಸುಮಾ	QJPNGPJ1910190006	ನವ್ಯಾಶ್ರೀ	QJPNGPJ2006180001
ಅಜ್ಜರ್ ಷರೀಫ್	QJPNGPJ2003200001	ಎಂ ಎನ್ ಸುಮಾ	QJPNGPJ1910190007	ರಬಿಕ್ ರಾಜ್ ಎ	QJPNGPJ1906170006
ಜಗದೀಶ್ ಸೋನಿ	QJPNGPJ2006110009	ಎಂ ಎನ್ ಸುಮಾ	QJPNGPJ1910190008	ರಬಿಯಾ ಬಸ್ರಿ	QJPNGPJ2003050010
ಎಂ ಎನ್ ಸುಮಾ	QJPNGPJ2001200013	ಎಂ ಎನ್ ಸುಮಾ	QJPNGPJ1910190009	ಸತೀಶ್ ಆರ್	QJPNGPJ2001300010
ಎಂ ಎನ್ ಸುಮಾ	QJPNGPJ1910190005	ನಾರಾಯಣ್	QJPNGPJ2002120005	ಸೈಯದ್ ಸುಲೈಮಾನ್ ಹುಸೇನ್	QJPNGPJ1906060013
				ವಹೀದ್ ಅಹ್ಮದ್ ಖಾನ್	QJPNGPJ1901050003

ಜಯನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಆಯುಬ್ ಖಾನ್	QJAYBPJ1912160001	ಜಾವೀದ್ ಪಾಷಾ	QJAYBPJ1912050001	ಸಿಮ್ರಾನ್‌ಹುಡಾ	QJAYBPJ2003090002
ಆಯುಬ್ ಖಾನ್	QJAYBPJ1912160002	ನವ್ಯಾಶ್ರೀ	QJAYBPJ1812150001	ವಹೀದ್ ಅಹ್ಮದ್ ಖಾನ್	QJAYBPJ1911220003
ಗೋವಿಂದರಾಜುಲು	QJAYBPJ1911210003	ರಾಜೇಶ್ವರಿ ವೈ	QJAYBPJ1911090005		

ರಾಜಾಜಿನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ರಮೇಶ್	QBRNBPJ1908310002	ರಮೇಶ್	QBRNBPJ1912140003	ಸುನಿಲ್ ಕುಮಾರ್	QBRNBPJ2002170002
ರಮೇಶ್	QBRNBPJ1912140001	ಸುನಿಲ್ ಕುಮಾರ್	QBRNBPJ2002170001	ಸುನಿಲ್ ಕುಮಾರ್	QBRNBPJ2002200005

ಶಿವಾಜಿ ನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಗಣಪತಿ ಲಾಲ್ ಎನ್	QSHIVPJ1907220001	ಕಮಲೇಸನ್ ಎಸ್	QSHIVPJ1903130001	ಕಮಲೇಸನ್ ಎಸ್	QSHIVPJ2002180001
ಗಣಪತಿ ಲಾಲ್ ಎನ್	QSHIVPJ1910220002	ಕಮಲೇಸನ್ ಎಸ್	QSHIVPJ1907260001	ಕಮಲೇಸನ್ ಎಸ್	QSHIVPJ1910100001
				ಮೋಹನ್ ಆರ್	QSHIVPJ1807040001

ಟಿ.ದಾಸರಹಳ್ಳಿ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಬಾಬು ಲಾಲ್	QDSRLPJ1909050002	ರಾಮದೇವಿ ವಿ	QDSRLPJ2002200004	ಶಂಕರ್ ಟೊಟಾಗೆರ್	QDSRLPJ1904250006
ಜೈ ಕುಮಾರ್	QDSRLPJ2002050001	ಸತೀಶ್ ಕುಮಾರ್ ಆರ್	QDSRLPJ1910030005		

ವಿಜಯನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಮಲ್ಲೇಶ್ ತೆಂಬಾದ್	QBANVPJ2001140001	ಶ್ರೀನಿವಾಸ್	QBANVPJ2001040001
ಶ್ರೀನಿವಾಸ್	QBANVPJ1912050002	ವೆಂಕಟೇಶ್	QBANVPJ2005140002

ವಿಲ್ಸನ್ ಗಾರ್ಡನ್ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಗಾಯತ್ರಿ	QBANWPJ1911020001	ಜಯಂತಿ	QBANWPJ2006080010	ಲಕ್ಷ್ಮಣ ಆರ್	QBANWPJ2006040002
ಹರಿಪ್ರಸಾದ್	QBANWPJ1906150007	ಲಕ್ಷ್ಮಣ ಆರ್	QBANWPJ2006040001	ರೆಹಾನಾ	QBANWPJ2003170001

ಯಲಹಂಕ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಪ್ರಭಾಕರ್	QYELNPJ1911070001	ಪ್ರಭಾಕರ್	QYELNPJ1911080003	ಪ್ರಭಾಕರ್	QYELNPJ2001130007
ಪ್ರಭಾಕರ್	QYELNPJ1911070002	ಪ್ರಭಾಕರ್	QYELNPJ1911080004	ಪ್ರಭಾಕರ್	QYELNPJ2001130008
ಪ್ರಭಾಕರ್	QYELNPJ1911080001	ಪ್ರಭಾಕರ್	QYELNPJ2001130005	ಪ್ರೇಮ್ ಕುಮಾರ್ ಸಿ	QYELNPJ1907190001
ಪ್ರಭಾಕರ್	QYELNPJ1911080002	ಪ್ರಭಾಕರ್	QYELNPJ2001130006	ಶ್ರೀಧರ್	QYELNPJ2002050001
				ಶ್ರೀಧರ್	QYELNPJ2002050002

ಹರಾಜು ಈ ಕೆಳಕಂಡ ವಿಳಾಸದಲ್ಲಿ ನಡೆಸಲಾಗುವುದು: : **ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ., “ಅಕ್ಷೋದಯ” #279, ಕೆಳಮಹಡಿ, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–560027, ದೂ: 9071776501**
ಹರಾಜು ಸಮಯ: **ಬೆಳಿಗ್ಗೆ : 10.30 ಘಂಟೆಗೆ**
ಹೆಚ್ಚಿನ ಮಾಹಿತಿಗಳಿಗಾಗಲಿ, ಷರತ್ತು ಹಾಗೂ ನಿಭಂದನೆಗಳಿಗಾಗಿಯಾಗಲಿ, ಹರಾಜಿನಲ್ಲಿ ಬಾಗವಹಿಸುವುದು ಮತ್ತು ಹೆಸರನ್ನು ನೊಂದಾಯಿಸಿಕೊಳ್ಳಲು ಆಸಕ್ತಿ ಉಳ್ಳವರು **ಮೊಬೈಲ್: 8431166309/9071776580** ಕರೆ ಮಾಡಿ ಸಂಪರ್ಕಿಸಬಹುದು. ಒಂದು ವೇಳೆ ಹರಾಜು ನಿಗಧಿ ಪಡಿಸುವ ದಿನದಂದು ಸಮಯದ ಅಭಾವದಿಂದ ಮುಗಿಸಲಾಗದ ಪಕ್ಷದಲ್ಲಿ ಕಛೇರಿಯ ಕೆಲಸದ ಮುಂದಿನ ದಿನಗಳಲ್ಲಿ ನಿಗದಿತ ಷರತ್ತು ಹಾಗೂ ನಿಭಂದನೆಗಳಿಗನುಗುಣವಾಗಿ ನೆಡೆಸಲಾಗುವುದು. ಒಂದು ವೇಳೆ ಯಾವುದೇ ಗ್ರಾಹಕ ಮೃತ್ಯು ಹೊಂದಿದ್ದಲ್ಲಿ ಅತನ/ಅವಳ ವಾರಸುದಾರರಿಗೆ ಹರಾಜಿನ ಎಲ್ಲಾ ಷರತ್ತು ಹಾಗೂ ನಿಭಂದನೆಗಳು ಅನ್ವಹಿಸುವುದು.

ದಿನಾಂಕ: 23.02.2021
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿ. ಪರವಾಗಿ

ಕೋವಿಡ್ –19: 1,500 ಮಂದಿ ವಾಸವಿರುವ ವಾಸಸ್ಥಳ, ಕಂಟೈನ್‌ಮೆಂಟ್ ಘೋಷಣೆ

ಒಂದೇ ಅಪಾರ್ಟ್‌ಮೆಂಟ್‌ನಲ್ಲಿ 10 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಒಂದೇ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 10 ಮಂದಿಗೆ ಕೋವಿಡ್ ಸೋಂಕು ದೃಢಪಟ್ಟಿದೆ.

ಎಸ್‌ಜೆಆರ್ ವಾಟರ್ ಮಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ 9 ಬ್ಲಾಕ್‌ಗಳಿದ್ದು, 1,500 ಜನ ವಾಸವಿದ್ದಾರೆ. 6 ಬ್ಲಾಕ್‌ಗಳಲ್ಲಿ ಈ ಪ್ರಕರಣಗಳು ವರದಿಯಾಗಿವೆ. ಉಳಿದ 3 ಬ್ಲಾಕ್‌ಗಳು ಸುಮಾರು 200 ಮೀಟರ್‌ಗಳಷ್ಟು ದೂರದಲ್ಲಿವೆ. ಅಲ್ಲಿ ಯಾವುದೇ ಪ್ರಕರಣಗಳು ವರದಿಯಾಗಿಲ್ಲ ಎಂದು ಬಿಬಿಎಂಪಿ ತಿಳಿಸಿದೆ.

ಆರು ಬ್ಲಾಕ್‌ಗಳನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗಿದೆ. ಬಿಬಿಎಂಪಿ 9 ತಂಡಗಳನ್ನು ರಚನೆ ಮಾಡಿದ್ದು, 500 ಮಂದಿಯ ಗಂಟಲು ದ್ರವ ಪಡೆದು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮಂಗಳವಾರ ಫಲಿತಾಂಶದ ನಿರೀಕ್ಷೆ ಮಾಡಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ತಿಳಿಸಿದ್ದಾರೆ.

ಅಪಾರ್ಟ್‌ಮೆಂಟ್ ಆವರಣ ಮತ್ತು ಸುತ್ತಮುತ್ತಲ ಪ್ರದೇಶವನ್ನು ಸ್ಯಾನಿಟೈಸ್ ಮಾಡಲಾಗಿದೆ. ನಾಲ್ವರು ವೈದ್ಯರೊಂದಿಗೆ ವೈದ್ಯಕೀಯ ಸಿಬ್ಬಂದಿಯನ್ನು ಅಲ್ಲಿಗೆ ನಿಯೋಜಿಸಲಾಗಿದೆ ಎಂದರು.

‘ಕಳೆದ ಸೋಮವಾರದಿಂದ ಒಂದೊಂದೇ ಪ್ರಕರಣ ದಾಖಲಾಗುತ್ತಿತ್ತು. ಭಾನುವಾರ ಒಂದೇ ದಿನ ನಾಲ್ಕು ಪ್ರಕರಣ ದಾಖಲಾಗಿವೆ. ಯಾರೊಬ್ಬರಿಗೂ ಪ್ರಯಾಣದ ಇತಿಹಾಸ ಇಲ್ಲ. ಸಂಪರ್ಕಿತರ ಪತ್ತೆ ಕಾರ್ಯ ಮುಂದುವರಿದಿದೆ’ ಎಂದು ಮಹದೇವಪುರ ವಲಯ ಆರೋಗ್ಯಾಧಿಕಾರಿ ಡಾ.ಸುರೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಕಳೆದ ಒಂದು ತಿಂಗಳಲ್ಲಿ ಒಂದೇ ಕಡೆ ಕೋವಿಡ್ ಪ್ರಕರಣ ಹೆಚ್ಚಾದ ನಗರದ 3ನೇ ಕ್ಲಸ್ಟರ್ ಇದಾಗಿದೆ. ಸೋಂಕಿತರಲ್ಲಿ ಕೇರಳ ಅಥವಾ ಮಹಾರಾಷ್ಟ್ರ ರಾಜ್ಯಗಳಿಗೆ ಪ್ರವಾಸ ಮಾಡಿರುವ ಇತಿಹಾಸ ಇಲ್ಲದಿರುವುದು ಅಧಿಕಾರಿಗಳಲ್ಲಿ ಕೊಂಚ ಸಮಾಧಾನ ತಂದಿದೆ.

ನಗರದ ಕೋವಿಡ್ ಪ್ರಕರಣಗಳು

4,03,943 ಒಟ್ಟು ಸೋಂಕಿತರು

3,95,204 ಗುಣಮುಖರಾದವರು

4,384 ಸಕ್ರಿಯ ಪ್ರಕರಣ

4,454 ಸಾವು

ಸೋಮವಾರದ ಏರಿಕೆ

2181 ದೃಢಪಟ್ಟ ಪ್ರಕರಣ

109 ಗುಣಮುಖ

3 ಸಾವು

ಕೊರೊನಾ: ಹೆಚ್ಚಳವಾಗದ ಪರೀಕ್ಷೆ

ಕೋವಿಡ್ ಎರಡನೇ ಅಲೆಯ ಅಪಾಯ ಇರುವ ಕಾರಣ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ರಾಜ್ಯದಲ್ಲೂ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲು ಸೂಚಿಸಿತ್ತು. ಆದರೆ, ರಾಜ್ಯದಲ್ಲಿ ಸೋಮವಾರ 45,868 ಪರೀಕ್ಷೆಗಳನ್ನು ಮಾತ್ರ ನಡೆಸಲಾಗಿದೆ.

ಕಳೆದ ಎರಡು ವಾರಗಳಿಂದ ಪರೀಕ್ಷೆಗಳ ಸಂಖ್ಯೆ 50 ಸಾವಿರದ ಗಡಿ ಆಸುಪಾಸಿನಲ್ಲಿದೆ. ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆಯಲು ಸೋಮವಾರ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ ಶೇ 42ರಷ್ಟು ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. 1,867 ಕೇಂದ್ರಗಳಲ್ಲಿ ಲಸಿಕೆ ವಿತರಣೆ ನಡೆದಿದೆ. 65,229 ಫಲಾನುಭವಿಗಳನ್ನು ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 27,645 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ ಯಾರಿಗೂ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡಪರಿಣಾಮ ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಹೊಸದಾಗಿ 317 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.48 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂರು ಮಂದಿ, ತುಮಕೂರು ಹಾಗೂ ಧಾರವಾಡದಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ನಟ ಜಗ್ಗೇಶ್‌ಗೆ ದರ್ಶನ್ ಅಭಿಮಾನಿಗಳ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಮೈಸೂರು: ಚಿತ್ರೀಕರಣವೊಂದರಲ್ಲಿ ಭಾಗಿಯಾಗಿದ್ದ ನಟ ಜಗ್ಗೇಶ್‌ಗೆ, ತಿ.ನರಸೀಪುರ ತಾಲ್ಲೂಕಿನ ಬನ್ನೂರು ಸಮೀಪದ ಅತ್ತಳ್ಳಿಯಲ್ಲಿ ದರ್ಶನ್ ಅಭಿಮಾನಿಗಳು ಮುತ್ತಿಗೆ ಹಾಕಿ ತೀವ್ರ ತರಾಟೆಗೆ ತೆಗೆದುಕೊಂಡಿದ್ದಲ್ಲದೇ, ದರ್ಶನ್ ಅವರ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದಾರೆ.

ಮೈಸೂರು ಭಾಗದಲ್ಲಿ ಚಿತ್ರೀಕರಣದಲ್ಲಿ ಜಗ್ಗೇಶ್ ಪಾಲ್ಗೊಂಡ ಮಾಹಿತಿ ತಿಳಿದ ದರ್ಶನ್ ಅಭಿಮಾನಿಗಳ ತಂಡವು, ಸ್ಥಳಕ್ಕೆ ತೆರಳಿ ಜಗ್ಗೇಶ್ ವಿರುದ್ಧ ಹರಿಹಾಯ್ದಿರುವ ಹಾಗೂ ಅವರ ವಿರುದ್ಧ ಧಿಕ್ಕಾರ ಕೂಗಿರುವ ದೃಶ್ಯಗಳಿರುವ ವಿಡಿಯೊ ಸೋಮವಾರ ವೈರಲ್ ಆಗಿದೆ.

ದರ್ಶನ್ ಹಾಗೂ ಅವರ ಅಭಿಮಾನಿಗಳ ವಿರುದ್ಧ ಜಗ್ಗೇಶ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊವೊಂದು ಕೆಲ ದಿನಗಳ ಹಿಂದೆಯಷ್ಟೇ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಇದಕ್ಕೆ ದರ್ಶನ್ ಅಭಿಮಾನಿಗಳು ಸಹ ಕಟುವಾಗಿ ಪ್ರತಿಕ್ರಿಯಿಸಿದ್ದರು. ಆಗಲೇ ಜಗ್ಗೇಶ್ ಸ್ಪಷ್ಟನೆ ನೀಡಿದ್ದರು.

ದರ್ಶನ್ ಅಭಿಮಾನಿಗಳು ಮುತ್ತಿಗೆ ಹಾಕುತ್ತಿದ್ದಂತೆಯೇ ಜಗ್ಗೇಶ್ ಸಿಟ್ಟಿನಿಂದ ಪ್ರತಿಕ್ರಿಯಿಸಿದ್ದು, ‘ಆ ಧ್ವನಿ ನನ್ನದಲ್ಲ. ನಾನ್ಯಾಕೆ ಕ್ಷಮೆ ಕೇಳಬೇಕು?’ ಎಂದಿದ್ದು, ತಮ್ಮ ಹಾಗೂ ದರ್ಶನ್ ನಡುವೆ ಬೇರೆ ಯಾರೋ ತಂದಿಡುವ ಕೆಲಸ ಮಾಡಿದ್ದಾರೆ ಎಂದು ಸಮಜಾಯಿಷಿ ನೀಡಿದ್ದಾರೆ. ಅಭಿಮಾನಿಯೊಬ್ಬನಿಗೆ, ‘ಇದು ನಿಂದಲ್ಲ ಮ್ಯಾಟರ್’ ಎನ್ನುತ್ತಿದ್ದಂತೆಯೇ, ಮುತ್ತಿಗೆ ಹಾಕಿದ್ದ ತಂಡವು ತೀವ್ರ ಆಕ್ರೋಶ ವ್ಯಕ್ತಪಡಿಸಿರುವುದೂ ವಿಡಿಯೊದಲ್ಲಿದೆ.

ರಥೋತ್ಸವ

ಗದಗ ಜಿಲ್ಲೆಯ ನರೇಗಲ್ ಪಟ್ಟಣದ ಕೋಡಿಕೊಪ್ಪದ ಹಠಯೋಗಿ ಹುಚ್ಚೀರಪ್ಪಜ್ಜನ ರಥೋತ್ಸವವು ಸೋಮವಾರ ಸಹಸ್ರಾರು ಭಕ್ತರ ನಡುವೆ ವೈಭವದಿಂದ ಜರುಗಿತು ಪ್ರಜಾವಾಣಿ ಚಿತ್ರ/ ಚಂದ್ರಪ್ಪ ರಾಥೋಡ

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರೌಢಶಾಲೆಯ ಎಲ್ಲ ತರಗತಿ ಪುನರಾರಂಭ

ಆಫ್‌ಲೈನ್‌ಗಿಂತ ಆನ್‌ಲೈನ್ ತರಗತಿಗೇ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಶಾಲೆಗಳಲ್ಲಿ ಸೋಮವಾರದಿಂದ 8ನೇ ತರಗತಿಗೂ ಪೂರ್ಣಾವಧಿ ಪಾಠ ಪ್ರಾರಂಭಿಸಲಾಯಿತು. ರಾಜ್ಯದಲ್ಲೆಡೆ 6ನೇ ಕ್ಲಾಸ್‌ನಿಂದಲೇ ಪೂರ್ಣಾವಧಿ ತರಗತಿ ಆರಂಭಿಸಿದ್ದರೂ, ನಗರದಲ್ಲಿ ಪ್ರೌಢಶಾಲೆಗಳ ಎಲ್ಲ ತರಗತಿ ಮಾತ್ರ ಮರುಪ್ರಾರಂಭಗೊಂಡಿದೆ.

9 ಮತ್ತು 10ನೇ ತರಗತಿಯವರಿಗೆ ಭೌತಿಕ ತರಗತಿ, 8ಕ್ಕೆ ಮಾತ್ರ ಆನ್‌ಲೈನ್ ತರಗತಿ ತೆಗೆದುಕೊಳ್ಳುವುದು ಸಮಸ್ಯೆ ಎನಿಸುತ್ತಿತ್ತು. ಈಗ ಎಲ್ಲ ತರಗತಿಗಳು ಪ್ರಾರಂಭವಾಗುವುದರಿಂದ ಭೌತಿಕ ತರಗತಿಯ ಕಡೆಗೆ ಹೆಚ್ಚು ಗಮನ ನೀಡಿ ಪಾಠ ಮಾಡಬಹುದಾಗಿದೆ ಎಂದು ಬಹುತೇಕ ಶಿಕ್ಷಕರು ಹೇಳಿದರು.

ಆನ್‌ಲೈನ್‌ಗೆ ಒತ್ತು: ನಗರದಲ್ಲಿ ಬಹುತೇಕ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಿರಲಿಲ್ಲ. ಈ ವರ್ಷ ಪೂರ್ತಿ ಆನ್‌ಲೈನ್ ವ್ಯವಸ್ಥೆಯಡಿಯಲ್ಲಿಯೇ ತರಗತಿಗಳು ಮುಗಿಯಲಿ ಎಂಬುದು ಬಹುತೇಕರ ಅಭಿಪ್ರಾಯವಾಗಿತ್ತು. ಮುಖ್ಯವಾಗಿ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಅಧೀನದ ಶಾಲೆಗಳು ಈ ಶೈಕ್ಷಣಿಕ ವರ್ಷ ಪೂರ್ತಿ ಆನ್‌ಲೈನ್ ತರಗತಿಯನ್ನೇ ನಡೆಸಲು ತೀರ್ಮಾನಿಸಿವೆ.

‘ಪಠ್ಯಕ್ರಮ ಮುಗಿಸಲು ಸುಮಾರು ಒಂದು ತಿಂಗಳು ಸಮಯವಷ್ಟೇ ಇದೆ. ಈ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗೆ ಕರೆಸಿ ಪಾಠ ಮಾಡುವುದು ಕಷ್ಟವಾಗುತ್ತದೆ. ಈಗಾಗಲೇ ಆನ್‌ಲೈನ್ ತರಗತಿಗೆ ಬಹುತೇಕ ವಿದ್ಯಾರ್ಥಿಗಳು ಒಗ್ಗಿಕೊಂಡಿರುವುದರಿಂದ ಇದೇ ವ್ಯವಸ್ಥೆಯಡಿಯಲ್ಲಿಯೇ ಬೋಧನೆ ಮುಂದುವರಿಸಲು ನಿರ್ಧರಿಸಿದ್ದೇವೆ’ ಎಂದು ಖಾಸಗಿ ಶಾಲೆಯ ಪ್ರಾಚಾರ್ಯರೊಬ್ಬರು ಹೇಳಿದರು.

‘ಪೋಷಕರಿಂದಲೂ ನಾವು ಅಭಿಪ್ರಾಯ ಸಂಗ್ರಹಿಸಿದ್ದೇವೆ. ಬಹುತೇಕರು ಆನ್‌ಲೈನ್ ತರಗತಿ ಮುಂದುವರಿಸುವಂತೆಯೇ ಹೇಳಿದರು. ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಎಂದೇ ಪೋಷಕರು ಹೇಳುತ್ತಿದ್ದಾರೆ’ ಎಂದು ವೈಟ್‌ಫೀಲ್ಡ್‌ನ ಖಾಸಗಿ ಶಾಲೆಯ ಪ್ರಾಚಾರ್ಯರೊಬ್ಬರು ತಿಳಿಸಿದರು.

ಮಾರ್ಗಸೂಚಿ ಪಾಲನೆ: ಸರ್ಕಾರದ ಆದೇಶದಂತೆ ಎಲ್ಲ ಶಾಲೆ, ಕಾಲೇಜುಗಳಲ್ಲಿ ಸ್ವಚ್ಛತೆ, ಸ್ಯಾನಿಟೈಸಿಂಗ್ ಸೇರಿದಂತೆ ಸಮಗ್ರ ಮಾರ್ಗಸೂಚಿಯನ್ನು ಅನುಸರಿಸಿ ಸಿದ್ಧಗೊಳಿಸಿದ್ದವು.

ಉಳಿದ ತರಗತಿಗಳಲ್ಲಿಯೂ ಕಡಿಮೆ ಹಾಜರಾತಿ

ಎಲ್ಲೆಡೆ 8ನೆಯ ತರಗತಿಯು ಪೂರ್ಣಾವಧಿಯಲ್ಲಿ ಪ್ರಾರಂಭವಾಗಿದ್ದೂ, ತಿಂಗಳುಗಳ ಹಿಂದೆಯೇ ಶುರುವಾಗಿರುವ 10 ಮತ್ತು 9ನೇ ತರಗತಿಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಾಗಿಲ್ಲ.

ಜ.1ರಿಂದ ಎಸ್ಸೆಸ್ಸೆಲ್ಸಿ, ಫೆ.1ರಿಂದ 9ನೇ ತರಗತಿಗಳು ಆರಭವಾಗಿದೆ. ಆದರೆ, ಸೋಮವಾರದ ದಾಖಲಾತಿ ಪ್ರಕಾರ, ರಾಜ್ಯದಲ್ಲಿ 10ನೇ ತರಗತಿಯ 9.29 ಲಕ್ಷ ವಿದ್ಯಾರ್ಥಿಗಳ ಪೈಕಿ 4.65 ಲಕ್ಷ ವಿದ್ಯಾರ್ಥಿಗಳು (ಶೇ.50) ಮತ್ತು 9ನೇ ತರಗತಿಯ 9.89 ಲಕ್ಷ ವಿದ್ಯಾರ್ಥಿಗಳ ಪೈಕಿ 4.48 ಲಕ್ಷ ವಿದ್ಯಾರ್ಥಿಗಳು (ಶೇ.45) ಮಾತ್ರ ತರಗತಿಗೆ ಹಾಜರಾಗಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಹೇಳಿದೆ.

ಸ್ವಾಮೀಜಿ ಸ್ವಂತಿಕೆಯ ತೀರ್ಮಾನ ತೆಗೆದುಕೊಳ್ಳಲಿ: ಸಿ.ಸಿ.ಪಾಟೀಲ

‘ಯತ್ನಾಳ, ಕಾಶಪ್ಪನವರ ಕಪಿಮುಷ್ಠಿಯಲ್ಲಿ ಸ್ವಾಮೀಜಿ’

ಪ್ರಜಾವಾಣಿ ವಾರ್ತೆ

ಸಿ.ಸಿ.ಪಾಟೀಲ

ಬೆಂಗಳೂರು: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಕಾಂಗ್ರೆಸ್‌ನ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಅವರು ಪಂಚಮಸಾಲಿ ಮಠಾಧೀಶ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಕಪಿಮುಷ್ಠಿಯಲ್ಲಿಟ್ಟುಕೊಂಡು, ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದಾರೆ’ ಎಂದು ಸಚಿವರಾದ ಸಿ.ಸಿ.ಪಾಟೀಲ ಮತ್ತು ಮುರುಗೇಶ ನಿರಾಣಿ ದೂರಿದರು.

ಪಂಚಮಸಾಲಿಗಳ 2ಎ ಹೋರಾಟವನ್ನು ವಿಜಯಾನಂದ ಕಾಶಪ್ಪನವರ ತಮ್ಮ ಕುಟುಂಬದ ಹೋರಾಟವಾಗಿ ಪರಿವರ್ತಿಸಿದ್ದಾರೆ. ಕಾಂಗ್ರೆಸ್‌ನ ‘ಬಿ’ ಟೀಮ್‌ನಂತೆ ವರ್ತಿಸುತ್ತಿರುವ ಯತ್ನಾಳ ಇದಕ್ಕೆ ನೆರವಾಗಿದ್ದಾರೆ ಎಂದು ಸಚಿವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಭಾನುವಾರ ನಡೆದ ಸಮಾವೇಶ, ನಂತರದ ಘಟನೆಗಳಿಂದ ಪಂಚಮಸಾಲಿ ಸಮುದಾಯ ತಲೆ ತಗ್ಗಿಸುವಂತಾಗಿದೆ. ಇದಕ್ಕೆ ಇವರಿಬ್ಬರೇ ಕಾರಣ. ಇವರಿಬ್ಬರೂ ಹೋರಾಟದ ದಿಕ್ಕು ತಪ್ಪಿಸಿದ್ದು ಮಾತ್ರವಲ್ಲದೆ ದುರ್ಬಳಕೆ ಮಾಡಿಕೊಂಡು ಸ್ವಾರ್ಥ ಸಾಧನೆ ಮಾಡಿಕೊಂಡಿದ್ದಾರೆ ಎಂದು ಸಿ.ಸಿ.ಪಾಟೀಲ ಆರೋಪಿಸಿದರು.

ಅರಮನೆಯಲ್ಲಿ ಸಮಾವೇಶ ನಡೆಸಿ, ಹೋರಾಟ ಅಂತ್ಯಗೊಳಿಸಲು ತುಮಕೂರಿನಲ್ಲಿ ನಡೆದ ಸಭೆಯಲ್ಲಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆದರೆ, ಇಲ್ಲಿ ಸಮಾವೇಶವನ್ನು ಹೈಜಾಕ್ ಮಾಡಿ, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಹೊರಟರು. ಸರ್ಕಾರಕ್ಕೆ ಗಡುವು ನೀಡುವ ಮತ್ತು ಧರಣಿ ನಡೆಸುವ ವಿಚಾರಗಳು ಪ್ರಮುಖರಿಗೆ ತಿಳಿಸಿರಲಿಲ್ಲ ಎಂದೂ ಹೇಳಿದರು.

ಸಮಾವೇಶದಲ್ಲಿ ಹಲವು ಬಾರಿ ಸ್ವಾಮೀಜಿಯವರ ಮನವೊಲಿಸಲು ಯತ್ನಿಸಿದಾಗ ಒಪ್ಪಿಕೊಳ್ಳುತ್ತಿದ್ದ ಅವರು, ಕಾಶಪ್ಪನವರ ಮಾತನಾಡಿದ ತಕ್ಷಣವೇ ನಿಲುವು ಬದಲಿಸುತ್ತಿದ್ದರು. ಅಲ್ಲದೆ, ಸಮಾವೇಶದಲ್ಲಿ ಯತ್ನಾಳ ಮತ್ತು ಕಾಶಪ್ಪನವರ ಅವರು ಪ್ರಚೋದನಕಾರಿಯಾಗಿ ಮಾತನಾಡಿದರು. ತಮ್ಮ ಸ್ವಾರ್ಥಕ್ಕೆ ಸಮಾಜದ ವೇದಿಕೆ ಬಳಸಿದ್ದು ಖೇದಕರ ಎಂದು ಪಾಟೀಲ ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಇದ್ದಾಗ ಶಾಸಕರಾಗಿದ್ದ ಕಾಶಪ್ಪನವರ ಅವರು 2ಎ ಮೀಸಲಾತಿ ಸಂಬಂಧಿಸಿ ಹೋರಾಟ ಮಾಡಿದ್ದರೆ? ಆಗ ಏನೂ ಮಾಡದೇ ಈಗ ಬೂಟಾಟಿಕೆ ಮಾತನಾಡುತ್ತಿದ್ದಾರೆ. ಪಂಚಮಸಾಲಿ ಮಹಾಸಭಾಕ್ಕೆ ರಾಷ್ಟ್ರೀಯ ಅಧ್ಯಕ್ಷ ತಾವೇ ಎಂದು ಸ್ವಯಂ ಘೋಷಿಸಿಕೊಂಡಿದ್ದಾರೆ. ಅಧ್ಯಕ್ಷ ಎಂದು ಹೇಳಿಕೊಳ್ಳಲು ಇವರಿಗೆ ಅಧಿಕಾರ ಕೊಟ್ಟವರು ಯಾರು? ಟ್ರಸ್ಟ್ ಪದಾಧಿಕಾರಿಗಳು ಪಕ್ಷಾತೀತ ವ್ಯಕ್ತಿಯೇ ಆಗಿರಬೇಕು. ಇವರನ್ನು ಅಧ್ಯಕ್ಷ ಎಂದು ಸಮಾಜದ ಯಾವುದೇ ವ್ಯಕ್ತಿಯೂ ಒಪ್ಪಲು ತಯಾರಿಲ್ಲ ಎಂದರು.

‘ಸಮಾವೇಶದಲ್ಲಿ ಗೊಂದಲ ಆಗಬಾರದು ಎಂಬ ಕಾರಣಕ್ಕೆ ನಿನ್ನೆ ಸಮಾವೇಶದಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ರಾಜೀನಾಮೆ ಕೊಟ್ಟು ಚುನಾವಣೆಯಲ್ಲಿ ಗೆಲ್ಲಿ: ಯತ್ನಾಳಗೆ ಸವಾಲು

ಮುರುಗೇಶ ನಿರಾಣಿ

‘ಪಂಚಮಸಾಲಿ ಮಂತ್ರಿಗಳು ಮತ್ತು ಶಾಸಕರು ರಾಜೀನಾಮೆ ನೀಡಬೇಕು ಎಂದು ಯತ್ನಾಳ ಹೇಳಿದ್ದಾರೆ. ನಾವು ನಮ್ಮ ಮತ ಕ್ಷೇತ್ರಗಳ ಎಲ್ಲ ಮತದಾರರ ಆಶೀರ್ವಾದದಿಂದ ಗೆದ್ದು ಬಂದಿದ್ದೇವೆ. ಪಕ್ಷದ ವರಿಷ್ಠರು ಮತ್ತು ಸಿ.ಎಂ ನಮ್ಮನ್ನು ಮಂತ್ರಿ ಮಾಡಿದ್ದಾರೆ. ಮೊದಲಿಗೆ ಅವರು (ಯತ್ನಾಳ) ರಾಜೀನಾಮೆ ಕೊಟ್ಟು, ಮತ್ತೆ ಗೆದ್ದು ಬರಲಿ’ ಎಂದು ಸಚಿವ ಮುರಗೇಶ ನಿರಾಣಿ ಸವಾಲು ಹಾಕಿದರು.

‘ಯಡಿಯೂರಪ್ಪ ವಿರುದ್ಧ ಸಮಾವೇಶದಲ್ಲಿ ಯತ್ನಾಳ ವಾಗ್ದಾಳಿ ನಡೆಸಿದ. ಇದರ ಔಚಿತ್ಯ ಏನಿತ್ತು? ಯತ್ನಾಳ ಕಾಂಗ್ರೆಸ್‌ನ ಬಿ ಟೀಮ್ ಆಗಿ ಕೆಲಸ ಮಾಡುತ್ತಿದ್ದಾನೆ. ಹಿಂದೆ ಕೇಂದ್ರದಲ್ಲಿ ಮಂತ್ರಿ ಆಗಿದ್ದು ಮತ್ತು ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಬರಲು ಯಡಿಯೂರಪ್ಪ ಅವರ ಪಾತ್ರ ಇದೆ’ ಎಂದು ಏಕ ವಚನದಲ್ಲಿ ವಾಗ್ದಾಳಿ ನಡೆಸಿದರು. ‘ನಾವು ಪಂಚಮಸಾಲಿ ಸಮುದಾಯವನ್ನು 2ಎ ಗೆ ಸೇರಿಸಲು ಪ್ರಯತ್ನ ನಡೆಸುತ್ತಿದ್ದೇವೆ. ಅದಕ್ಕೆ ನಿಯಮ ಎಂಬುದಿದೆ. ಮುಖ್ಯಮಂತ್ರಿಯವರು ಈಗಾಗಲೇ ಅಧ್ಯಯನ ನಡೆಸಲು ಹಿಂದುಳಿದ ವರ್ಗಗಳ ಆಯೋಗಕ್ಕೆ ತಿಳಿಸಿದ್ದಾರೆ. ವರದಿ ಬರುವವರೆಗೆ ಕಾಲಾವಕಾಶ ನೀಡಬೇಕಲ್ಲವೇ? ನಾಳೆಯೇ ಮಾಡಿ ಎಂದು ಪಟ್ಟು ಹಿಡಿದರೆ ಕಾನೂನಿನ ಚೌಕಟ್ಟಿನಲ್ಲಿ ಆಗದ ಮಾತು. ಆದ್ದರಿಂದ ಧರಣಿ ಕೈಬಿಡಬೇಕು’ ಎಂದು ಸ್ವಾಮೀಜಿಯವರಿಗೆ ತಿಳಿ ಹೇಳಿದರು.

ಸಂಸದ ಕರಡಿ ಸಂಗಣ್ಣ, ಶಾಸಕರಾದ ಮಹೇಶ ಕುಮಠಳ್ಳಿ, ಸಿದ್ದು ಸವದಿ, ಕಳಕಪ್ಪ ಬಂಡಿ, ಶಂಕರಪಾಟೀಲ ಮುನೇನಕೊಪ್ಪ, ಮಹಂತೇಶ ದೊಡ್ಡ ದೊಡ್ಡನಗೌಡ ಸುದ್ದಿಗೋಷ್ಠಿಯಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ನಾಳೆ ಉದ್ಯೋಗ ಮೇಳ

ಬೆಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ರಾಷ್ಟ್ರೀಯ ವೃತ್ತಿ ಸೇವಾ ಯೋಜನೆಯಡಿ ಶೇಷಾದ್ರಿಪುರ ಕಾಲೇಜಿನ ಸಹಯೋಗದಲ್ಲಿ ಯುವಕ, ಯುವತಿಯರಿಗಾಗಿ ಫೆ.24ರಂದು ಉದ್ಯೋಗ ಮೇಳ ಆಯೋಜಿಸಿದೆ.

ಆಸಕ್ತರು ತಮ್ಮ ಸ್ವವಿವರಗಳೊಂದಿಗೆ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಡೆಯುವ ಉದ್ಯೋಗ ಮೇಳದಲ್ಲಿ ಭಾಗವಹಿಸುವಂತೆ ಪ್ರಕಟಣೆ ತಿಳಿಸಿದೆ. ವಿಳಾಸ:ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ.

ಸಂಪರ್ಕ:9972977925

26ರಿಂದ ಆರಾಧನಾ ಮಹೋತ್ಸವ

ಬೆಂಗಳೂರು: ಶ್ರೀರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನವು ಪುರಂದರದಾಸರು, ತ್ಯಾಗರಾಜರು ಹಾಗೂ ಕನಕದಾಸರ ಆರಾಧನಾ ಮಹೋತ್ಸವವನ್ನು ಫೆ.26ರಿಂದ 28ರವರೆಗೆ ಹಮ್ಮಿಕೊಂಡಿದೆ.

26ರಂದು ಪುರಂದರದಾಸರ ಆರಾಧನಾ ಮಹೋತ್ಸವದ ಅಂಗವಾಗಿ ಸಂಜೆ 5.30ಕ್ಕೆ ಅರುಣ್ ಕುಮಾರ್ ಶಿವಮೊಗ್ಗ ಅವರಿಗೆ ‘ಗುರುರಾಘವೇಂದ್ರ ಸಂಸ್ಮರಣ ಪ್ರಶಸ್ತಿ’ ಪ್ರದಾನ ನಡೆಯಲಿದೆ.

27ರಂದು ಶಿವಮೊಗ್ಗದ ಶಾರದಾ ಸಂಗೀತ ವಿದ್ಯಾಲಯದ ಮಕ್ಕಳಿಂದ ಪಂಚರತ್ನ ಕೃತಿಗಳ ಗೋಷ್ಠಿಗಾಯನ ಇರಲಿದೆ. 28ರಂದು ಆರ್. ಸಬೀಹಾಬಾನು ಅವರಿಗೆ ‘ಎಸ್.ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ’ ಪ್ರದಾನ ನಡೆಯಲಿದೆ. ಪ್ರತಿದಿನ ವಿವಿಧ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಸ್ಥಳ: ಸತ್ಯ ಗಣಪತಿ ದೇವಸ್ಥಾನ, ಪುಟ್ಟೇನಹಳ್ಳಿ ಕೆರೆ, ಇಂಚರ ಹೋಟೆಲ್ ಮುಂಭಾಗ, ಸಾಂಸ್ಕೃತಿಕ ಮಂದಿರ, ಜೆ.ಪಿ.ನಗರ.

ಹಾಜರಾತಿ ಕಡಿಮೆಯಿದ್ದರೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಅವಕಾಶ

ಬೆಂಗಳೂರು: ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಹಾಜರಾತಿ ಕಡಿಮೆಯಿದ್ದರೂ ಈ ಬಾರಿ ಪರೀಕ್ಷೆ ಬರೆಯಲು ಅವಕಾಶ ನೀಡುವುದಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಅವಕಾಶ ನೀಡಿದೆ.

ಕೋವಿಡ್ ಕಾರಣದಿಂದ ಶಾಲೆಗಳು ತಡವಾಗಿ ಆರಂಭವಾಗಿರುವುದು ಮತ್ತು ಪ್ರಸ್ತುತ ವರ್ಷ ಹಾಜರಾತಿ ಕಡ್ಡಾಯವಲ್ಲ ಎಂದು ಇಲಾಖೆಯೇ ಆದೇಶಿಸಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಅಲ್ಲದೆ, ಆರ್‌ಟಿಇ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಹಾಜರಾತಿ ಮತ್ತು ದಾಖಲಾತಿ ಕುರಿತು ನಿಯಮದಲ್ಲಿ ಸಡಿಲಿಕೆ ಮಾಡಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

‘ಖಾಸಗಿ ಅನುದಾನ ರಹಿತ ಶಾಲೆಗಳ ಹಿತವನ್ನು ಕಾಯುವ ಉದ್ದೇಶದಿಂದ ಈ ವಿನಾಯಿತಿಯನ್ನು ನೀಡಲಾಗಿದೆ’ ಎಂದು ಹೇಳಿದ್ದಾರೆ.

‘ಇತಿಹಾಸ ಮುಚ್ಚಿಡುವ ಕೆಲಸ ಮಾಡದಿರಿ: ಬಂಜಗೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೌದ್ಧ ಮತ್ತು ಜೈನ ಧರ್ಮಗಳ ಹುಟ್ಟಿನ ಕುರಿತ ಪಾಠಗಳು ಪರೀಕ್ಷೆಗೆ ಅಗತ್ಯವಿಲ್ಲ ಎಂದು ಶಿಕ್ಷಣ ಇಲಾಖೆ ಹೇಳಿರುವುದು ತಪ್ಪು. ಇತಿಹಾಸ ನಡೆದು ಬಂದ ದಾರಿಯನ್ನು ಎಲ್ಲರೂ ತಿಳಿಯುವುದು ಅಗತ್ಯ. ಇತಿಹಾಸವನ್ನೇ ಮುಚ್ಚಿಡುವ ಕೆಲಸ ಮಾಡಬಾರದು’ ಎಂದು ವಿಮರ್ಶಕ ಡಾ.ಬಂಜಗೆರೆ ಜಯಪ್ರಕಾಶ್ ತಿಳಿಸಿದರು.

ಜಾಣಗೆರೆ ಪತ್ರಿಕಾ ಪ್ರಕಾಶನ ಹಾಗೂ ಸಾಹಿತ್ಯ ಸಂಗಮ ಟ್ರಸ್ಟ್‌ನ ಸಹಯೋಗದಲ್ಲಿ ಆಯೋಜಿಸಿದ್ದ ಲೇಖಕ ಜಾಣಗೆರೆ ವೆಂಕಟರಾಮಯ್ಯ ಅವರ ‘ಜಲಯುದ್ಧ’ ಕಾದಂಬರಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಪ್ರಕಾಶಕ ನಾಗಭೂಷಣ್, ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ, ಬಂಜಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ, ಹಂಪ ನಾಗರಾಜಯ್ಯ, ಬಸವರಾಜ ಕಲ್ಗುಡಿ, ಬೈರಮಂಗಲ ರಾಮೇಗೌಡ, ಎಲ್.ಎನ್.ಮುಕುಂದರಾಜ್ ಇದ್ದರು

‘ಅಧಿಕಾರದಲ್ಲಿರುವವರು ಜನರ ಅಭಿವೃದ್ಧಿಗಾಗಿ ಆಡಳಿತ ನಡೆಸಿದರೆ, ಅವರು ಜನರ ಮನಸ್ಸಿನಲ್ಲಿ ಉಳಿಯುತ್ತಾರೆ. ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡರೆ ಅವರ ದುಷ್ಟತನ ತೋರುತ್ತದೆ’ ಎಂದರು.

‘ಶತಮಾನಗಳಿಂದಲೂ ರಾಜ್ಯವು ಜಲ ಮತ್ತು ಗಡಿ ವಿಚಾರಗಳಲ್ಲಿ ಸಂಕಷ್ಟ ಮತ್ತು ಸಂಘರ್ಷ ಎದುರಿಸುತ್ತಲೇ ಬಂದಿದೆ. ಬ್ರಿಟಿಷ್ ಸರ್ಕಾರ ಹಾಗೂ ನಂತರದ ನಮ್ಮ ಸರ್ಕಾರಗಳು ಮಾಡಿದ ನಿರ್ಲಕ್ಷ್ಯ ಹಾಗೂ ವಂಚನೆಗಳಿಂದ ನೀರಿನ ಸಮಸ್ಯೆ ಇಂದಿಗೂ ಕೊನೆಗೊಂಡಿಲ್ಲ. ಜಾಣಗೆರೆ ವೆಂಕಟರಾಮಯ್ಯ ಅವರ ಈ ಕಾದಂಬರಿ ಜಲ ವಿವಾದದ ಕುರಿತು ಒಂದು ಸೂಚನೆ ನೀಡಿದೆ’ ಎಂದು ಹೇಳಿದರು.

ಸಾಹಿತಿ ಡಾ.ಹಂಪ ನಾಗರಾಜಯ್ಯ,‘ನಾಡಿನಲ್ಲಿ ನದಿಯ ಉಳಿವಿಗಾಗಿ ಕದನಗಳು ನಡೆದಿವೆ. ನದಿ ತೀರಗಳಲ್ಲಿ ಸಾಮ್ರಾಜ್ಯ ಕಟ್ಟಿಕೊಳ್ಳುತ್ತಿದ್ದ ರಾಜರೂ ಅದರ ಉಳಿವಿಗಾಗಿ ಯುದ್ಧ ನಡೆಸಿದ್ದಾರೆ. ಈ ಕುರಿತು ‘ಕವಿರಾಜ ಮಾರ್ಗ’ದಲ್ಲಿ ಕಾವೇರಿಯಿಂದ ಗೋದಾವರಿವರೆಗೆ ಕನ್ನಡ ನಾಡನ್ನು ಗುರುತಿಸಲಾಗಿದೆ’ ಎಂದರು.

ವಿಮರ್ಶಕ ಬೈರಮಂಗಲ ರಾಮೇಗೌಡ, ‘ಹಲವು ರಾಜ್ಯಗಳ ಜೊತೆಗೆ ಗಡಿ ಹಂಚಿಕೊಂಡಿರುವ ಏಕೈಕ ರಾಜ್ಯ ನಮ್ಮದು. ಹಾಗಾಗಿ, ಜಲ, ಗಡಿ ಮತ್ತು ಭಾಷೆಯ ಸಮಸ್ಯೆ ಉದ್ಭವಿಸಿದೆ. ದಿಕ್ಕು ತಪ್ಪುತ್ತಿರುವ ಆಡಳಿತ ವ್ಯವಸ್ಥೆಯನ್ನು ಜನರೇ ಸರಿಯಾದ ದಾರಿಗೆ ತರಬೇಕಿದೆ’ ಎಂದರು.

ಲೇಖಕ ಜಾಣಗೆರೆ ವೆಂಕಟರಾಮಯ್ಯ,‘ಕನ್ನಡಿಗರು ಜಲವಿವಾದ ಹೋರಾಟ ಮಾಡಿಕೊಂಡೇ ಬಂದಿದ್ದಾರೆ. ಅಂದಿನ ತಪ್ಪು ನಿರ್ಧಾರಗಳಿಂದ ಆಗಿರುವ ಸಮಸ್ಯೆಗಳಿಗೆ ಪುಸ್ತಕದಲ್ಲಿ ಎಚ್ಚರಿಕೆಯ ಸಂದೇಶವೂ ನೀಡಿದ್ದೇನೆ’ ಎಂದು ಅವರು ತಿಳಿಸಿದರು.

ನಮ್ಮೂರಿನ ರಾಮನೂ ದಶರಥನ ಮಗನೇ: ಸಿದ್ದರಾಮಯ್ಯ

ಪಡುಬಿದ್ರಿ (ಉಡುಪಿ): ‘ಅಯೋಧ್ಯೆಯ ರಾಮನೂ ದಶರಥನ ಮಗನೇ. ನಮ್ಮೂರಿನ ರಾಮನೂ ದಶರಥನ ಮಗನೇ. ಅಯೋಧ್ಯೆಯ ರಾಮಮಂದಿರಕ್ಕೆ ದೇಣಿಗೆ ಕೊಡುವ ಬದಲು, ನಮ್ಮೂರಿನ ರಾಮಮಂದಿರಕ್ಕೆ ಕೊಡುತ್ತೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪಡುಬಿದ್ರಿಯಲ್ಲಿ ಸೋಮವಾರ ಕಾಂಗ್ರೆಸ್ ಹಮ್ಮಿಕೊಂಡಿದ್ದ ಜನಧ್ವನಿ ಸಮಾವೇಶದಲ್ಲಿ ಮಾತನಾಡಿ, 'ಅಯೋಧ್ಯೆಯ ರಾಮಮಂದಿರ ನಿರ್ಮಾಣಕ್ಕೆ ಮಾತ್ರ ದೇಣಿಗೆ ಕೊಡಬೇಕೆ? ನಮ್ಮೂರಿನ ರಾಮಮಂದಿರಕ್ಕೆ ಕೊಟ್ಟರೆ ಆಗುವುದಿಲ್ಲವೇ? ನನ್ನ ಹೆಸರಿನಲ್ಲಿಯೇ ‘ರಾಮ’ ಇದ್ದಾನೆ’ ಎಂದು ತಿರುಗೇಟು ನೀಡಿದರು.

ಗಾಂಧಿ ಕೊಂದ ಗೋಡ್ಸೆಯ ಆರಾಧಕರಾದ ಬಿಜೆಪಿಗರು ನಿಜವಾದ ಹಿಂದುತ್ವವಾದಿಗಳೇ ಎಂದು ಕುಟುಕಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ

‘ಭಾಷೆ, ಸಂಸ್ಕೃತಿ ವಿ.ವಿಗಳು ಇಲಾಖೆ ವ್ಯಾಪ್ತಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾನಪದ ವಿಶ್ವವಿದ್ಯಾಲಯ ಸೇರಿದಂತೆ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕನ್ನಡ ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ ಹಾಗೂ ಲಲಿತ ಕಲಾ ವಿಶ್ವವಿದ್ಯಾಲಯಗಳು ಹಾಗೂ ಪ್ರಾಧಿಕಾರಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ತರಲು ಚಿಂತನೆ ನಡೆಸಲಾಗಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸೋಮವಾರ ಆಯೋಜಿಸಿದ್ದ ‘ಗೌರವ ಸದಸ್ಯತ್ವ ಪ್ರದಾನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ವಿಚಾರಗಳು, ಕಲಾವಿದರು ಮತ್ತು ಅವರ ಅಧ್ಯಯನಗಳು ಒಂದೇ ಸೂರಿನಡಿ ಬಂದಾಗ, ಭಾಷೆಯ ಬೆಳವಣಿಗೆ ಹಾಗೂ ಸಂಸ್ಕೃತಿಯ ಅಭಿವೃದ್ಧಿಗೆ ಅನುಕೂಲವಾಗಲಿದೆ’ ಎಂದರು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ದೊಡ್ಡರಂಗೇಗೌಡ, ಹಂಪ ನಾಗರಾಜಯ್ಯ, ಗೊ.ರು.ಚನ್ನಬಸಪ್ಪ, ಹಾಗೂ ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ ಗೌರವ ಸದಸ್ಯತ್ವ ಪ್ರದಾನ ಮಾಡಲಾಯಿತು. ಸಚಿವ ಅರವಿಂದ ಲಿಂಬಾವಳಿ, ಮನು ಬಳಿಗಾರ್ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪದ್ಮರಾಜ ದಂಡಾವತಿ, ಮಲ್ಲಿಕಾರ್ಜುನಪ್ಪ, ಕೆ.ರಾಜಕುಮಾರ್ ಇದ್ದಾರೆ

‘ಜನರಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಿನ ಸಮಯ ಮಗ್ನರಾಗಿರುತ್ತಾರೆ. ಹಾಗಾಗಿ, ಬರಹಗಾರರು ಇ-ಪುಸ್ತಕ ಮತ್ತು ಕಿಂಡಲ್ ಮುಂತಾದ ಎಲೆಕ್ಟ್ರಾನಿಕ್ ಸಾಧನಗಳನ್ನು ಹೆಚ್ಚಾಗಿ ಬಳಸಬೇಕಿದೆ. ದೃಶ್ಯ ಮಾಧ್ಯಮದ ಮೂಲಕವೂ ಸಾಹಿತ್ಯವನ್ನು ಪ್ರಸಾರ ಮಾಡುವ ಕಲೆ ರೂಢಿಸಿಕೊಳ್ಳಬೇಕು’ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್,‘ಸಾಹಿತ್ಯ ಪರಿಷತ್ತಿಗೆ ಸರ್ಕಾರವು ಹಿಂದೆಂದಿಗಿಂತಲೂ ಹೆಚ್ಚಿನ ಅನುದಾನ ನೀಡುತ್ತಿದೆ’ ಎಂದರು.

ಐದು ಮಂದಿಗೆ ಗೌರವ ಸದಸ್ಯತ್ವ ಪ್ರದಾನ: ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸಾಹಿತಿಗಳಾದ ದೊಡ್ಡರಂಗೇಗೌಡ, ಗೊ.ರು.ಚನ್ನಬಸಪ್ಪ, ಹಂಪ ನಾಗರಾಜಯ್ಯ, ಹಾಗೂ ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ ಗೌರವ ಸದಸ್ಯತ್ವ ಪ್ರದಾನ ಮಾಡಲಾಯಿತು. ಸಾಹಿತಿ ವೀಣಾ ಶಾಂತೇಶ್ವರ ಅವರೂ ಈ ಸದಸ್ಯತ್ವಕ್ಕೆ ಭಾಜನರಾಗಿದ್ದಾರೆ. ಗೌರವ ಸದಸ್ಯತ್ವವು ತಲಾ ₹1 ಲಕ್ಷ ನಗದು ಹಾಗೂ ತಾಮ್ರಫಲಕ ಒಳಗೊಂಡಿವೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ದೊಡ್ಡರಂಗೇಗೌಡ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.



ಜಿ.ಟಿ. ದೇವೇಗೌಡ 'ಕೈ' ಹಿಡಿಯದಂತೆ ತಂತ್ರಗಾರಿಕೆ

• ಡಿ.ಬಿ.ನಾಗರಾಜ

ಮೈಸೂರು: ತವರಿನಲ್ಲಿ ಜೆಡಿಎಸ್ ಬಲ ಕುಂದಿಸಲು ಹಾಗೂ ಬಿಜೆಪಿಯ ನೆಲೆ ವಿಸ್ತರಣೆಯನ್ನು ತಡೆಯುವುದಕ್ಕಾಗಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೆಣೆದಿದ್ದ ತಂತ್ರಗಾರಿಕೆಗೆ ಸ್ವಪಕ್ಷೀಯರೇ ತಡೆಯೊಡ್ಡಿದ್ದಾರೆ ಎಂಬುದು ತಿಳಿದುಬಂದಿದೆ.

2018ರ ವಿಧಾನಸಭಾ ಚುನಾವಣೆಯಲ್ಲಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ತಮ್ಮನ್ನು ಪರಾಭವಗೊಳಿಸಿದ್ದ ಈ ಭಾಗದ ಒಕ್ಕಲಿಗರ ನಾಯಕ, ಈಗ ಜೆಡಿಎಸ್‌ನಿಂದ ಮಾನಸಿಕವಾಗಿ ದೂರವಾಗಿರುವ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡು; ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ತಂತ್ರಗಾರಿಕೆಯನ್ನು ಸಿದ್ದರಾಮಯ್ಯ ರೂಪಿಸಿದ್ದರು ಎನ್ನಲಾಗಿದೆ.

'ಜಿ.ಟಿ.ಡಿ ಕಾಂಗ್ರೆಸ್ ಸೇರಿದರೆ, ತಮ್ಮ ವಿರುದ್ಧದ ಒಕ್ಕಲಿಗ ವಿರೋಧಿ ಎಂಬ ಹಣೆಪಟ್ಟಿ ಕಳಚುವುದರ ಜೊತೆಗೆ ಆ ಸಮುದಾಯದ ಮತ ಸೆಳೆಯಲು ಅನುಕೂಲವಾಗುತ್ತದೆ ಹಾಗೂ ಮೈಸೂರು–ಚಾಮರಾಜನಗರ ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿ ಹಿಡಿತ ಹೊಂದಿರುವ ಅವರಿಂದ ಪಕ್ಷಕ್ಕೆ ಅನುಕೂಲವಾಗಲಿದೆ. ಈ ಭಾಗದಲ್ಲಿ ಬಲವರ್ಧನೆಯ ಕನಸು ಕಂಡಿದ್ದ ಬಿಜೆಪಿಗೆ ಭಾರೀ ಹಿನ್ನಡೆಯಾಗಲಿದೆ. ಜೆಡಿಎಸ್ ಬಲ ಕುಂದಿಸಲು ಅಸ್ತ್ರವಾಗಿಯೂ ಬಳಸಿಕೊಳ್ಳಬಹುದು' ಎಂಬುದು ಸಿದ್ದರಾಮಯ್ಯ ಆಲೋಚನೆಯಾಗಿತ್ತು. ಇದಕ್ಕೆ ಪೂರಕವಾದ ಚಟುವಟಿಕೆ ನಡೆದಿದ್ದವು ಎಂಬುದನ್ನು ಆಪ್ತ ವಲಯ ಖಚಿತಪಡಿಸಿದೆ.

ಜಿ.ಟಿ.ಡಿ ಸಹ ಕೆಲವು ಷರತ್ತು ಮುಂದಿಟ್ಟಿದ್ದರು. ಜಿಲ್ಲೆಯಲ್ಲಿನ ತಮ್ಮ ಬೆಂಬಲಿಗ ಶಾಸಕರೊಬ್ಬರನ್ನೂ ಕಾಂಗ್ರೆಸ್‌ಗೆ ಕರೆ ತರಲಿದ್ದು, ಅವರಿಗೂ ಅವಕಾಶ ಕೊಡುವಂತೆ ಕೇಳಿದ್ದರು ಎನ್ನಲಾಗಿದೆ.

ಮೈಸೂರಿನಲ್ಲಿ ಶನಿವಾರ (ಫೆ.20) ನಡೆದ ಸಮಾರಂಭವೊಂದರಲ್ಲಿ ವೇದಿಕೆ ಹಂಚಿಕೊಂಡಿದ್ದ ಸಿದ್ದರಾಮಯ್ಯ ಮತ್ತು ಜಿ.ಟಿ.ದೇವೇಗೌಡ.

'ಈ ಬೆಳವಣಿಗೆ ತಿಳಿಯುತ್ತಿದ್ದಂತೆಯೇ ಎಚ್‌.ಡಿ.ಕುಮಾರಸ್ವಾಮಿ ಅವರ ಆಪ್ತ ಶಾಸಕರೊಬ್ಬರು ಸೇರಿದಂತೆ ಕಾಂಗ್ರೆಸ್‌ನ ಮಾಜಿ ಸಚಿವ, ಮಾಜಿ ಶಾಸಕರು ಒಟ್ಟಾಗಿ, ಜಿ.ಟಿ. ದೇವೇಗೌಡರ ಸೇರ್ಪಡೆಗೆ ಅವಕಾಶವೇ ಸೃಷ್ಟಿಯಾಗದಂತೆ ರಾಜಕೀಯ ಚಕ್ರವ್ಯೂಹ ರಚಿಸಿದರು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಾಂಗ್ರೆಸ್ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಜಿ.ಟಿ.ದೇವೇಗೌಡ ಕಾಂಗ್ರೆಸ್‌ಗೆ ಸೇರ್ಪಡೆಯಾದರೆ ಭವಿಷ್ಯದಲ್ಲಿ ನಿಮಗೆ ತಲೆ ನೋವಾಗಲಿದ್ದಾರೆ. ಈಗಾಗಲೇ ಸಹಕಾರಿ ರಂಗದಲ್ಲಿ ರಾಜ್ಯದಲ್ಲಿ ಗುರುತಿಸಿಕೊಂಡಿರುವ ಜಿಟಿಡಿ ಪುತ್ರ ಹರೀಶ್‌ಗೌಡನ ಆಕ್ರಮಣಕಾರಿ ಪ್ರವೃತ್ತಿಯಿಂದ, ಮುಂದೆ ನಿಮ್ಮ ಪುತ್ರರ ರಾಜಕೀಯ ಭವಿಷ್ಯ ಮಸುಕಾಗಲಿದೆ ಎಂಬುದನ್ನು ಶಾಸಕ ಕೆ.ಆರ್.ರಮೇಶ್‌ಕುಮಾರ್ ಮೂಲಕ ಸಿದ್ದರಾಮಯ್ಯ ಕಿವಿಗೆ ಹಾಕಿದರು. ಇದರಿಂದ ಜಿಟಿಡಿ ಸೇರ್ಪಡೆಗೆ ಹಿನ್ನಡೆಯಾಯ್ತು' ಎಂದು ಅವರು ಹೇಳಿದರು.

ಶ್ರೀರಾಮಸೇವಾ ಮಂಡಳಿ ವತಿಯಿಂದ ಏಪ್ರಿಲ್ 13ರಿಂದ ಮೇ 13ರ ತನಕ ನಡೆಯಲಿರುವ 83ನೇ ರಾಮನವಮಿ ಜಾಗತಿಕ ಸಂಗೀತ ಉತ್ಸವದ ವೇದಿಕೆಗಾಗಿ ರೈಲ್ವೆ ಎಡಿಜಿಪಿ ಭಾಸ್ಕರರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ರಾಮಸೇವಾ ಮಂಡಳಿ ಮುಖ್ಯ ಮಾರ್ಗದರ್ಶಕ ಡಾ. ಸಿ.ಎಸ್. ಕೇದಾರ್ ಗುದ್ದಲಿ ಪೂಜೆ ನೆರವೇರಿಸಿದರು. ಮಂಡಳಿಯ ಕಾರ್ಯದರ್ಶಿ ಎಸ್.ಎನ್. ವರದರಾಜ್ ಮತ್ತು ಅಭಿಜಿತ್ ವರದರಾಜ್ ಇದ್ದರು – ಪ್ರಜಾವಾಣಿ ಚಿತ್ರ

'ಲಷ್ಕರ್' ಸಂಘಟನೆ; ಮೂರು ರಾಜ್ಯಗಳಲ್ಲಿ ಹಿಂದೂ ಮುಖಂಡರೇ ಗುರಿ

ಹತ್ಯೆಗೆ ಸಂಚು: ಆರೋಪಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ಮುಖಂಡರ ಹತ್ಯೆ ಹಾಗೂ ದೇಶದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ 'ಲಷ್ಕರ್‌–ಎ–ತೊಯ್ಬಾ' ನಿಷೇಧಿತ ಸಂಘಟನೆಯ ಇಬ್ಬರು ಶಂಕಿತ ಉಗ್ರರ ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಬೆಂಗಳೂರು, ಹುಬ್ಬಳ್ಳಿ ಹಾಗೂ ಮಹಾರಾಷ್ಟ್ರ, ತೆಲಂಗಾಣದ ಹಿಂದೂ ಮುಖಂಡರನ್ನು ಹತ್ಯೆ ಮಾಡಲು ಹಾಗೂ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣ ಭೇದಿಸಿದ್ದ ಎನ್‌ಐಎ ಅಧಿಕಾರಿಗಳು, ಬೆಂಗಳೂರಿನ ಡಾ. ಸಬೀಲ್ ಅಹ್ಮದ್ ಅಲಿಯಾಸ್ ಮೋಟು ಡಾಕ್ಟರ್ ಹಾಗೂ ಹೈದರಾಬಾದ್‌ನ ಅಸಾದುಲ್ಲಾ ಖಾನ್‌ನನ್ನು ಐದು ತಿಂಗಳ ಹಿಂದಷ್ಟೇ ಬಂಧಿಸಿದ್ದರು.

ಮುಖ್ಯಾಂಶಗಳು

- 5 ತಿಂಗಳ ಹಿಂದೆ ಇಬ್ಬರು ಆರೋಪಿಗಳ ಬಂಧನ
- ಬಂಧಿತರಲ್ಲಿ ಒಬ್ಬ ಬೆಂಗಳೂರಿನ ವೈದ್ಯ
- ಬೆಂಗಳೂರಿನ ಪತ್ರಕರ್ತರೊಬ್ಬರ ಹತ್ಯೆಗೂ ಸಂಚು

ಪ್ರಕರಣದ ತನಿಖೆ ನಡೆಸಿದ್ದ ಅಧಿಕಾರಿಗಳು, 13 ಆರೋಪಿಗಳ ವಿರುದ್ಧ ಕಳೆದ ವರ್ಷವೇ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅವರಿಗೆ ಈಗಾಗಲೇ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. ಇದೀಗ ಮತ್ತಿಬ್ಬರು ಆರೋಪಿಗಳ ವಿರುದ್ಧ ಹೆಚ್ಚುವರಿ ದೋಷಾರೋಪ ಪಟ್ಟಿ ಸಿದ್ಧಪಡಿಸಿ ನಗರದ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

'ಲಷ್ಕರ್‌-ಎ-ತೊಯ್ಬಾ ಸಂಘಟನೆ ಮಾತ್ರವಲ್ಲದೇ ಹಜರತ್‌-ಉಲ್‌-ಜಿಹಾದ್‌-ಇ-ಇಸ್ಲಾಮಿ ಸಂಘಟನೆಯಲ್ಲೂ ಆರೋಪಿಗಳು ಸದಸ್ಯರಾಗಿದ್ದರು. ಭಾರತದಲ್ಲಿ ವಿಧ್ವಂಸಕ ಕೃತ್ಯ ಎಸಗಲು ನಿರಂತರವಾಗಿ ಸಂಚು ರೂಪಿಸುತ್ತಲೇ ಇದ್ದರು. ಅದಕ್ಕಾಗಿ ಶಸ್ತ್ರಾಸ್ತ್ರಗಳನ್ನು ಮತ್ತು ಮದ್ದುಗುಂಡುಗಳನ್ನು ಸಂಗ್ರಹಿಸಿದ್ದರು. ಸಂಚು ಪತ್ತೆ ಮಾಡಿ 2012ರಲ್ಲಿ ಆರೋಪಿಗಳನ್ನು ಬಂಧಿಸಲಾಗಿತ್ತು' ಎಂದು ಎನ್‌ಐಎ ಮೂಲಗಳು ಹೇಳಿವೆ.

'ಬೆಂಗಳೂರಿನ ಪತ್ರಕರ್ತರೊಬ್ಬರ ಹತ್ಯೆಗೂ ಸಂಚು ರೂಪಿಸಲಾಗಿತ್ತು. ಈ ಸಂಬಂಧ 2012ರ ಆಗಸ್ಟ್ 30ರಂದು ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ಎನ್‌ಐಎಗೆ ವರ್ಗಾವಣೆ ಆಗಿತ್ತು' ಎಂದೂ ತಿಳಿಸಿವೆ.

ಪಿಂಚಣಿ: ಸಾರಿಗೆ ನೌಕರರ ಉಪವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭವಿಷ್ಯ ನಿಧಿ ಪ್ರಾಧಿಕಾರದಿಂದ ನ್ಯಾಯಯುತ ಪಿಂಚಣಿ ನೀಡಬೇಕು ಎಂದು ಆಗ್ರಹಿಸಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನಿವೃತ್ತ ನೌಕರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ನಿವೃತ್ತ ನೌಕರರ ಸಂಘದ ನೇತೃತ್ವದಲ್ಲಿ ಮೌರ್ಯ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದ ತನಕ ಮೆರವಣಿಗೆ ನಡೆಸಿ, ಬಳಿಕ ಧರಣಿ ನಡೆಸಿದರು.

ಕೇಂದ್ರ ಸರ್ಕಾರ 1995ರಲ್ಲಿ ಜಾರಿಗೆ ತಂದ (ಇಪಿಎಸ್‌-95) ಪಿಂಚಣಿ ಯೋಜನೆಗೆ ಸಾರಿಗೆ ಸಂಸ್ಥೆಗಳ ನೌಕರರನ್ನೂ ಸೇರ್ಪಡೆ ಮಾಡಲಾಗಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದ ಸಾರಿಗೆ ಸಂಸ್ಥೆಗಳ ನಿವೃತ್ತ ನೌಕರರು –ಪ್ರಜಾವಾಣಿ ಚಿತ್ರ

ನೌಕರರಿಂದ ಭವಿಷ್ಯ ನಿಧಿಗೆ ಹಣದ ವಂತಿಗೆ ಸಲ್ಲಿಸಲಾಗಿದೆ. ಆದರೆ, 25ರಿಂದ 35 ವರ್ಷಗಳ ಸೇವೆ ಸಲ್ಲಿಸಿದ ನೌಕರರಿಗೆ ತಿಂಗಳಿಗೆ ಕನಿಷ್ಠ ₹1 ಸಾವಿರದಿಂದ ಗರಿಷ್ಠ 3₹ ಸಾವಿರ ಪಿಂಚಣಿಯನ್ನು ಭವಿಷ್ಯ ನಿಧಿ ಪ್ರಾಧಿಕಾರ ನೀಡುತ್ತಿದೆ ಎಂದು ಪ್ರತಿಭಟನಾನಿರತರು ಹೇಳಿದರು.

'ಸುಪ್ರೀಂ ಕೋರ್ಟ್ 2016ರಲ್ಲಿ ನ್ಯಾಯಯುತ ಪಿಂಚಣಿ ನೀಡಬೇಕು ಎಂದು ಆದೇಶಿಸಿದ್ದರೂ, ಅದನ್ನು ಪ್ರಾಧಿಕಾರ ಪಾಲಿಸುತ್ತಿಲ್ಲ. ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದಿಸಿಲ್ಲ. ಬೇರೆ ಸಂಸ್ಥೆಗಳ ನಿವೃತ್ತ ನೌಕರರಿಗೆ ನೀಡುತ್ತಿರುವ ಮಾದರಿಯಲ್ಲೇ ಸಾರಿಗೆ ಸಂಸ್ಥೆ ನಿವೃತ್ತ ನೌಕರರಿಗೂ ಪಿಂಚಣಿ ಸೌಲಭ್ಯ ನೀಡಬೇಕು' ಎಂದು ಆಗ್ರಹಿಸಿದರು.

ಪ್ರಾದಿಕಾರ ಸ್ಪಂದಿಸದ ಕಾರಣಕ್ಕೆ ಅನಿವಾರ್ಯವಾಗಿ ಉಪವಾಸ ಸತ್ಯಾಗ್ರಹ ನಡೆಸಬೇಕಾಗಿದೆ ಎಂದು ಸಂಘದ ಅಧ್ಯಕ್ಷ ಶಂಕರ್ ಕುಮಾರ್ ಹೇಳಿದರು.

ಶುಲ್ಕ ಕಡಿತ: ಖಾಸಗಿ ಶಾಲೆಗಳಿಂದ ರ್‍ಯಾಲಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲಾ ಶುಲ್ಕ ಕಡಿತ ಆದೇಶ ಪರಿಷ್ಕರಿಸಲು ಸರ್ಕಾರವನ್ನು ಆಗ್ರಹಿಸಿ ಪ್ರಮುಖ 11 ಖಾಸಗಿ ಶಾಲಾ ಸಂಘಟನೆಗಳು ಮಂಗಳವಾರ (ಫೆ.23) ನಗರದಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಲಿದ್ದು, ಈ ಸಂಘಟನೆಗಳಡಿ ಬರುವ ಸುಮಾರು 10 ಸಾವಿರ ಖಾಸಗಿ ಶಾಲೆಗಳು ಸಂಪೂರ್ಣ ಬಂದ್ ಆಗಲಿವೆ.

ಖಾಸಗಿ ಶಾಲೆಗಳ ಮುಖ್ಯಸ್ಥರು, ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು, ಸಿಬ್ಬಂದಿ ಎಲ್ಲರೂ ಪ್ರತಿಭಟನೆಯಲ್ಲಿ ಭಾಗವಹಿಸುವುದರಿಂದ ಶಾಲೆಗಳಲ್ಲಿ ಯಾವುದೇ ತರಗತಿ ಮಕ್ಕಳಿಗೆ ಭೌತಿಕ ತರಗತಿಗಳಾಗಲಿ, ಆನ್‌ಲೈನ್ ತರಗತಿಗಳಾಗಲಿ ನಡೆಯುವುದಿಲ್ಲ ಎಂದು ಶಾಲೆಗಳು ಪೋಷಕರಿಗೆ ಸಂದೇಶ ರವಾನಿಸಿವೆ.

'ಬಡಪೋಷಕರದು ಅಸಂಘಟಿತ ಧ್ವನಿ'

'ಖಾಸಗಿ ಶಾಲಾ ಸಂಘಟನೆಗಳು ಒಂದು ನೆನಪಿಡಬೇಕು. ನಿಮ್ಮದು ಸಂಘಟಿತ ಶಕ್ತಿ. ಆದರೆ, ಆ ಬಡ ಪೋಷಕರದು ಅಸಂಘಟಿತ ಧ್ವನಿ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಅವರು ಶುಲ್ಕ ಕಡಿತ ವಿರುದ್ಧ ಪ್ರತಿಭಟನೆಗೆ ಮುಂದಾಗಿರುವ ಖಾಸಗಿ ಶಾಲಾ ಸಂಘಟನೆಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಬೆಳಿಗ್ಗೆ 10ಕ್ಕೆ ಸ್ವಾತಂತ್ರ್ಯ ಉದ್ಯಾನದವರೆಗೆ ರ್‍ಯಾಲಿ ಸಾಗಲಿದ್ದು, ಬೃಹತ್ ಪ್ರತಿಭಟನೆಯನ್ನೂ ಹಮ್ಮಿಕೊಳ್ಳಲಾಗಿದೆ. ಸುಮಾರು 30 ಸಾವಿರ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್), ಮ್ಯಾನೇಜ್‌ಮೆಂಟ್ಸ್ ಆಫ್ ಇಂಡಿಪೆಂಡೆಂಟ್ ಸಿಬಿಎಸ್‌ಇ ಸ್ಕೂಲ್ಸ್ ಅಸೋಸಿಯೇಷನ್(ಮಿಸ್ಕಾ), ಕರ್ನಾಟಕ ರಾಜ್ಯ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ಕುಸ್ಮಾ), ಕರ್ನಾಟಕ ಅನುದಾನ ರಹಿತ ಅಲ್ಪಸಂಖ್ಯಾತ ಶಾಲೆಗಳ ಸಂಘ ಸೇರಿದಂತೆ 11 ಸಂಘಟನೆಗಳ ಸಾವಿರಾರು ಶಾಲಾ ಆಡಳಿತ ಮಂಡಳಿಗಳ ಪ್ರತಿನಿಧಿಗಳು, ಶಿಕ್ಷಕರು ಹಾಗೂ ಇತರೆ ಸಿಬ್ಬಂದಿ ಭಾಗವಹಿಸಲಿದ್ದಾರೆ.

'ಕೋವಿಡ್‌ನಿಂದ ಖಾಸಗಿ ಶಾಲೆಗಳು ತೀವ್ರ ಆರ್ಥಿಕ ಸಂಕಷ್ಟದಲ್ಲಿವೆ. ಈ ಬಗ್ಗೆ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಸ್ಪಂದಿಸಿಲ್ಲ. ಆರ್ಥಿಕ ಪ್ಯಾಕೇಜ್ ಕೂಡ ಘೋಷಿಸಿಲ್ಲ. ಈಗ ಶೇ 30ರಷ್ಟು ಬೋಧನಾ ಶುಲ್ಕ ಕಡಿತ ಮಾಡಿದ್ದಾರೆ. ಆದರೆ, ನೈಜವಾಗಿ ಶೇ 60ರಷ್ಟು ನಷ್ಟ ಶಾಲೆಗಳಿಗೆ ಆಗುತ್ತಿದೆ. ಈಗ ಪ್ರತಿಭಟನೆಯೊಂದೇ ನಮಗೆ ಉಳಿದಿರುವ ದಾರಿ' ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಯ ಪ್ರಧಾನ ಕಾರ್ಯದರ್ಶಿ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿಯ ಸಂಚಾಲಕ ಡಿ. ಶಶಿಕುಮಾರ್ ಹೇಳಿದರು.

ಕೋವಿಡ್ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಪೋಷಕರಿಗೆ ನೆರವಾಗಲು ಸರ್ಕಾರ ಖಾಸಗಿ ಶಾಲೆಗಳಲ್ಲಿ ಶೇ 30ರಷ್ಟು ಬೋಧನಾ ಶುಲ್ಕ ಕಡಿತಗೊಳಿಸಿತ್ತು. ಶೇ 70ರಷ್ಟು ಬೋಧನಾ ಶುಲ್ಕ ಹೊರತುಪಡಿಸಿ ಇನ್ನಾವುದೇ ಶುಲ್ಕವನ್ನು ಪೋಷಕರಿಂದ ಈ ಸಲ ಸಂಗ್ರಹಿಸಬಾರದೆಂದು ಆದೇಶ ಮಾಡಿತ್ತು.

ಸುದ್ದಿ 2 ನಿಮಿಷ

ಕಪ್ಪುಹಣ ಪತ್ತೆಹಚ್ಚಿದ ಐ.ಟಿ. ಇಲಾಖೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು ಪುಣೆ ಮೂಲದ ತಂಬಾಕು ಮಾರಾಟ ಕಂಪನಿಯೊಂದರ ಮೇಲೆ ದಾಳಿ ನಡೆಸಿ, ₹ 335 ಕೋಟಿ ಮೌಲ್ಯದ ಕಪ್ಪುಹಣವನ್ನು ಪತ್ತೆ ಮಾಡಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ತಿಳಿಸಿದೆ.

ಫೆಬ್ರುವರಿ 17ರಿಂದ ಮಹಾರಾಷ್ಟ್ರದ 34 ಕಡೆಗಳಲ್ಲಿ ಶೋಧ ಆರಂಭವಾಗಿತ್ತು.

ಮಧ್ಯಪ್ರದೇಶದ ಸೋಯಾ ಉತ್ಪನ್ನಗಳ ತಯಾರಿಕಾ ಸಮೂಹವೊಂದರ ಮೇಲೆ ನಡೆಸಿದ ದಾಳಿಯಲ್ಲಿ ಆದಾಯ ತೆರಿಗೆ ಇಲಾಖೆಯು ಒಟ್ಟು ₹ 450 ಕೋಟಿ ಅಘೋಷಿತ ಆದಾಯವನ್ನು ಪತ್ತೆ ಮಾಡಿದೆ. 'ಲ್ಯಾಪ್‌ಟಾಪ್, ಹಾರ್ಡ್‌ ಡ್ರೈವ್, ಪೆನ್ ಡ್ರೈವ್‌ಗಳಲ್ಲಿ ಮಹತ್ವದ ದಾಖಲೆಗಳು ಲಭ್ಯವಾಗಿವೆ. ಅವುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ' ಎಂದು ಸಿಬಿಡಿಟಿ ಪ್ರಕಟಣೆ ತಿಳಿಸಿದೆ. ₹ 8 ಕೋಟಿ ಮೌಲ್ಯದ ನಗದು ಕೂಡ ಪತ್ತೆಯಾಗಿದೆ ಎಂದು ಅದು ಹೇಳಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಕೆ. ಶೇಷಾದ್ರಿ ಮಾತನಾಡಿದರು

'ಎಂಎಲ್‌ಸಿ ಮಾಡಲು ₹ 5 ಕೋಟಿ ಪಡೆದಿದ್ದ ಎಚ್‌.ಡಿ.ಕುಮಾರಸ್ವಾಮಿ'

ರಾಮನಗರ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ರಾಮನಗರದವರಾದ ಸಯ್ಯದ್ ಮುದೀರ್ ಆಗಾರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಲು ₹ 5 ಕೋಟಿ ಕಿಕ್‌ಬ್ಯಾಕ್ ಪಡೆದಿದ್ದರು ಎಂದು ಎಂದು ಕಾಂಗ್ರೆಸ್ ಮುಖಂಡ ಕೆ. ಶೇಷಾದ್ರಿ ಆರೋಪಿಸಿದರು.

'ಕಳೆದ ಚುನಾವಣೆಯಲ್ಲಿ ಚನ್ನಪಟ್ಟಣದ ನಿಜಲಿಂಗೇಗೌಡರಿಂದ ₹ 2 ಕೋಟಿ ಪಡೆದು ಇನ್ನೂ ಹಿಂತಿರುಗಿಸಿಲ್ಲ. ಇಂತಹವರು ನಮಗೆ ನೀತಿಪಾಠ ಮಾಡುವುದು ಎಷ್ಟು ಸರಿ?' ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

1994ರ ಚುನಾವಣೆಯೊಂದರಲ್ಲಿ ಕುಮಾರಸ್ವಾಮಿ ಪ್ರಚಾರ ಮಾಡುತ್ತಿದ್ದ ಚಿತ್ರ ಪ್ರದರ್ಶಿಸಿದ ಅವರು, 'ಆಯ್ಕೊಂಡು ತಿನ್ನೋಕೆ ಹವಾಯಿ ಚಪ್ಪಲಿ ಹಾಕೊಂಡು ಹುಣಿಸೆ ಹಣ್ಣು ಉದುರಿಸಲು ಬಂದವರು ನೀವು. ಅಧಿಕಾರದ ಮದದಲ್ಲಿ ರಾಮನಗರದ ಜನರನ್ನೇ ಆಯ್ಕೊಂಡು ತಿನ್ನೋರು ಎನ್ನುತ್ತಿರುವುದು ನಿಮ್ಮ ದುರಂಹಕಾರದ ಪರಮಾವಧಿಯನ್ನು ತೋರಿಸುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಸಿದ ಎತ್ತಿನಹೊಳೆ ಮೇಲ್ಸೇತುವೆ ಬೆಡ್ಡಿಂಗ್: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಕೋರ (ತುಮಕೂರು): ಹೋಬಳಿ ಬುರುಡಗಟ್ಟ ಗೇಟ್ ಬಳಿ ಎತ್ತಿನಹೊಳೆ ಯೋಜನೆಗಾಗಿ ನಿರ್ಮಿಸುತ್ತಿರುವ ಮೇಲ್ಸೇತುವೆ ಬೆಡ್ಡಿಂಗ್ ಶನಿವಾರ ಸಂಜೆ ಕುಸಿದು ನಾಲ್ವರು ಕಾರ್ಮಿಕರು ತೀವ್ರವಾಗಿ ಗಾಯಗೊಂಡಿದ್ದಾರೆ.

ವಿಡಿಯೊ ವೈರಲ್ ಆದ ನಂತರ ಘಟನೆ ನಡೆದಿರುವುದು ಬೆಳಕಿಗೆ ಬಂದಿದೆ. ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಎಲ್ಲರೂ ಪ್ರಾಣಾಪಾಯಾದಿಂದ ಪಾರಾಗಿದ್ದಾರೆ. ಗಾಯಗೊಂಡ ಕಾರ್ಮಿಕರೆಲ್ಲ ಉತ್ತರ ಭಾರತದವರು ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

₹ 39.73 ಲಕ್ಷ ವಂಚನೆ; ಎಫ್‌ಐಆರ್ ದಾಖಲು

ಬೆಂಗಳೂರು: ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದ ವ್ಯಕ್ತಿಯೊಬ್ಬ ಉಡುಗೊರೆ ಕಳುಹಿಸುವ ನೆಪದಲ್ಲಿ 70 ವರ್ಷದ ವೃದ್ಧರೊಬ್ಬರಿಂದ ₹ 39.73 ಲಕ್ಷ ಪಡೆದು ವಂಚಿಸಿದ್ದು, ವೈಟ್‌ಫೀಲ್ಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆರೋಪಿಗಳಾದ ಅಮೆರಿಕದ ಸಿಸ್ಟರ್ ಜೀನಾ, ಜೀಯಾನ್, ಮ್ಯಾಥ್ಯೂ ವಿರುದ್ಧ ಪ್ರಕರಣ ದಾಖಲಾಗಿದೆ. 2020ರ ನ. 10ರಂದು ದೂರುದಾರರಿಗೆ ಕರೆ ಮಾಡಿದ್ದ ಆರೋಪಿಗಳು, ದೆಹಲಿ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳೆಂದು ಪರಿಚಯಿಸಿಕೊಂಡಿದ್ದರು. ಅಮೆರಿಕದ ಸ್ನೇಹಿತ ಉಡುಗೊರೆ ಕಳುಹಿಸಿದ್ದು , ಅದನ್ನು ಬಿಡಿಸಿಕೊಳ್ಳಲು ಶುಲ್ಕ ಪಾವತಿ ಮಾಡಬೇಕು ಎಂದಿದ್ದರು. ಅದನ್ನು ನಂಬಿದ್ದ ದೂರುದಾರ ಹಣ ಜಮೆ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು, ಪುನಃ ಹಣ ಕೇಳಲಾರಂಭಿಸಿದ್ದರು. ಉಡುಗೊರೆ ಮಾತ್ರ ಕೊಟ್ಟಿರಲಿಲ್ಲ. ಅನುಮಾನಗೊಂಡ ವೃದ್ಧ, ಪರಿಚಯಸ್ಥರಿಗೆ ವಿಷಯ ತಿಳಿಸಿದ್ದರು. ನಂತರ ಠಾಣೆಗೆ ಬಂದು ದೂರು ನೀಡಿದ್ದಾರೆ. ಹೊರ ರಾಜ್ಯಗಳಲ್ಲಿರುವ ಬ್ಯಾಂಕ್ ಖಾತೆಗಳ ಮೂಲಕ ಆರೋಪಿಗಳು, ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ' ಎಂದೂ ತಿಳಿಸಿವೆ.

ರೈಲು ಹರಿದು ಮಹಿಳೆ ಸಾವು

ಬೆಂಗಳೂರು: ಮಲ್ಲೇಶ್ವರ ರೈಲ್ವೆ ನಿಲ್ದಾಣ ಬಳಿ ರೈಲು ಹರಿದು ಪ್ರೀತಿ ಎಂಬ ಮಹಿಳೆ ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ. 'ಮೃತ ಮಹಿಳೆಯ ವಿಳಾಸ ಪತ್ತೆಯಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಮಂಗಳೂರಿಗೆ ರೈಲು ಹೊರಟಿತ್ತು. ಸೋಮವಾರ ಬೆಳಿಗ್ಗೆ 7ಕ್ಕೆ ಮಲ್ಲೇಶ್ವರ ನಿಲ್ದಾಣಕ್ಕೆ ರೈಲು ಬರುತ್ತಿದ್ದಂತೆ ಮಹಿಳೆ, ಹಳಿಗೆ ಹಾರಿದ್ದರು' ಎನ್ನಲಾಗಿದೆ.

ಕಾಂಗೊದ ಇಟಲಿ ರಾಯಭಾರಿ ಹತ್ಯೆ

ಗೋಮಾ (ಎಎಫ್‌ಪಿ): ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊದ (ಡಿಆರ್ ಕಾಂಗೊ) ಗೋಮಾ ಬಳಿ ವಿಶ್ವಸಂಸ್ಥೆಯ ಬೆಂಗಾವಲು ವಾಹನಗಳ ಮೇಲೆ ಸೋಮವಾರ ನಡೆದ ದಾಳಿಯಲ್ಲಿ ಇಟಲಿ ರಾಯಭಾರಿ ಲೂಕಾ ಅಟ್ಟಾನಸಿಯೊ ಸೇರಿ ಮೂವರು ಸಾವಿಗೀಡಾಗಿದ್ದಾರೆ.

ಲೂಕಾ ಅವರು ಸಾವಿಗೀಡಾಗಿರುವುದನ್ನು ಇಟಲಿ ಸರ್ಕಾರ ದೃಢಪಡಿಸಿದೆ.



ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ" ಬೆಳಗಾವಿ–590 018, ಕರ್ನಾಟಕ ರಾಜ್ಯ
ಪ್ರೊ. ಎ.ಎಸ್. ದೇಶಪಾಂಡೆ ಬಿ.ಇ., ಎಮ್.ಟೆಕ್.,ಪಿಎಚ್.ಡಿ., ಕುಲಸಚಿವರು — ದೂರವಾಣಿ ಸಂ. (0831) 2498100, ಫ್ಯಾಕ್ಸ ಸಂ. (0831) 2405467
ಕ್ರಮ ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./ಕಿ.ಅ.(ಇ)/2020–21/ಐ.ಎಫ್.ಟಿ.ನಂ.40/6207 ದಿನಾಂಕ:20 FEB 2021

ಟೆಂಡರ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಅರ್ಹ ಫರ್ಮ/ಏಜನ್ಸಿಯವರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ ಕೆ.ಜಿ. ರ ಮೂಲಕ ಟೆಂಡರ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಕಾಮಗಾರಿ ಹೆಸರುಗಳು:1)ವಿತಾವಿ ಯ ಸ್ನಾತಕೋತ್ತರ ಕೇಂದ್ರ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪೂರದ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಉಪಕರಣಗಳು/ಕಿಟ್‌ಗಳನ್ನು ಪೂರೈಸುವ ಕಾಮಗಾರಿ ಮೊತ್ತ ರೂ.2,70,000/–, 2)ವಿತಾವಿ ಪ್ರಾದೇಶಿಕ ಕೇಂದ್ರ, ಕಲಬುರಗಿಯ ಆವರಣ ರಸ್ತೆಯಲ್ಲಿಯ 100 ಕೆ.ವಿ.ಎ. ದಿಂದ 175 ಕೆ.ವಿ.ಎ. ವರೆಗೆ ಜಿಎಚ್‌ಟಿಪಿ–65 ಗೆ ಮೇಲ್ದರ್ಜೆಗೆ ಹೆಚ್ಚಿಸುವ ಕಾಮಗಾರಿ ಮೊತ್ತ ರೂ.3,76,962/–. ಇತರೆ ಮಾಹಿತಿಗಳನ್ನು htpp// www. vtu. ac.in/tender ಅಂತರಜಾಲ ಮೂಲಕ ದಿನಾಂಕ: 20–02–2021 ರಿಂದ ಪಡೆದುಕೊಳ್ಳಬಹುದು.

ಸಹಿ/–ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ
DIPR/BGM/RO-NO-1420/MCA/2020-21

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಟೆಂಡರ್ ಪ್ರಕಟಣೆ ಸಂಖ್ಯೆ. 52/2020–21 ದಿನಾಂಕ: 17.02.2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 1ನೇ ದರ್ಜೆ ಗುತ್ತಿಗೆದಾರರು, ಟೆಂಡರ್ ನಮೂನೆ **KW-4** ರೀತ್ಯಾ ದ್ವಿ–ಲಕೋಟೆ ಪದ್ಧತಿಯಂತೆ) ನಂಜನಗೂಡು ತಾಲ್ಲೂಕಿನ ಅಂದಾಜು ಮೊತ್ತ ರೂ.998.00 ಲಕ್ಷಗಳ 1 ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 22.02.2021 ರಿಂದ 08.03.2021 ರವರೆಗೆ ಸಾಧ್ಯವಾದರೆ ಟೆಂಡರ್ ತೆರೆಯುವ ದಿನಾಂಕ: 09.03.2021 ರ ಸಂಜೆ 5.00 ಘಂಟೆಯ ನಂತರ.** ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://eproc karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DDMYS/MCA/1040/2020-21

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 08212420810
ಐಟಂವಾರು ಟೆಂಡರು ಅಧಿಸೂಚನೆ ಸಂ. 25 /2020-21/ ದಿನಾಂಕ: 03.02.2021

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಟಿ.ನರಸೀಪುರ ಕ್ಷೇತ್ರ KW-3 ನಿಬಂಧನೆ ಮತ್ತು ಷರತ್ತುಗಳನ್ವಯ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. **ಕಾಮಗಾರಿ ಹೆಸರು: ತಿ. ನರಸೀಪುರ ತಾಲ್ಲೂಕು ಮೂಗೂರು ಗ್ರಾಮದಲ್ಲಿರುವ ತ್ರಿಪುರಂಭಾದೇವಿ ದೇವಸ್ಥಾನದಲ್ಲಿ ಹೊಸದಾಗಿ ರಥ ನಿರ್ಮಿಸುವ ಕಾಮಗಾರಿ** (Indent No:120014) ಟೆಂಡರಿಗಿಟ್ಟ ಮೊತ್ತ **ರೂ. 89.27 ಲಕ್ಷಗಳು As per Govt Order No:** ಸರ್ಕಾರದ ಆದೇಶ ಸಂಖ್ಯೆ : **DE**: 675:ವೆಚ್ಚ–12/2020, ಬೆಂಗಳೂರು ದಿನಾಂಕ: 22.12.2020 **EMD Amount As been Relaxed and the Contractors have to apload the declaration Form in the respective Tender this order is valid till 31.12.2021** 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ನೊಂದಾಯಿಸಿರುವವರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ದಿನಾಂಕ:– **08.02.2021** ರಿಂದ **07.03.2021** ಸಂಜೆ **5.30** ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ ಮತ್ತು ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 08212420810
ಕೆಳಕಂಡ ಐಟಂವಾರು ಟೆಂಡರ್ ಅಧಿಸೂಚನೆಗಳನ್ನು ಆಹ್ವಾನಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ನಂಜನಗೂಡು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ **KW-1, KW-2**, ಮತ್ತು **KW-3** ನಿಬಂಧನೆ ಮತ್ತು ಷರತ್ತುಗಳನ್ವಯ ಟೆಂಡರ್‌ನ್ನು ಏಕ–ಲಕೋಟೆ ಹಾಗೂ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕಾಮಗಾರಿಗಳಲ್ಲಿ ಗರಿಷ್ಠ ಟೆಂಡರಿಗಿಟ್ಟ ಮೊತ್ತ ರೂ. **98.77** ಲಕ್ಷಗಳು ಮತ್ತು ಕನಿಷ್ಟ ಟೆಂಡರಿಗಿಟ್ಟ ಮೊತ್ತ ರೂ. 10.00 ಲಕ್ಷಗಳಾಗಿರುತ್ತದೆ. ಸರ್ಕಾರದ ಆದೇಶ ಸಂ: DE675 ವೆಚ್ಚ–12/2020, ಬೆಂಗಳೂರು ದಿನಾಂಕ: 22.12.2020 ರನ್ವಯ ದಿನಾಂಕ: 31.12.2021 ರವರೆಗಿನ ಎಲ್ಲಾ ಟೆಂಡರ್‌ಗಳಿಗೆ ಇ.ಎಂ.ಡಿ ಬದಲಾಗಿ ಇ.ಎಂ.ಡಿ ಡಿಕ್ಲರೇಷನ್ ಫಾರಂನ್ನು ಟೆಂಡರ್ ದಾಖಲಾತಿಗಳೊಂದಿಗೆ ಸಲ್ಲಿಸಲು ಸೂಚಿಸಿದೆ. 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ನೊಂದಾಯಿಸಿರುವವರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಕಾಮಗಾರಿಗಳ ಟೆಂಡರ್‌ಗಳನ್ನು **ಕೆಳಕಂಡಂತೆ ಸಂಜೆ 4.00 ಘಂಟೆವರೆಗೆ** ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಕರೆಯ ಸಂಖ್ಯೆ
1.	10/2020–21	35	3ನೇ ಕರೆ	01.03.2021
2.	20/2020–21	11	2ನೇ ಕರೆ	01.03.2021
3.	29/2020–21	1 to 3	1ನೇ ಕರೆ	01.03.2021

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು

ನಿದ್ರೆ ಎಂಬ ಆರೋಗ್ಯಸೂತ್ರ

> ಸುಖನಿದ್ರೆಯು ಶರೀರವನ್ನು ತಾಯಿಯಂತೆ ಕಾಪಾಡುತ್ತದೆ; ವಿಷ್ಣುವು ಹೇಗೆ ಲೋಕರಕ್ಷಕನೋ ಹಾಗೆ ನಿದ್ರೆಯು ಶರೀರವನ್ನು ಆರೋಗ್ಯಪೂರ್ಣವಾಗಿ ಕಾಪಾಡುತ್ತದೆ.

ಡಾ. ವಿಜಯಲಕ್ಷ್ಮಿ ಪಿ.

ಆಹಾರನಿದ್ರೆಗಳು ಎಲ್ಲ ಜೀವಿಗಳಿಗೂ ಜೀವನಾವಶ್ಯಕತೆಯಾಗಿದೆ. ಮಗುವಿನಿಂದ ಹಿಡಿದು ಮುದುಕರವರೆಗೂ ನಿದ್ರೆ ಸರಿ ಇಲ್ಲದಿದ್ದರೆ ಶರೀರ–ಮನಸ್ಸುಗಳು ಉತ್ಸಾಹವನ್ನು ಕಳೆದುಕೊಳ್ಳುತ್ತವೆ.

ನಿದ್ರೆಯಿಂದ ಎದ್ದಾಗ ಶಾರೀರಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ಯಾವುದೇ ರೀತಿಯ ಇರಿಸು ಮುರುಸು ಇರದೆ ಮೈ ಕೈ ಹಗುರವಾಗಿದ್ದು, ಮನಸ್ಸು ಉತ್ಸಾಹದಿಂದ ಕೂಡಿದ್ದರೆ ಅದು ಸುಖವಾದ ನಿದ್ರೆ. ಸುಖವಾಗಿ ನಿದ್ರಿಸುವವನು ಆರೋಗ್ಯ ಪೂರ್ಣವಾದ ದೀರ್ಘಾಯುಷ್ಯವನ್ನು ಹೊಂದುತ್ತಾನೆ. ನಿದ್ರೆ ಬಾರದೆ ಇರೋದು ಅಥವಾ ಅತಿಯಾಗಿ ನಿದ್ರೆ ಬರೋದು ಎರಡೂ ಅನಾರೋಗ್ಯದ ಲಕ್ಷಣಗಳೇ. ಅಷ್ಟೇ ಅಲ್ಲದೇ, ಯಾವುದೇ ಅನಾರೋಗ್ಯವಿಲ್ಲದೆ ಹಗಲುನಿದ್ರೆ ಮಾಡುವುದು ಅನೇಕ ಥೈರಾಯ್ಡ್ ಮುಂತಾದ ಹಾರ್ಮೋನ್ ವ್ಯತ್ಯಾಸದಿಂದ ಬರುವ ಹಲವಾರು ರೋಗಗಳಿಗೆ ಆಹ್ವಾನ ಕೊಟ್ಟಂತೆ.

ಸುಖನಿದ್ರೆ ಬರಲು ಏನು ಮಾಡಬೇಕು?

ವ್ಯಾಯಾಮ, ದೇಹಶ್ರಮ, ಸಮಯಕ್ಕೆ ಸರಿಯಾದ ಆಹಾರ, ನೆಮ್ಮದಿಯಿಂದ ಕೂಡಿರುವ ಮನಸ್ಸು ಸುಖನಿದ್ರೆಯ ಸುಲಭ ಸೂತ್ರಗಳು. 'ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ರೆ ಬರುತ್ತದೆ' ಎನ್ನುವ ಗಾದೆ ಸಂಪೂರ್ಣ ಸತ್ಯ.

ಬೆಳಗ್ಗೆ ಸೂರ್ಯೋದಯಕ್ಕಿಂತ ಮೊದಲೇ ಏಳುವುದು ರಾತ್ರಿ ಸುಖನಿದ್ರೆಗೆ ಕಾರಣವಾದರೆ, ಬೆವರು ಬರುವವರೆಗೂ ವ್ಯಾಯಾಮ ಮಾಡುವುದು, ವಿಪರೀತ ಶಾರೀರಿಕ ಶ್ರಮ ಇರುವವರು ನಿತ್ಯವೂ ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆಯನ್ನು ಹಚ್ಚಿ ಸ್ನಾನ ಮಾಡುವುದು ವಾರಕ್ಕೊಮ್ಮೆ ಹರಳೆಣ್ಣೆ ಹಚ್ಚಿ ಹದ ಬಿಸಿನೀರಿನಲ್ಲಿ ಸ್ನಾನ ಮಾಡುವುದು, ಎಣ್ಣೆ ಹಚ್ಚಿಕೊಂಡು ಮೈಯನ್ನು ಹದವಾಗಿ ಒತ್ತಿಸಿಕೊಳ್ಳುವುದು, ಸಕಾಲದಲ್ಲಿ ಸರಿಯಾದ ಪ್ರಮಾಣದಲ್ಲಿ ಆಹಾರಸೇವನೆ – ಇವೆಲ್ಲವೂ ನಿದ್ರಾಜನಕಗಳೇ.

ದುಡಿದು ದಣಿದ ದೇಹಕ್ಕೆ ನವಚೈತನ್ಯವನ್ನು ತುಂಬುತ್ತದೆ ನಿದ್ರೆ. ಆದರೆ ವಿಪರೀತ ದಣಿವಾದಾಗ ಕೆಲವೊಮ್ಮೆ ನಿದ್ರೆ ಬಾರದಿರಲೂಬಹುದು. ವಿಪರೀತ ಚಿಂತೆ ಇದ್ದಾಗಲೂ ನಿದ್ರೆ ಬರುವುದಿಲ್ಲ. ಅಂತಹ ಸಮಯದಲ್ಲಿ ಅಂಗಾಲಿಗೆ ಕೊಬ್ಬರಿಯೆಣ್ಣೆ ಅಥವಾ ತುಪ್ಪವನ್ನು ಹಚ್ಚಿ ಚೆನ್ನಾಗಿ ಬಿಸಿ ಬರುವವರೆಗೂ ತಿಕ್ಕಿ ಅಥವಾ ಉಜ್ಜಿಕೊಂಡು ನಂತರ ಕಾಲನ್ನು ಸುಮಾರು 10 ನಿಮಿಷದವರೆಗೂ ಹದವಾದ ಬಿಸಿನೀರಿನಲ್ಲಿ ಪಾದವನ್ನು ಮುಳುಗಿಸಿಟ್ಟುಕೊಂಡು, ನಂತರ ಕಾಲನ್ನು ಒರೆಸಿಕೊಂಡು ತಕ್ಷಣ ಕಾಲಿನ ಮೇಲೆ ಹೊದೆದುಕೊಂಡು (ಕಾಲು ತಣ್ಣಗಾಗದಂತೆ ನೋಡಿಕೊಳ್ಳಬೇಕು) ಮಲಗಬೇಕು. ಹೀಗೆ ಮಾಡುವುದರಿಂದ ಪಾದದಿಂದ ತಲೆಯವರೆಗಿನ ರಕ್ತಪರಿಚಲನೆಯು ಸುಗಮವಾಗಿ ಸುಖವಾದ ನಿದ್ರೆಯು ಬರುತ್ತದೆ. ಎಷ್ಟೋ ವರ್ಷಗಳಿಂದ ನಿದ್ರೆ ಸರಿಯಾಗಿ ಬರುವುದಿಲ್ಲ ಎನ್ನುವವರಿಗೂ ಕೂಡ ಸುಖನಿದ್ರೆಯನ್ನು ಕೊಟ್ಟಿದೆ ಈ ಉಪಾಯ.

ರಾತ್ರಿ ಹೊತ್ತು ಬೇಗನೆ ಎಂದರೆ ಸುಮಾರು 7.30ರಿಂದ 8 ಗಂಟೆಯ ಒಳಗೆ ಆಹಾರವನ್ನು ಸೇವಿಸುವುದು, ಮಜ್ಜಿಗೆ ಅಥವಾ ಮೊಸರಿನ ಬದಲು ಹಾಲನ್ನು ಸೇವಿಸುವುದು ಸುಖ ನಿದ್ರೆ ಬರಲು ಕಾರಣವಾಗುತ್ತದೆ. ಆದರೆ ಹಾಲಿನ ಜೊತೆ ಉಪ್ಪು, ಉಪ್ಪಿನಕಾಯಿ ಅಥವಾ ಹುಳಿ, ಉಪ್ಪು, ಖಾರ ಹಾಕಿ ತಯಾರಿಸಿರುವ ಸಾರು, ಸಾಂಬಾರು ಸೇರಿಸಿ ತಿನ್ನುವುದು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಮಧುಮೇಹ, ರಕ್ತದ ಒತ್ತಡ ಹೆಚ್ಚಾಗುವುದು, ಚರ್ಮಕ್ಕೆ ಸಂಬಂಧಪಟ್ಟ ತೊಂದರೆಗಳಿಗೆ ಬುನಾದಿಯಾಗುತ್ತದೆ.

ಖಾಲಿ ಹಾಲು ಅಥವಾ ಹಾಲನ್ನ ಅಥವಾ ಸಕ್ಕರೆ ಅಥವಾ ಶುದ್ಧ ಬೆಲ್ಲ ಸೇರಿಸಿ ತಿನ್ನಬಹುದು. ಇದೂ ಸಹ ನಿದ್ರಾಜನಕ ಆಹಾರವೇ.

ಮಲಗುವ ಮೊದಲು ಸುಮಾರು ಹತ್ತರಿಂದ ಹದಿನೈದು ನಿಮಿಷ ಯಾವುದೇ ಇತರ ಚಿಂತನೆಗಳನ್ನು ನಡೆಸದೆ, ಮೊಬೈಲ್, ಟಿ.ವಿ. ಇವುಗಳನ್ನು ನೋಡದೆ ಏಕಚಿತ್ತದಿಂದ ಧ್ಯಾನ ಮಾಡಿ ಮಲಗುವುದರಿಂದ ಮನಸ್ಸು ಶಾಂತಸ್ಥಿತಿಗೆ ಬಂದು ಸುಖನಿದ್ರೆ ಬರುತ್ತದೆ.

ಹಗಲು ನಿದ್ರಿಸಬಹುದೇ?

ರಾತ್ರಿ ನಿದ್ರೆ ಬರುವುದಿಲ್ಲವೆಂದು ಕೆಲವರು ಹಗಲು ನಿದ್ರಿಸುವ ಅಭ್ಯಾಸ ಇಟ್ಟುಕೊಂಡಿರುತ್ತಾರೆ. ಆದರೆ ಇದು ಆರೋಗ್ಯಕರ ಅಭ್ಯಾಸವಲ್ಲ. ಮುದುಕರು, ಮಕ್ಕಳು, ಗರ್ಭಿಣಿಯರು ಅಥವಾ ಅನಾರೋಗ್ಯದಿಂದ ಬಳಲುತ್ತಿರುವವರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರು, ಶ್ರಮಜೀವಿಗಳು ಸುಮಾರು ಮುಕ್ಕಾಲರಿಂದ ಒಂದು ಗಂಟೆ ಕಾಲ ಹಗಲು ಎಂದರೆ ಮಧ್ಯಾಹ್ನದ ಹೊತ್ತಿನಲ್ಲಿ ನಿದ್ರೆ ಮಾಡಬಹುದು. ರಾತ್ರಿ ನಿದ್ರೆ ಕೆಟ್ಟಿದ್ದರೆ, ರಾತ್ರಿನಿದ್ರೆಯ ಅರ್ಧಭಾಗ ನಿದ್ರೆ ಎಂದರೆ ರಾತ್ರಿ 6 ಗಂಟೆಯ ನಿದ್ರೆಗೆ ಹಗಲಿನ 3 ಗಂಟೆ ಸುಖನಿದ್ರೆಯು ಸಮವಾಗುತ್ತದೆ. ಇನ್ನು ಕಫಸಂಬಂಧಿ ರೋಗದಿಂದ, ಕೆಮ್ಮು, ನೆಗಡಿ, ದಮ್ಮು ತಲೆಭಾರ ಮುಂತಾದ ರೋಗಗಳಿಂದ ಬಳಲುತ್ತಿರುವವರು ಹಗಲುನಿದ್ರೆ ಮಾಡುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತವೆ. ಅಂತಹವರು ಕುಳಿತುಕೊಂಡು, ತೂಕಡಿಸಿ ನಿದ್ರೆ ಮಾಡುವುದು ಒಳಿತು.

ಸಕಾಲದಲ್ಲಿ ಮಲಗಿ ಸಕಾಲದಲ್ಲಿ ಎದ್ದು ಆರೋಗ್ಯವನ್ನು ಕಾಪಾಡಿಕೊಳ್ಳೋಣ.

ಹಗಲುನಿದ್ರೆ ಬೇಡ

ಏನೂ ಕೆಲಸವಿಲ್ಲ ಎಂದೋ, ಭಾನುವಾರ ಎಂದೋ ಹಗಲು ಹೆಚ್ಚು ನಿದ್ರೆ ಮಾಡುವುದರಿಂದ, ಮೈಕೈ ನೋವು, ಉತ್ಸಾಹಹಾನಿ, ತೂಕ ಹೆಚ್ಚಾಗುವುದು, ಬಾಯಿರುಚಿ ಹಾಳಾಗುವುದು, ಊಟ ಸೇರದಿರುವುದು, ರಕ್ತಹೀನತೆ, ಕೆಲಸ ಮಾಡದಿದ್ದರೂ ಸುಸ್ತಾಗುವುದು, ಅಜೀರ್ಣ, ಆಲಸ್ಯ, ಕಣ್ಣುರಿ, ಮಾನಸಿಕ ಚಂಚಲತೆ – ಹೀಗೆ ಅನೇಕ ತೊಂದರೆಗಳು ಉಂಟಾಗುತ್ತದೆ. ಅಲ್ಲದೆ, ಅನೇಕ ಬಾರಿ ಇದಕ್ಕೆ ಕೊಟ್ಟ ಚಿಕಿತ್ಸೆಯು ಸಂಪೂರ್ಣ ಫಲಕಾರಿಯಾಗುವುದಿಲ್ಲ.

ಆಹಾರದಲ್ಲಿದೆ ಆರೋಗ್ಯದ ಗುಟ್ಟು

ಕೆ. ಸಿ. ರಘು

'ವೈದ್ಯರು ಇದ್ದೂ ರೋಗಿ ಬದುಕಿಕೊಂಡೇಬಿಟ್ಟ' ಎನ್ನುವ ವ್ಯಂಗ್ಯದ ಮಾತಿದೆ.

ಇಬ್ಬರು ವೈದ್ಯರು ಕೆಲವು ದಿನ ಊರು ಬಿಟ್ಟು ಹೋದವರು ಪ್ರಯಾಣ ಮುಗಿಸಿ ತಿರುಗಿ ಊರಿಗೆ ಬರುವಾಗ ಅಲ್ಲಿ ಶವಸಂಸ್ಕಾರವಾಗುತ್ತಿದ್ದುದನ್ನು ಕಂಡು ಅವರು ಹೀಗೆ ಮಾತನಾಡಿಕೊಳ್ಳುವುದನ್ನು ಸಂಸ್ಕೃತ ಸುಭಾಷಿತವೊಂದು ಹೀಗೆ ಹೇಳಿದೆ: ಇಬ್ಬರೂ ಊರಲ್ಲಿಲ್ಲದಿದ್ದಾಗ ಇವನು ಸತ್ತದ್ದಾದರೂ ಹೇಗೆ?

ಇವಾನ್ ಇಲಿಯಿಚ್ ತನ್ನ 'ಲಿಮಿಟ್ಸ್ ಟು ಮೆಡಿಸನ್' ಎನ್ನುವ ಪುಸ್ತಕದಲ್ಲಿ ಆರೋಗ್ಯವನ್ನು ವೈದ್ಯಕೀಯ ಉದ್ಯಮದಿಂದ ವಿಮುಕ್ತಗೊಳಿಸಬೇಕೆಂದು ಪ್ರತಿಪಾದಿಸುತ್ತಾನೆ.

ಭಾರತ ಸ್ವಾತಂತ್ರ್ಯಗೊಂಡ ನಂತರ ಆರೋಗ್ಯನೀತಿಗಾಗಿ ಭೋರ್ ಕಮಿಟಿಯನ್ನು ನೇಮಿಸಿತ್ತು. ಇಲ್ಲಿನ ಜಾನಪದ ಪರಂಪರೆ, ಆಯುರ್ವೇದ, ಯೋಗ ಮತ್ತು ಹತ್ತು ಹಲವು ಸ್ಥಳೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಆರೋಗ್ಯ ಆಯಾಮಗಳನ್ನು ಬದಿಗೊತ್ತಿ ಆರೋಗ್ಯವನ್ನು ಸಂಪೂರ್ಣವಾಗಿ ಪಾಶ್ಚಾತ್ಯ ಆರೋಗ್ಯ ವ್ಯವಸ್ಥೆಗೆ ವೈದ್ಯಕೀಕರಣಗೊಳಿಸಿದ್ದು ಅನೇಕ ಅಪಾಯಗಳನ್ನು ತಂದೊಡ್ಡಿತು ಎನ್ನುವುದು ಹಲವರ ಅಭಿಪ್ರಾಯ.

ಇಂದು ಮನುಷ್ಯರ ಕಾಯಿಲೆಗಳ ಸಂಖ್ಯೆಯನ್ನು ಸುಮಾರು ಹತ್ತು ಸಾವಿರವೆಂದು ಗುರುತಿಸಲಾಗಿದೆ. ಅಪರೂಪದ ಮತ್ತು ತಬ್ಬಲಿ ಕಾಯಿಲೆಗಳು ಎನ್ನುವ ಪಟ್ಟಿಯನ್ನೂ ಇಟ್ಟುಕೊಂಡರೆ ಸುಮಾರು 30 ಸಾವಿರ ಕಾಯಿಲೆಗಳು ಇರಬಹುದೆಂದು ಜರ್ಮನಿಯ ಆರೋಗ್ಯ ಸಂಸ್ಥೆಗಳು ಹೇಳುತ್ತವೆ. ಆಧುನಿಕ ವೈದ್ಯಕೀಯ ಪದ್ಧತಿಯ ಪ್ರಕಾರ ಲಸಿಕೆಗಳಿಂದ ತಡೆಗಟ್ಟಬಹುದಾದ ಕಾಯಿಲೆಗಳನ್ನು ವಿಶ್ವ ಆರೋಗ್ಯ ಸಂಸ್ಥೆ ಕೇವಲ 27 ಎಂದು ಪರಿಗಣಿಸಿದೆ. ಕೋವಿಡ್-19ನ್ನು ಗೆದ್ದರೆ 28 ಆಗಬಹುದು. ಇನ್ನುಳಿದ ಸಾವಿರಾರು ಕಾಯಿಲೆಗಳನ್ನು ಹೆಚ್ಚಾಗಿ ಜೀವನಶೈಲಿಯ ಕಾಯಿಲೆಗಳೆಂದೇ ಪರಿಗಣಿಸಲಾಗಿದೆ. ಅವುಗಳಲ್ಲಿ ಮಧುಮೇಹ, ರಕ್ತದೊತ್ತಡ, ಹೃದ್ರೋಗ, ಸ್ಥೂಲಕಾಯ ಇಂದಿನ ನಾಗರಿಕ ಸಮಾಜವನ್ನು ಕಾಡುತ್ತಿರುವ ಸಮಸ್ಯೆಗಳು. ಇವುಗಳನ್ನು ತಡೆಗಟ್ಟುವ ಲಸಿಕೆಗಳಿಲ್ಲ. ಔಷಧಿಗಳಿಂದ ನಿರ್ವಹಣೆ ಮಾಡಲಾಗುತ್ತಿದೆ. 40 ವರ್ಷಕ್ಕೆ ಮಧುಮೇಹ ಬಂದರೆ ಸುಮಾರು 10 ಲಕ್ಷಗಳಷ್ಟು ಔಷಧಿಯ ಖರ್ಚು ಬೀಳಬಹುದೆಂದು ಅಂದಾಜು.

ಉತ್ತಮ ಆಹಾರದಿಂದ ಸಾವಿರಾರು ಕಾಯಿಲೆಗಳನ್ನು ತಡೆಗಟ್ಟಬಹುದಲ್ಲದೆ, ಲಕ್ಷಾಂತರ ಕೋಟಿ ರೂಪಾಯಿ ಆರ್ಥಿಕ ಹೊರೆಯನ್ನೂ ಇಳಿಸಬಹುದು. ಇಂದಿನ ದಿನಗಳಲ್ಲಿ ಆಹಾರವನ್ನು ಅತ್ಯಂತ ಹೆಚ್ಚು ಸಂಸ್ಕರಿಸಿ ಹಲ್ಲಿಗೆ, ಹೊಟ್ಟೆಗೆ, ಕರುಳಿಗೆ ಕೆಲಸವಿಲ್ಲದಂತೆ ಮಾಡಿ, ದೇಹವನ್ನು ಕಾಯಿಲೆಗಳ ಆಗರವನ್ನಾಗಿ ಮಾಡಿಕೊಂಡಿದ್ದೇವೆ ಎನ್ನುತ್ತಾನೆ ಡೇವಿಡ್ ಕೆಸ್ಲರ್ ತನ್ನ 'ಫಾಸ್ಟ್ ಕಾರ್ಬ್ಸ್, ಸ್ಲೋ ಕಾರ್ಬ್ಸ್' ಎನ್ನುವ ಪುಸ್ತಕದಲ್ಲಿ. ಆದರೂ ಸಹ ವೈದ್ಯಕೀಯ ವ್ಯವಸ್ಥೆ OPIUM ರೀತಿಯಲ್ಲಿ HOPIUM ಬಳಸಿ ತನ್ನ ಸ್ಥಾನವನ್ನು ಭದ್ರಮಾಡಿಕೊಂಡಿದೆ.

ಸ್ಟಾನ್ಫರ್ಡ್ ವಿಶ್ವವಿದ್ಯಾಲಯ ಹೊರತಂದಿರುವ 'ಜಾಅಸ್' ಎನ್ನುವ ಪುಸ್ತಕದಲ್ಲಿ ಕಳೆದ ಮೂರು ಪೀಳಿಗೆಯಿಂದ ಹಲ್ಲಿಗೆ ಕೆಲಸವಿಲ್ಲದೆ ದವಡೆಗಳು ಸರಿಯಾಗಿ ಕೂಡದೇ ಮೂತಿ ಮುಂದಕ್ಕೆ ಬಂದು ವಿನ್ಯಾಸವೇ ಬದಲಾಗಿರುವ ಚಿತ್ರಣವನ್ನು ಹೊರಹಾಕಿದೆ. ಇದನ್ನು 'ಮಾಲ್ ಅಕ್ಲ್ಯೂಷನ್' ಎನ್ನುತ್ತಾರೆ. ಇದಕ್ಕೆ ಯಾವ ವೈದ್ಯಕೀಯ ತಂತ್ರ-ಯಂತ್ರಗಳೂ ಸಹ ಕೆಲಸಕ್ಕೆ ಬರುವುದಿಲ್ಲ. ಹಲ್ಲಿಗೆ ಸರಿಯಾಗಿ ಕೆಲಸಕೊಡುವುದೊಂದೇ ಪರಿಹಾರ.

ಇಂದು ಆಹಾರದಲ್ಲಿ ನಾರಿನ ಕೊರತೆಯಿಂದ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಎಡೆಮಾಡಿಕೊಡುತ್ತಿರುವುದನ್ನು ವಿಜ್ಞಾನ ಹೆಚ್ಚು ಹೆಚ್ಚು ಹೊರಹಾಕುತ್ತಿದೆ. ಅಲ್ಝೆಮರ್ಸ್ ಎನ್ನುವ ಮರೆವಿನ ಕಾಯಿಲೆ, ಪಾರ್ಕಿನ್ಸನ್ಸ್, ಒಸಡಿನ ಸೋಂಕಿನಿಂದ ಆರ್ಥರೈಟಿಸ್ ಕೂಡ ಉಂಟಾಗುತ್ತದೆ ಎಂದು ಕಂಡುಕೊಳ್ಳಲಾಗುತ್ತಿದೆ. ನೆಪೋಲಿಯನ್ ಸೈನ್ಯ ಹೊಟ್ಟೆಯ ಮೇಲೆ ಸಾಗುತ್ತದೆ ಎಂದು ಆಹಾರದ ಪ್ರಾಮುಖ್ಯವನ್ನು ಅರಿತುಕೊಂಡು ರೂಪಕವಾಗಿ ಹೇಳಿದ್ದಾರೆ. ಇಂದು ಪರಿಪೂರ್ಣ ಆರೋಗ್ಯ ಹೊಟ್ಟೆಯ ಮೇಲೆ ನಿಂತಿದೆ ಅಥವಾ ಅನೇಕ ರೋಗರುಜಿನಗಳ ಹುಟ್ಟು ಹೊಟ್ಟೆಯೇ ಆಗಿದೆ ಎನ್ನಬಹುದು!

ಇತ್ತೀಚೆಗೆ 'ನ್ಯೂ ಸೈಂಟಿಸ್ಟ್' ನಿಯತಕಾಲಿಕ ಶೇಕಡಾ 99ರಷ್ಟು ಆಹಾರದ ವಿಷಯ ಇನ್ನೂ ನಮಗೆ ನಿಗೂಢ ಎನ್ನುವ ಮುಖಪುಟಲೇಖನವನ್ನು ಪ್ರಕಟಿಸಿತ್ತು. ನಾವು ಆಹಾರದ ವೈವಿಧ್ಯವನ್ನು ಉಳಿಸಿಕೊಳ್ಳಬೇಕಾಗಿದೆ. ವೈವಿಧ್ಯ ಎಂದರೆ ತಿಳಿದಿರುವ ಮತ್ತು ತಿಳಿಯಬೇಕಾಗಿರುವ ಅಂಶಗಳ ಸಂಹಿತೆ.

ಥಾಮಸ್ ಅಲ್ವಾ ಎಡಿಸನ್ ಹೀಗೆಂದಿದ್ದ: The future doctor should focus on wellness not illness – ಭವಿಷ್ಯದ ವೈದ್ಯನು ಗಮನ ಹರಿಸಬೇಕಾದ್ದು ಕಾಯಿಲೆಯ ಬಗ್ಗೆ ಅಲ್ಲ, ಕ್ಷೇಮಕುಶಲದ ಬಗ್ಗೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Summary - Gentleman of Rio en Medio

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

Don Anselmo is the protagonist of this short story written by Juan A. A. Sedillo. Don is an old man, descendant of Mexican Americans who spent his entire life in Rio en Medio, New Mexico. He resided in the same land as his ancestors amidst a beautiful, gnarled orchard.

After months of negotiations, he finally agrees to sell his land and reaches the office of Senator Catron in a green faded coat. He was accompanied by one of his innumerable kin. Before considering a new offer proposed by the Americans, the old man starts a conversation about his family during which he emphasises how proud he was to be a part of such a huge family. Getting down to business, the senator enlightens him that he owns twice as much land as what he thinks he does. And the good American buyers were willing to pay the old man for the additional land over the 1200 dollars which was previously negotiated for. Don Anselmo turns down their proposal, remaining stern about just receiving 1200 dollars and signs the deal for the same price.

After a month, the Americans moved to Rio, made necessary renovations and shifted to the house in summer. One day they get back to the office to complain about the children of the village trespassing their property to play at the orchards. The senator calls for Don Anselmo and he turns up after a week in the same demeanour along with his kin. Finally he broached the subject and told the old man about the children coming down to play everyday which was disturbing the peace and privacy of the Americans. He asks Don if he, being the most respected man in the village could do something to keep those children at bay.

Don stood up and expressed that they have all learned to love these Americans as they were good neighbors which was also the sole reason for the sale deed. But he adds that he only sold the property and not the trees because the trees did not belong to him. Senator tried convincing but in vain. Don then explains how he planted a tree after the birth of every child in Rio and that the trees belonged to the children, not him. He thereby states that he sold just the land and not the trees as they were not his possession. The senator and the Americans felt that it was indisputable though they legally owned that property. Giving in to the circumstances, the Americans spent most of the winter buying the trees individually from the descendants of Don Anselmo in the valley of Rio en Medio.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಕಾರ್ಬನ್ ಅಂಡ್ ಇಟ್ಸ್ ಕಾಂಪೌಂಡ್ಸ್– ಹೈಡ್ರೋ ಕಾರ್ಬನ್ಸ್ ಅಂಡ್ ಹೋಮೊಲೋಗಸ್ ಸಿರೀಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪ್ರತಿಲೋಮ ತ್ರಿಕೋಣಮಿತಿಯ ಉತ್ಪನ್ನಗಳು

ಗಣಿತ

ದ್ವಿತೀಯ ಪಿಯುಸಿ

ಪ್ರತಿಲೋಮ ತ್ರಿಕೋಣಮಿತಿಯ ಉತ್ಪನ್ನಗಳು ಕಲನಶಾಸ್ತ್ರದ ಅನುಕಲಕ ವಿಭಾಗದಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ. ಪ್ರತಿಲೋಮ ತ್ರಿಕೋಣ ಮಿತಿಯ ಉತ್ಪನ್ನಗಳ ಕಲ್ಪನೆಯನ್ನು ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ ಉಪಯೋಗಿಸಲಾಗಿದೆ.

f ಉತ್ಪನ್ನವು ಒಂದು-ಒಂದು ಹಾಗೂ ಮೇಲಣ ಉತ್ಪನ್ನವಾಗಿದ್ದರೆ ಮಾತ್ರ ಅದರ ಪ್ರತಿಲೋಮ ಉತ್ಪನ್ನವನ್ನು ಬರೆಯಬಹುದು. ಕೆಲವು ಉತ್ಪನ್ನಗಳು ಒಂದು-ಒಂದು ಅಥವಾ ಮೇಲಣ ಅಥವಾ ಇವರೆಡರ ಉತ್ಪನ್ನಗಳಾಗಿರುವುದಿಲ್ಲ. ಆದ್ದರಿಂದ ಅಂತಹ ಉತ್ಪನ್ನಗಳ ಪ್ರತಿಲೋಮಗಳನ್ನು ಬರೆಯಲು ಸಾಧ್ಯವಿಲ್ಲ.

ತ್ರಿಕೋಣಮಿತಿಯ ಉತ್ಪನ್ನಗಳು ವಾಸ್ತವಿಕ ಸಂಖ್ಯೆಗಳ ಕ್ಷೇತ್ರ ಮತ್ತು ವ್ಯಾಪ್ತಿಗಳ ಉಭಯಕ್ಷೇಪನ ಉತ್ಪನ್ನವಾಗಿರುವುದಿಲ್ಲವೆಂದು ನಾವು ತಿಳಿದಿದ್ದೇವೆ. ಆದ್ದರಿಂದ ತ್ರಿಕೋಣಮಿತಿಯ ಉತ್ಪನ್ನಗಳಿಗೆ ಪ್ರತಿಲೋಮ ಉತ್ಪನ್ನಗಳು ಆ ಅಸ್ಥಿತ್ವದಲ್ಲಿರಬೇಕಾದರೆ ತ್ರಿಕೋಣಮಿತಿಯ ಉತ್ಪನ್ನಗಳ ಕ್ಷೇತ್ರ ಮತ್ತು ವ್ಯಾಪ್ತಿಗಳು ಯಾವ ನಿರ್ಬಂಧದಲ್ಲಿರಬೇಕು ಮತ್ತು ಅವುಗಳ ಗಣಗಳನ್ನು ತಿಳಿಯೋಣ.

ಮೂಲಭೂತ ಸಾಮಾನ್ಯ ಪರಿಕಲ್ಪನೆ

ತ್ರಿಕೋಣಮಿತಿಯ ಉತ್ಪನ್ನಗಳನ್ನು ಅಭ್ಯಸಿಸಿದ್ದೇವೆ. ಅವುಗಳಲ್ಲಿ ಉತ್ಪನ್ನವು $Sine: R \leftrightarrow [-1, 1]$ ಒಂದು-ಒಂದು ಹಾಗೂ ಮೇಲಣ ಉತ್ಪನ್ನವಾಗುವುದಿಲ್ಲ. ಅಲ್ಲದೇ ಉತ್ಪನ್ನವು ಪ್ರತಿಲೋಮ ಹೊಂದಿರಬೇಕಾದರೆ $(fof)(y) = f(f^{-1}(y) = f)x) = y$ ಎಂದು ಹೇಳುತ್ತೇವೆ.

Sine ಉತ್ಪನ್ನದ ಕ್ಷೇತ್ರವು ಎಲ್ಲಾ ವಾಸ್ತವಿಕ ಸಂಖ್ಯೆಗಳ ಗಣವಾಗಿದ್ದು, ಮತ್ತು ವ್ಯಾಪ್ತಿಯು $[-1, 1]$ ಮುಚ್ಚಿದ, ಅಂತರಾಳವಾಗಿರುತ್ತದೆ. ನಾವು ಕ್ಷೇತ್ರವನ್ನು $\left[\frac{-\pi}{2}, \frac{\pi}{2}\right]$ ಗೆ ನಿರ್ಬಂಧಿಸಿದಾಗ ಅದೇ ವ್ಯಾಪ್ತಿ $[-1, 1]$ ಗೆ ಉತ್ಪನ್ನವು ಉಭಯಕ್ಷೇಪನ ಉತ್ಪನ್ನವಾಗಿರುತ್ತದೆ. ಅದಲ್ಲದೇ $\left[\frac{-3\pi}{2}, \frac{\pi}{2}\right]$, $\left[\frac{-\pi}{2}, \frac{\pi}{2}\right]$, $\left[\frac{-\pi}{2}, \frac{3\pi}{2}\right]$ ಇತ್ಯಾದಿ ಅಂತರಾಳಗಳ ಕ್ಷೇತ್ರಗಳಿಗೆ ಮತ್ತು $[-1, 1]$ ವ್ಯಾಪ್ತಿಗೆ ಉತ್ಪನ್ನವು ಉಭಯಕ್ಷೇಪನ ಉತ್ಪನ್ನವಾಗಿರುತ್ತದೆ.

ಆದ್ದರಿಂದ ನಾವು ಈ ಎಲ್ಲಾ ಅಂತರಾಳಗಳಿಗೆ ಪ್ರತಿಲೋಮ Sine ಉತ್ಪನ್ನವನ್ನು ಬರೆಯಬಹುದು. ಪ್ರತಿಲೋಮ $[-1, 1]$ ಉತ್ಪನ್ನವನ್ನು ಬರೆಯಬಹುದು. Sine ಪ್ರತಿಲೋಮ ಉತ್ಪನ್ನವನ್ನು Sin^{-1} ಅಥವಾ Carc sine ಉತ್ಪನ್ನ ಎಂದು ಸೂಚಿಸುತ್ತೇವೆ.

ಪ್ರತಿಲೋಮ Sine ಉತ್ಪನ್ನ ಕ್ಷೇತ್ರ $[-1, 1]$ ಮತ್ತು ವ್ಯಾಪ್ತಿಯು $\left[\frac{-3\pi}{2}, \frac{-\pi}{2}\right]$, $\left[\frac{-\pi}{2}, \frac{\pi}{2}\right]$, $\left[\frac{\pi}{2}, \frac{3\pi}{2}\right]$ ಇತ್ಯಾದಿ ಅಂತರಾಳಗಳಲ್ಲಿ ಯಾವುದಾದರೊಂದು ಅಂತರಾಳಗಳಾಗಿರುತ್ತವೆ. ಇದರಲ್ಲಿ $\left[\frac{-\pi}{2}, \frac{\pi}{2}\right]$ ಅಂತರಾಳದ ವಿಭಾಗದ ವ್ಯಾಪ್ತಿಯನ್ನು ತೆಗೆದುಕೊಂಡಾಗ ಆ ವ್ಯಾಪ್ತಿಯನ್ನು ಪ್ರಧಾನ ಬೆಲೆಯ ವಿಭಾಗ ಎಂದು ಕರೆಯುತ್ತೇವೆ. ಹಾಗೂ ಉಳಿದ ಅಂತರಾಳಗಳು ಬೇರೆ ಬೇರೆ ವ್ಯಾಪ್ತಿ ವಿಭಾಗಗಳಾಗಿರುತ್ತವೆ. ಹೀಗಾಗಿ ಪ್ರತಿಲೋಮ ಉತ್ಪನ್ನ ಕ್ಷೇತ್ರವನ್ನು ಮತ್ತು ವ್ಯಾಪ್ತಿಯನ್ನು $\left[\frac{-\pi}{2}, \frac{\pi}{2}\right]$ ಎಂದು ತೆಗೆದುಕೊಳ್ಳುತ್ತೇವೆ.

ನಾವು $sin: [-1,3,1] \to \left[\frac{-\pi}{2}, \frac{\pi}{2}\right]$ ಉತ್ಪನ್ನ ಎಂದು ವ್ಯಾಖ್ಯಾನಿಸುತ್ತೇವೆ. ಪ್ರತಿಲೋಮ ಉತ್ಪನ್ನಗಳ ವ್ಯಾಖ್ಯಾನಗಳ ಪ್ರಕಾರ $-1 \le \mu \le 1$ ಇದ್ದಾಗ $Sin\left(\sin^{-1}\right)x = \mu$ ಮತ್ತು $\frac{\pi}{2} \le \mu \le \frac{\pi}{2}$ ಇದ್ದಾಗ ಎಂದು ಬರೆಯಬಹುದು.



$y = \cos^{-1} x$

Sine ಉತ್ಪನ್ನದ cosine ಹಾಗೆ ಉತ್ಪನ್ನದ ಕ್ಷೇತ್ರವು ಕೂಡಾ ಎಲ್ಲಾ ವಾಸ್ತವಿಕ ಸಂಖ್ಯೆ ಮತ್ತು ವ್ಯಾಪ್ತಿಯ ಗಣ $[-1, 1]$ ಆಗಿರುತ್ತದೆ. ನಾವು cosine ಉತ್ಪನ್ನದ ಕ್ಷೇತ್ರವನ್ನು $[0, \pi]$ ಗೆ ನಿರ್ಬಂಧಗೊಳಿಸಿದ ಉತ್ಪನ್ನವು $[-1, 1]$ ಅಂತರಾಳವನ್ನು ವ್ಯಾಪ್ತಿಯಾಗಿ ಹೊಂದಿ ಉಭಯಕ್ಷೇಪನ ಉತ್ಪನ್ನವಾಗುತ್ತದೆ. ಅದಲ್ಲದೆ cosine ಉತ್ಪನ್ನವು $[-\pi, 0], [0, \pi], [\pi, 2\pi]$ ಇತ್ಯಾದಿ ಅಂತರಾಳಗಳ ಕ್ಷೇತ್ರಗಳಿಗೆ ನಿರ್ಬಂಧಿಸಿದಾಗಲೂ ಸಹ ಅದು $[-1, 1]$ ವ್ಯಾಪ್ಯಿಯಲ್ಲಿ ಉಭಯಕ್ಷೇಪನ ಉತ್ಪನ್ನವಾಗುತ್ತದೆ. cosine ಉತ್ಪನ್ನದಲ್ಲಿ $[0, \pi]$ ವಿಭಾಗವು ಪ್ರಧಾನವಾಗುತ್ತದೆ. ಆದ್ದರಿಂದ cosine ಉತ್ಪನ $\cos^{-1}$ಗೆ ಕ್ಷೇತ್ರ $[-1, 1]$ ಮತ್ತು ವ್ಯಾಪ್ತಿಯನ್ನು ಎಂದು $[0, \pi]$ ತೆಗೆದುಕೊಳ್ಳುತ್ತೇವೆ. ಮತ್ತು $\cos^{-1}$ ಉತ್ಪನ್ನವನ್ನು $cos: [-1, 1] \to [0, 1]$ ಎಂದು ವ್ಯಾಖ್ಯಾನಿಸುತ್ತೇವೆ.



$y = \sin^{-1} x$

ಇದೇ ರೀತಿಯಾಗಿ ನಾವು cosen n ಮತ್ತು cos ಬಗ್ಗೆ ತಿಳಿಯೋಣ.

ನಾವು cosec ಉತ್ಪನ್ನವು ಉಭಯಕ್ಷೇಪನ ಉತ್ಪನ್ನವಾಗಬೇಕಾದರೆ ಉತ್ಪನ್ನ ಕ್ಷೇತ್ರವನ್ನು $\left[\frac{-\pi}{2}, \frac{\pi}{2}\right]-(0)$ ನಿರ್ಭಂದಿಸಿದರೆ ಮತ್ತು $R-[-1, 1]$ ವ್ಯಾಪ್ತಿಯಲ್ಲಿ coses ಉತ್ಪನ್ನವು ಉಭಯಕ್ಷೇಪನ ಉತ್ಪನ್ನವಾಗಿರುತ್ತದೆ. ಅದಲ್ಲದೆ cosec ಉತ್ಪನ್ನವು $\left[\frac{-3\pi}{2}, \frac{-\pi}{2}\right]-\pi$, $\left[\frac{-\pi}{2}, \frac{\pi}{2}\right]-(0)$, $\left[\frac{\pi}{2}, \frac{3\pi}{2}\right]-(-\pi)$ ಇತ್ಯಾದಿ ಅಂತರಾಳಗಳ ಯಾವುದಾದರೊಂದು ಅಂತರಾಳವನ್ನು ಕ್ಷೇತ್ರವನ್ನಾಗಿ ಹೊಂದಿ $R-[-1, 1]$ ವ್ಯಾಪ್ತಿಯಾಗಿ ಉಭಯಕ್ಷೇಪನ ಉತ್ಪನ್ನವಾಗುತ್ತದೆ. ಆದ್ದರಿಂದ ಉತ್ಪನ್ನವನ್ನು ಎಂದೂ ವ್ಯಾಖ್ಯಾನಿಸುತ್ತೇವೆ.

ಮುಂದುವರಿಯುವುದು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರೊ ಸ್ಟ್ಯಾಟಿಕ್ ಪೊಟೆನ್ಷಿಯಲ್ ಹಾಗೂ ಕೆಪಾಸಿಟೆನ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ನಾನು ಜನರ ಮಾತು ಕೇಳುತ್ತೇನೆ, ಜನಪ್ರತಿನಿಧಿಗಳ ಮಾತಲ್ಲ: ಬಸವಜಯ ಮೃತ್ಯುಂಜಯ ಸ್ವಾಮೀಜಿ

‘ಸಮಿತಿ ರಚನೆಯ ದಿನಾಂಕ ಘೋಷಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಬಸವಜಯ ಮೃತ್ಯುಂಜಯ ಸ್ವಾಮೀಜಿ. ಕಾಂಗ್ರೆಸ್ ಮುಖಂಡರಾದ ವೀಣಾ ಕಾಶಪ್ಪನವರ ಹಾಗೂ ಇತರರು ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಮೀಸಲಾತಿ ಬೇಡಿಕೆಗೆ ಸಂಬಂಧಿಸಿ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸುವ ದಿನಾಂಕವನ್ನು ಕೂಡಲೇ ಘೋಷಿಸಬೇಕು. ಎಷ್ಟು ದಿನದಲ್ಲಿ ಸಮಿತಿಯು ವರದಿ ನೀಡಲಿದೆ ಎಂಬುದನ್ನೂ ಸ್ಪಷ್ಟಪಡಿಸಬೇಕು’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸೋಮವಾರ ಒತ್ತಾಯಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದ ಅವರು, ‘ದಿನಾಂಕ ಘೋಷಿಸಿದ ನಂತರವೇ ಚರ್ಚೆಗೆ ಬರುತ್ತೇನೆ. ಮಾತುಕತೆಗೆ ವಿಧಾನಸೌಧ ಅಥವಾ ಕೃಷ್ಣಾಗೆ ತೆರಳುವುದಿಲ್ಲ. ಸರ್ಕಾರದ ಪ್ರತಿನಿಧಿಯೇ ಧರಣಿ ಸ್ಥಳಕ್ಕೆ ಬರಬೇಕು' ಎಂದೂ ಸ್ವಾಮೀಜಿ ಹೇಳಿದರು.

ಕಾಶಪ್ಪನವರ ಬೆಂಬಲ: 'ಬಸನಗೌಡ ಪಾಟೀಲ ಯತ್ನಾಳ, ವಿಜಯಾನಂದ ಕಾಶಪ್ಪನವರ ಬಗ್ಗೆ ಸಚಿವರು ಈಗ ಮಾತನಾಡುತ್ತಿದ್ದಾರೆ. ಪ್ರತಿಭಟನೆ, ಪಾದಯಾತ್ರೆ ನಡೆಸಿ ಹಲವು ಬಾರಿ ಗಡುವು ನೀಡಿದರೂ ಸರ್ಕಾರ ಸ್ಪಂದಿಸಲಿಲ್ಲ. ಗಡುವು ಮುಗಿದ ನಂತರವೂ ಸರ್ಕಾರದ ಪ್ರತಿನಿಧಿಯಾಗಿ ಏನೂ ಕೇಳಲಿಲ್ಲ. ಆಗ ಬಂದು ಮಾತನಾಡಿದ್ದರೆ ಈ ಸಮಸ್ಯೆ ಉದ್ಭವಿಸುತ್ತಲೇ ಇರಲಿಲ್ಲ' ಎಂದೂ ಹೇಳಿದರು.

‘ಬೆಳಗಾವಿ ಸುವರ್ಣ ವಿಧಾನಸೌಧದ ಎದುರು ಪ್ರತಿಭಟಿಸುವಾಗ ಮುರುಗೇಶ ನಿರಾಣಿ ಸೇರಿದಂತೆ ಹಲವು ಜನಪ್ರತಿನಿಧಿಗಳು ಬಂದು ಸಿ.ಎಂ ಅವರಿಗೆ ಕರೆ ಮಾಡಿಸಿ ಒಂದು ತಿಂಗಳು ಸಮಯ ಕೇಳಿದರು. ಗಡುವು ಮುಗಿದ ನಂತರ ಇದೇ ನಿರಾಣಿ ಸೇರಿ ಯಾರೊಬ್ಬರೂ ಮತ್ತೆ ವಿಚಾರಿಸಲಿಲ್ಲ. ಯತ್ನಾಳ ಹಾಗೂ ಕಾಶಪ್ಪನವರ ಮಾತ್ರ ಹೋರಾಟಕ್ಕೆ ಕೈಜೋಡಿಸಿದರು’ ಎಂದರು.

ಜನಪ್ರತಿನಿಧಿಗಳ ಮಾತು ಕೇಳುವವನಲ್ಲ: ‘ಪಾದಯಾತ್ರೆ ನಡೆಸುವುದಾಗಿ ನಾನು ಜನರಿಗೆ ಮಾತು ಕೊಟ್ಟಿದ್ದೆ. ಮಾತು ತಪ್ಪಿದರೆ ಸ್ವಾಮೀಜಿ ಒಮ್ಮೆ ಹೇಳುತ್ತಾರೆ, ನಂತರ ಕೈಬಿಡುತ್ತಾರೆ ಎನ್ನುತ್ತಾರೆ. ನಾನು ಜನಪ್ರತಿನಿಧಿಗಳ ಮಾತು ಕೇಳುವ ಸ್ವಾಮೀಜಿಯಲ್ಲ. ಜನರ ಮಾತು ಕೇಳುವ ಸ್ವಾಮೀಜಿ’ ಎಂದೂ ಹೇಳಿದರು.

‘ಸಮುದಾಯದ ಎಲ್ಲ ಶಾಸಕರ–ಸಚಿವರ ವಿಶ್ವಾಸ ತೆಗೆದುಕೊಂಡೇ ಹೋರಾಟ ಆರಂಭಿಸಲಾಗಿತ್ತು. ಡಿ.9ಕ್ಕೆ ಸರ್ಕಾರ ಮತ್ತೆ ಕಾಲಾವಕಾಶ ಕೇಳಿತು. ಆದರೆ ಬೇಡಿಕೆ ಈಡೇರಿಸಲಿಲ್ಲ. ಮಾತಿನಂತೆ ಪಾದಯಾತ್ರೆ ಆರಂಭಿಸಿದೆ. ನಾನು ಇಲ್ಲಿ ನೆಪಮಾತ್ರ. ಪಂಚಮಸಾಲಿ ಜನಾಂಗ ಎನ್ನುವಂತಹ ರೈಲು ಹೊರಟಿದೆ. ಅದಕ್ಕೆ ನಾನು ಚಾಲಕನಾಗಿದ್ದರೆ, ಕಾಶಪ್ಪನವರ ನಿರ್ವಾಹಕರಾಗಿದ್ದಾರೆ. ಯತ್ನಾಳ ಅವರು ಸ್ಟೇಷನ್ ಮಾಸ್ಟರ್‌ನಂತಿದ್ದಾರೆ. ಸಮಾಜದ ಒಳಿತಿಗಾಗಿ ಈ ಹೋರಾಟ ನಡೆಯುತ್ತಿದೆಯೇ ವಿನಾ ಯಾರೋ ಒಬ್ಬರನ್ನು ಬೆಳೆಸಲು ಅಲ್ಲ’ ಎಂದೂ ಹೇಳಿದರು.

ಯಾವುದೇ ಜಾತಿಯ ಜನರು ಮೀಸಲಾತಿ ಕೇಳಿದರೂ ಅಂಬೇಡ್ಕರ್ ಅವರ ಆಶಯದಂತೆ ಅರ್ಹತೆಯೇ ಮಾನದಂಡವಾಗಲಿದೆ. ಕಾಲಮಿತಿಯ ಒಳಗೆ ಮೀಸಲಾತಿ ಕೋರುವ ಬೆದರಿಕೆ ಸಲ್ಲದು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಸಚಿವ



ಮೀಸಲಾತಿ ಹೋರಾಟದ ವಿಚಾರದಲ್ಲಿ ರಾಜ್ಯ ಸರ್ಕಾರ ಎಲ್ಲ ಜಾತಿ–ಜನಾಂಗದವರನ್ನೂ ಪರಿಗಣನೆ ಮಾಡಿ ಸೂಕ್ತ ನಿರ್ಧಾರ ಕೈಗೊಳ್ಳಲಿದೆ

ಡಾ.ಸಿ.ಎನ್. ಅಶ್ವತ್ಥನಾರಾಯಣ.
ಉಪ ಮುಖ್ಯಮಂತ್ರಿ

ಮಡಿವಾಳರಿಗೆ ಮೀಸಲಾತಿ: ಚಿತ್ರದುರ್ಗದಲ್ಲಿ ನಾಳೆ ಸಭೆ

ಬಸವ ಮಾಚಿದೇವ ಸ್ವಾಮೀಜಿ

ಮೈಸೂರು: ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಆಗ್ರಹಿಸಿ, ಹೋರಾಟ ರೂಪಿಸುವ ಸಂಬಂಧ ಫೆ. 24ರಂದು ಚಿತ್ರದುರ್ಗದ ಮಡಿವಾಳ ಗುರುಪೀಠದಲ್ಲಿ ಸಭೆ ಕರೆಯಲಾಗಿದೆ ಎಂದು ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ ಸೋಮವಾರ ಇಲ್ಲಿ ತಿಳಿಸಿದರು.

ಪಾದಯಾತ್ರೆ ಹಾಗೂ ಬೆಂಗಳೂರಿನಲ್ಲಿ ದೊಡ್ಡಮಟ್ಟದಲ್ಲಿ ಧರಣಿ ನಡೆಸಲಾಗುವುದು. ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ಸಭೆಗಳು ನಡೆದಿವೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹಿಂದೆ ಬಿ.ಎಸ್.ಯಡಿಯೂರಪ್ಪ ಅವರೇ ಮುಖ್ಯಮಂತ್ರಿ ಇದ್ದಾಗ, ಮಡಿವಾಳ ಸಮುದಾಯವನ್ನು ಪರಿಶಿಷ್ಟಜಾತಿಗೆ ಸೇರಿಸುವ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ.ಅನ್ನಪೂರ್ಣಮ್ಮ ಅವರ ನೇತೃತ್ವದಲ್ಲಿ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಸಮಿತಿ ನೇಮಿಸಿದ್ದರು. ಈಸಮಿತಿವರದಿ ನೀಡಿದೆ. ವರದಿಯನ್ನು ಸಂಪುಟ ಸಭೆಯಲ್ಲಿ ಮಂಡಿಸಿ, ಪರಿಶಿಷ್ಟಜಾತಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು’ ಎಂದು ಅವರು ಒತ್ತಾಯಿಸಿದರು.

‘18 ರಾಜ್ಯಗಳಲ್ಲಿ ಮಡಿವಾಳ ಸಮುದಾಯವನ್ನು ಈಗಾಗಲೇ ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆ. ನಾವೂ 40 ವರ್ಷಗಳಿಂದ ಒತ್ತಾಯಿಸುತ್ತಲೇ ಬಂದಿದ್ದೇವೆ. ಸಂಖ್ಯೆಯಲ್ಲಿ ಕಡಿಮೆ ಇದ್ದಾರೆ ಎಂಬ ಕಾರಣಕ್ಕೆ ಎಲ್ಲ ಸರ್ಕಾರಗಳೂ ನಮ್ಮನ್ನು ನಿರ್ಲಕ್ಷಿಸುತ್ತ ಬಂದಿವೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಒಳ ಮೀಸಲಾತಿ ಅತಿ ಮೀಸಲಾತಿ ಆಗಿದೆ

ಶಿವಮೂರ್ತಿ ಶರಣರು

ಶಿರಸಿ: ‘ಮೀಸಲಾತಿ ಸಂವಿಧಾನಬದ್ಧ ಹಕ್ಕು. ಈಚಿನ ವರ್ಷಗಳಲ್ಲಿ ಜಾರಿಯಲ್ಲಿರುವ ಒಳ ಮೀಸಲಾತಿ ಎಂಬುದು ಅತಿ ಮೀಸಲಾತಿಯಾಗಿದೆ’ ಎಂದು ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮೀಜಿ ವ್ಯಾಖ್ಯಾನಿಸಿದರು.

ನಗರದಲ್ಲಿ ಸೋಮವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಮೀಸಲಾತಿ ಹಿಂದುಳಿದ ಜನಾಂಗಗಳಿಗೆ ಸ್ವಾಭಿಮಾನ ತಂದುಕೊಟ್ಟಿದೆ. ಈಗ ಅದು ಒಳಮೀಸಲಾತಿ ಸ್ವರೂಪಕ್ಕೆ ತಿರುಗಿದ್ದು ಅತಿಯಾಗಿದೆ’ ಎಂದು ಅವರು ವಿಷಾದಿಸಿದರು.

‘ನಮ್ಮ ಹಕ್ಕಿಗಾಗಿ ಎಂತಹ ಹೋರಾಟಕ್ಕೂ ಸಿದ್ಧ’



ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ

ಭಟ್ಕಳ: ‘ದೊಡ್ಡ ಜಾತಿಗಳ ಬೆಂಬಲದೊಂದಿಗೆ ಅಧಿಕಾರ ನಡೆಸುವ ಸರ್ಕಾರವು ನಮ್ಮ ಸಂವಿಧಾನದತ್ತ ಹಕ್ಕು ಕಸಿಯಲು ಬಂದರೆ ಸರ್ಕಾರವನ್ನು ಬುಡಮೇಲು ಮಾಡುವ ತನಕ ಹೋರಾಡಲು ನಾವು ಹಿಂಜರಿಯುವುದಿಲ್ಲ’ ಎಂದು ಉಜಿರೆಯ ಶ್ರೀರಾಮ ಕ್ಷೇತ್ರದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಸೋಮವಾರ ಇಲ್ಲಿ ಎಚ್ಚರಿಸಿದರು.

ಹಿಂದುಳಿದ ವರ್ಗ 2ಎ ಹಿತರಕ್ಷಣಾ ವೇದಿಕೆ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆ, ಸಮಾವೇಶ ಉದ್ಘಾಟಿಸಿದ ಅವರು ‘ಹಿಂದುಳಿದ ವರ್ಗಗಳ ಅಸ್ತಿತ್ವದ ಪ್ರಶ್ನೆ ಎದುರಾಗಿದ್ದು ನಾವೀಗ ಧ್ವನಿ ಕಳೆದುಕೊಳ್ಳದೇ ಎಚ್ಚೆತ್ತುಕೊಳ್ಳಬೇಕು’ ಎಂದರು.

‘ಯಾವುದೇ ಸಮಾಜ ಮೀಸಲಾತಿಗೆ ಒತ್ತಾಯಿಸಿ ಮೆರವಣಿಗೆಯಲ್ಲಿ ಬಂದರೆ ಮೀಸಲಾತಿ ನೀಡಲು ಸರ್ಕಾರಕ್ಕೆಲ್ಲಿದೆ ಅಧಿಕಾರ? ಮಠದ ಆಸೆ, ಜಾತಿಯ ಒಲೈಕೆಗಾಗಿ ಪ್ರತಿಭಟನಾ ಮೆರವಣಿಗೆ ನಡೆಸಿ, ಧರಣಿ ಕೂರುವ ನಿಮಗೆ ನಿಮ್ಮದೇ ಸರ್ಕಾರದಿಂದ ಕೇಂದ್ರಕ್ಕೆ ಶಿಫಾರಸು ಮಾಡಲು ಸಾಧ್ಯವಿಲ್ಲವೇ? ಮತ್ತೇಕೆ ಈ ಪ್ರತಿಭಟನೆಯ ನಾಟಕ?’ ಎಂದೂ ಹರಿಹಾಯ್ದರು.

‘ಮನಸ್ಸಿಗೆ ಬಂದಂತೆ ಜಾತಿಗೆ ಮೀಸಲಾತಿ ನೀಡಲು ಇದು ಕಡಲೆ ಕಾಯಿಯಲ್ಲ. ಸಾಧ್ಯವಿದ್ದರೆ ನೀವು (ಸರ್ಕಾರ) ಅವರಿಗೆ ಮೀಸಲಾತಿ ನೀಡಲು ಶಿಫಾರಸು ಮಾಡಿ, ಆಗ ನಾವು ನೋಡುತ್ತೇವೆ’ ಎಂದು ಸ್ವಾಮೀಜಿ ಸವಾಲೆಸೆದರು.

‘ನಮಗೆ ಜನಸಂಖ್ಯೆ ಮುಖ್ಯವಲ್ಲ. ನ್ಯಾಯಯುತ ಬೇಡಿಕೆ ಮುಖ್ಯ. ಮುಖ್ಯಮಂತ್ರಿಗಳು ಆತುರ ನಿರ್ಧಾರದಿಂದ ಬಲಾಢ್ಯರಿಗೆ ಮೀಸಲಾತಿ ನೀಡಲು ಯತ್ನಿಸಿದರೆ ನಾವು ತಾಕತ್ತು ತೋರಿಸಬೇಕಾಗುತ್ತದೆ. ನಮ್ಮ ಹೋರಾಟ 2ಎಯಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವುದಾಗಿದ್ದು ಅದಕ್ಕೆ ಸರ್ಕಾರ ಮನ್ನಣೆ ನೀಡಲೇಬೇಕು’ ಎಂದು ಒತ್ತಾಯಿಸಿದರು.

ಕ್ರೈಸ್ತರಿಗೆ ಪ್ರತ್ಯೇಕ ಮೀಸಲಾತಿ: ಒತ್ತಾಯ

ಬೆಂಗಳೂರು: ರಾಜ್ಯದಲ್ಲಿ ಕ್ರೈಸ್ತ ಸಮುದಾಯಕ್ಕೆ ವಿಶೇಷ ಮೀಸಲಾತಿ ನೀಡಬೇಕೆಂದು ಕರ್ನಾಟಕ ಕ್ರಿಶ್ಚಿಯನ್ ರಾಜಕೀಯ ನಾಯಕರ ವೇದಿಕೆ (ಕೆಸಿಪಿಎಲ್‌ಎಫ್) ಒತ್ತಾಯಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಸಂಚಾಲಕ ಆಂಥೋಣಿ ವಿಕ್ರಮ್,‘ಈಗಾಗಲೇ 3ಬಿ ವರ್ಗದಲ್ಲಿ ನೀಡಲಾಗಿರುವ ಶೇ 5ರಷ್ಟು ಮೀಸಲಾತಿಗಾಗಿ ವೀರಶೈವ ಲಿಂಗಾಯತರು, ಮರಾಠಾ, ಬಂಟ, ಜೈನ (ದಿಗಂಬರ), ಚಟ್ಟಾದ ವೈಷ್ಣವ ಸೇರಿದಂತೆ ಹಲವು ಸಮುದಾಯಗಳ ಜೊತೆಗೆ ಕ್ರೈಸ್ತ ಸಮುದಾಯ ಮೀಸಲಾತಿಗಾಗಿ ಬಡಿದಾಡಿಕೊಳ್ಳಬೇಕಿದೆ’ ಎಂದರು.

‘ಈ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರವು 3ಬಿ ವರ್ಗದಲ್ಲಿ ಸಮುದಾಯಕ್ಕೆ ಶೇ 50ರಷ್ಟು ಮೀಸಲಾತಿ ನೀಡಬೇಕು ಹಾಗೂ ಅಥವಾ ಬೇರೆ ವರ್ಗಗಳಲ್ಲಿ ಪ್ರತ್ಯೇಕವಾಗಿ ಶೇ 5ರಷ್ಟು ಮೀಸಲಾತಿ ಘೋಷಿಸಬೇಕು’ ಎಂದು ಮನವಿ ಮಾಡಿದರು.

‘ಸರ್ಕಾರದ ವಿವಿಧ ನಿಗಮಗಳು ಹಾಗೂ ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನಕ್ಕೆ ಕ್ರೈಸ್ತರನ್ನು ನೇಮಿಸಬೇಕು. ರಾಜ್ಯದಾದ್ಯಂತ ಇರುವ ಕ್ರೈಸ್ತ ಸಮುದಾಯದವರ ಸಮಗ್ರ ಸಮೀಕ್ಷೆ ನಡೆಸಬೇಕು. ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಡಬೇಕು’

ಸುದ್ದಿ 2 ನಿಮಿಷ

‘ಸಂವಿಧಾನ ತಿದ್ದುಪಡಿ ಹೇಳಿಕೆ: ನೋವಾಗಿದ್ದರೆ ಕ್ಷಮೆ ಇರಲಿ’

ಹಾಸನ: ಸಂವಿಧಾನ ತಿದ್ದುಪಡಿ ವಿಚಾರವಾಗಿ ಹಾಸನದಲ್ಲಿ ತಾವು ನೀಡಿದ ಹೇಳಿಕೆಗೆ, 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಪ್ರೊ.ದೊಡ್ಡರಂಗೇಗೌಡ ಸೋಮವಾರ ಸ್ಪಷ್ಟೀಕರಣ ನೀಡಿದ್ದಾರೆ.

ತಮ್ಮ ಹೇಳಿಕೆಯು ದಲಿತರ ವಿರುದ್ಧವಾದದ್ದಲ್ಲ; ಉಳ್ಳವರ ವಿರುದ್ಧವಾದದ್ದು. ಬಡವರ ಪರವಾದದ್ದು. ಇದರಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಇರಲಿ ಎಂದಿದ್ದಾರೆ.

‘ನಮ್ಮದು ಬಹುಮುಖೀ ರಾಷ್ಟ್ರವಾದರೂ ಏಕರೂಪದ ಶಿಕ್ಷಣ ಇಲ್ಲಿಲ್ಲ. ಈಗ ದೇಶದಲ್ಲಿ ಏಕರೂಪ ಶಿಕ್ಷಣ ಅನಿವಾರ್ಯ ಅನ್ನಿಸುತ್ತಿದೆ. ಬಡವರು ಬಡವರಾಗಿಯೇ ಉಳಿಯುತ್ತಿದ್ದಾರೆ. ಬಲ್ಲಿದರು ಹೆಚ್ಚಿನ ಲಾಭ ಗಳಿಸುತ್ತಿದ್ದಾರೆ. ಎಲ್ಲರಿಗೂ ಒಂದೇ ರೀತಿ ಶಿಕ್ಷಣ ದೊರೆಯುವಂತಾಗಬೇಕು. ಆಗ ಮಾತ್ರ ಸಮಾನತೆ ಸಾಧ್ಯ. ಅನುಭವ ಮಂಟಪದ ಮಾದರಿಯಲ್ಲಿ ಎಲ್ಲರಿಗೂ (ಹಿಂದುಳಿದವರಿಗೆ) ಹೆಚ್ಚಿನ ಅವಕಾಶ ಸಿಗುವಂತಾಗಬೇಕು. ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗದಂತೆ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಏಕರೂಪ ಶಿಕ್ಷಣ ಜಾರಿಗೆ ತರುವ ನಿಟ್ಟಿನಲ್ಲಿ ದೇಶದ ಸಂವಿಧಾನದಲ್ಲಿ ಮಾರ್ಪಾಟು ಮಾಡುವುದು ಸೂಕ್ತವಾದೀತು’ ಎಂದಿದ್ದಾಗಿ ಅವರು ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

10 ಮಂದಿಗೆ ಜೈನ ಸನ್ಯಾಸ ದೀಕ್ಷೆ

ಹುಬ್ಬಳ್ಳಿ: ನಗರದ ಪ್ರೇಮ ಯಶೋದೇವ ಭುವನಭಾನು ಸಂಯಮ ಉದ್ಯಾನದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ 10 ಮಂದಿ ಜೈನ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಹತ್ತು ಮಂದಿ ಒಂದೇ ಬಾರಿಗೆ ದೀಕ್ಷೆ ಸ್ವೀಕರಿಸುತ್ತಿರುವುದು ದಕ್ಷಿಣ ಭಾರತದಲ್ಲಿ ಇದೇ ಮೊದಲು ಎಂದು ಜೈನ ಮುನಿ ಶ್ರಮಣಿಗಣನಾಯಕ ಅಭಯಶೇಖರ ಸೂರೀಶ್ವರ ಮಹಾರಾಜ ತಿಳಿಸಿದರು.

ಬೆಳಿಗ್ಗೆ 6.30ಕ್ಕೆ ದೀಕ್ಷಾ ವಿಧಿವಿಧಾನಗಳು ಆರಂಭವಾದವು. ಪೂಜೆ, ಪ್ರಾರ್ಥನೆ ನಂತರ ಐವರು ಪುರುಷರು, ಐವರು ಮಹಿಳೆಯರು ದೀಕ್ಷೆ ಸ್ವೀಕರಿಸಿದರು. ಆಚಾರ್ಯರಾದ ಅಭಯಶೇಖರ ಸೂರೀಶ್ವರಜೀ, ಅಜಿತಶೇಖರ ಸೂರೀಶ್ವರಜಿ, ವಿಮಲಬೋಧಿ ಸೂರೀಶ್ವರಜಿ ವಿಧಿವಿಧಾನ ನೆರವೇರಿಸಿದರು. ದೀಕ್ಷೆ ಸ್ವೀಕರಿಸಿದವರಿಗೆ ಕುಟುಂಬದ ಸದಸ್ಯರೂ ಶುಭ ಹಾರೈಸಿದರು.

ದೀಕ್ಷೆ ನೀಡಿದ ಬಳಿಕ, ಕಲ್ಯಾಣ ಶೇಖರ್ ವಿಜಯಜೀ (ಹರ್ಷ), ಅಹೋಭಾವ್ ಶೇಖರ್ ವಿಜಯಜೀ (ಅಭಿಶೇಖ), ಆನಂದಶೇಖರ್ ವಿಜಯಜೀ (ಆನಂದ), ತ್ಯಾಗ ಜ್ಯೋತಿ ಶ್ರೀ (ರೇಖಾ), ವೀರಜ್ಯೋತಿ ಶ್ರೀ (ವಿನಿತಾ), ಪರಂಜ್ಯೋತಿ ಶ್ರೀ (ಕರೀಷ್ಮಾ), ಧ್ಯಾನ ಜ್ಯೋತಿ ಶ್ರೀ (ಅದಿತಿ), ಇಕ್ಷುಜ್ಯೋತಿ ಶ್ರೀ (ಸಿಮ್ರನ್), ಮಹಾಪುಣ್ಯ ಶೇಖರ್ ವಿಜಯ ಜೀ (ಮೋಕ್ಷರುಚಿ), ಬಹುಪುಣ್ಯ ಶೇಖರ್ ವಿಜಯ ಜೀ (ವಿನೀತ್) ಎಂದು ಹೊಸ ನಾಮಕರಣ ಮಾಡಲಾಯಿತು.

ಪ್ರಜಾವಾಣಿ
ಸರ್ಕಾರಿ ಸೇವೆ: ಪಡೆಯೋದು ಹೇಗೆ
ಪೋಡಿ ಗೋಜಲು ಇಲ್ಲಿದೆ ಪರಿಹಾರ
ಇಲ್ಲಿದೆ ಮಾಹಿತಿ
ಡಾ.ಬಿ.ಆರ್.ಹರೀಶ್ ನಾಯ್ಕ್,
ಉಪವಿಭಾಗಾಧಿಕಾರಿ, ಬಿಡಿಎ ಹಾಗೂ ಬಿಬಿಎಂಪಿ ಉತ್ತರ ವಿಭಾಗ
https://bit.ly/2ZDKLSF

ಪ್ರಾಧಿಕಾರಕ್ಕೆ ₹1,000 ಕೋಟಿ ಕೊಡುವಂತೆ ಬೇಡಿಕೆ

ಒಕ್ಕಲಿಗ ಮೀಸಲಾತಿ ಶೇ 10ಕ್ಕೆ ಹೆಚ್ಚಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಸಮುದಾಯಕ್ಕೆ ಪ್ರವರ್ಗ 3 ಎ ಅಡಿ ಇರುವ ಮೀಸಲಾತಿ ಪ್ರಮಾಣವನ್ನು ಶೇ 10 ಕ್ಕೆ ಹೆಚ್ಚಿಸಬೇಕು ಮತ್ತು ಒಕ್ಕಲಿಗರ ಅಭಿವೃದ್ಧಿ ಪ್ರಾಧಿಕಾರ ರಚಿಸುವಂತೆ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದೆ.

ಆದಿಚುಂಚನಗಿರಿಯ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಸಮ್ಮುಖದಲ್ಲಿ ಸೋಮವಾರ ಸಂಜೆ ಇಲ್ಲಿನ ಆದಿಚುಂಚನಗಿರಿ ಮಠದಲ್ಲಿ ಈ ಸಂಬಂಧ ಸಭೆ ನಡೆಯಿತು. ಸಭೆಯಲ್ಲಿ ಹಾಜರಿದ್ದ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಕಂದಾಯ ಸಚಿವ ಆರ್.ಅಶೋಕ ಅವರಿಗೆ ಮನವಿಯನ್ನು ಸಲ್ಲಿಸಲಾಗಿದೆ.

ಒಕ್ಕಲಿಗ ಸಮುದಾಯ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಸಂಕಷ್ಟಗಳನ್ನು ಎದುರಿಸುತ್ತಿದೆ. ಇದರ ಪರಿಹಾರಕ್ಕೆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದೆ. ಒಕ್ಕಲಿಗ ಸಮುದಾಯದ ಎಲ್ಲ 115 ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿಲ್ಲ. ಇದರಿಂದ ಈ ಉಪಜಾತಿಗಳ ಜನ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ಈ ಎಲ್ಲ ಜಾತಿಗಳನ್ನೂ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಒಕ್ಕಲಿಗ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸುವುದರಿಂದ ನಗರ ಮತ್ತು ಗ್ರಾಮೀಣ ಪ್ರದೇಶದ ಒಕ್ಕಲಿಗರಿಗೆ ಅನುಕೂಲವಾಗಲಿದೆ. ಎರಡೂ ಕಡೆಗಳಲ್ಲಿ ಒಕ್ಕಲಿಗ ಕುಟುಂಬಗಳು ಸಂಕಷ್ಟದಲ್ಲಿವೆ. ಚಿಕ್ಕ ಮಕ್ಕಳು ಕೂಲಿಗೆ ಹೋಗುವ ಸ್ಥಿತಿ ಇದೆ. ನಗರ ಪ್ರದೇಶಕ್ಕೆ ಶೇ 20 ರಷ್ಟು ಒಕ್ಕಲಿಗರು ವಲಸೆ ಬಂದಿದ್ದಾರೆ. ಇವರ ಪರಿಸ್ಥಿತಿಯೂ ಚೆನ್ನಾಗಿಲ್ಲ. ರಾಜ್ಯದಲ್ಲಿ 95 ಲಕ್ಷ ಒಕ್ಕಲಿಗರ ಜನಸಂಖ್ಯೆ ಇದ್ದು, ಪ್ರಾಧಿಕಾರಕ್ಕೆ ₹1,000 ಕೋಟಿ ನಿಗದಿ ಮಾಡಬೇಕು ಎಂದೂ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕರ್ನಾಟಕದಲ್ಲಿ ಒಕ್ಕಲಿಗರಿಗೆ 3 ಎ ಪಟ್ಟಿಯಲ್ಲಿ ಶೇ 4ರಷ್ಟು ಮೀಸಲಾತಿ ಪಡೆಯುವ ಅವಕಾಶ ಇದ್ದರೂ ಒಕ್ಕಲಿಗ, ಬಲಿಜ ಸೇರಿದಂತೆ 12 ಸಮುದಾಯಗಳು ಈ ಪಟ್ಟಿಯಲ್ಲಿವೆ. ಇಷ್ಟು ಜನಸಂಖ್ಯೆ ಇರುವ ಸಮುದಾಯಕ್ಕೆ ಶೇ 4ರಷ್ಟು ಮೀಸಲಾತಿ ಸಾಲುವುದಿಲ್ಲ. ಈ ಕಾರಣಕ್ಕೆ ಪ್ರಾತಿನಿಧ್ಯ ಪ್ರಮಾಣವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ನಂಜಾವಧೂತ ಸ್ವಾಮೀಜಿ ಅವರು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಕಂದಾಯ ಸಚಿವ ಆರ್.ಅಶೋಕ ಅವರಿಗೆ ಮನವಿ ಪತ್ರವನ್ನು ನೀಡಿದರು. ಈ ಸಂದರ್ಭದಲ್ಲಿ ನ್ಯಾ.ಎ.ಜೆ.ಸದಾಶಿವ, ನಿವೃತ್ತ ಐಪಿಎಸ್ ಅಧಿಕಾರಿ ಕೆ.ವಿ.ಆರ್.ಠ್ಯಾಗೂರ್, ನಿವೃತ್ತ ಐಎಎಸ್ ಅಧಿಕಾರಿ ತಿಮ್ಮೇಗೌಡ ಇದ್ದರು.

ಹಿಂದಿನ ಸರ್ಕಾರದ ಜಾತಿ ಸಮೀಕ್ಷೆಯನ್ನು ಒಪ್ಪಿಕೊಳ್ಳಬಾರದು. ನಮ್ಮ ಸಮುದಾಯದ 115 ಉಪಪಂಗಡಗಳನ್ನು ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ, ಕೇಂದ್ರಕ್ಕೆ ಶಿಫಾರಸು ಮಾಡಬೇಕು

ನಿರ್ಮಲಾನಂದನಾಥ ಸ್ವಾಮೀಜಿ,
ಆದಿಚುಂಚನಗಿರಿ ಮಠ

ಒಕ್ಕಲಿಗ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಸರ್ಕಾರ ಬದ್ಧ. ಮೀಸಲಾತಿ ಸೇರಿದಂತೆ ಉಳಿದ ಬೇಡಿಕೆಗಳ ಈಡೇರಿಕೆ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು

ಆರ್. ಅಶೋಕ, ಕಂದಾಯ ಸಚಿವ

ಕೃಷಿಯನ್ನೇ ನಂಬಿಕೊಂಡ ಒಕ್ಕಲಿಗ ಇಂದು ಅತಂತ್ರನಾಗಿದ್ದಾನೆ. ಜನಸಂಖ್ಯೆ ಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡಬೇಕು.

ನಂಜಾವಧೂತ ಸ್ವಾಮೀಜಿ,
ಸ್ಫಟಿಕಪುರಿ ಮಠ

ಯತ್ನಾಳ್‌ಗೆ ತಾಕೀತು

ಯತ್ನಾಳ

ನವದೆಹಲಿ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ರೀತಿಯ ಬಹಿರಂಗ ಹೇಳಿಕೆ ನೀಡದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಸೂಚಿಸಿದ್ದಾರೆ.

ಹೈಕಮಾಂಡ್ ಕರೆಯ ಮೇರೆಗೆ ಸೋಮವಾರ ದಿಢೀರನೇ ನವದೆಹಲಿಗೆ ಆಗಮಿಸಿದ ಯತ್ನಾಳ, ನಡ್ಡಾ ಅವರನ್ನು ಭೇಟಿ ಮಾಡಿದರು. ಯತ್ನಾಳ ಅವರಿಗೆ ಪಕ್ಷದ ಶಿಸ್ತು ಪಾಲನಾ ಸಮಿತಿ ಎದುರು ಹಾಜರಾಗುವಂತೆಯೂ ಸೂಚಿಸಲಾಗಿದೆ ಎಂದು ತಿಳಿದುಬಂದಿದೆ.

‘ಮೀಸಲಾತಿ ಕೋರಿ ಪಂಚಮಸಾಲಿ ಸಮುದಾಯ ನಡೆಸುತ್ತಿರುವ ಹೋರಾಟ ನ್ಯಾಯಸಮ್ಮತವಾಗಿದ್ದು, ಸರ್ಕಾರ ಬೇಡಿಕೆ ಈಡೇರಿಸಬೇಕಿದೆ’ ಎಂದು ಯತ್ನಾಳ ಅವರು ಪ್ರತಿಪಾದಿಸಿದಾಗ ಈ ಸಂಬಂಧ ಯಾವುದೇ ರೀತಿಯ ಹೇಳಿಕೆ ನೀಡದಂತೆ ನಡ್ಡಾ ಸೂಚನೆ ನೀಡಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಪಕ್ಷದಲ್ಲಿ ಇರಲು ಬಯಸಿದಲ್ಲಿ, ಆಂತರಿಕವಾಗಿ ಚರ್ಚಿಸಬಹುದಾದ ವಿಷಯಗಳನ್ನು ಬಹಿರಂಗವಾಗಿ ಚರ್ಚಿಸಬಾರದು. ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಇರುಸುಮುರುಸು ಉಂಟು ಮಾಡಿದರೆ ಶಿಸ್ತು ಕ್ರಮ ಕೈಗೊಳ್ಳುವುದು ಅನಿವಾರ್ಯ ಎಂಬ ಎಚ್ಚರಿಕೆಯನ್ನೂ ವರಿಷ್ಠರು ನೀಡಿದ್ದಾರೆ ಎನ್ನಲಾಗಿದೆ.

‘ಜನನಾಯಕರ ಹಿತಾಸಕ್ತಿಗೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿಗೆ ಒತ್ತಾಯಿಸಿ ಬೆಂಗಳೂರಿನಲ್ಲಿ ಭಾನುವಾರ ನಡೆದ ಮಹಾರ್‍ಯಾಲಿ ನಂತರ ಧರಣಿ, ಸತ್ಯಾಗ್ರಹ ಮಾಡಬಾರದು ಎಂದು ನಿರ್ಧಾರವಾಗಿತ್ತು. ಆದರೆ, ಜನನಾಯಕರ ಹಿತಾಸಕ್ತಿಗೋಸ್ಕರ ಧರಣಿ ಮುಂದುವರಿಸಲು ತೀರ್ಮಾನಿಸಿದ್ದಕ್ಕೆ ಬೇಸರವಾಗಿ ಹಿಂದೆ ಸರಿದಿದ್ದೇನೆ’ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದ್ದಾರೆ.

‘ಸಮಾವೇಶದಲ್ಲಿಯೇ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರೆ ಗಲಾಟೆ ಆಗುತ್ತಿತ್ತು. ಇದರಿಂದ ಸಮುದಾಯದ ಘನತೆಗೆ ಚ್ಯುತಿಯಾಗುತ್ತದೆ ಎಂಬ ಕಾರಣದಿಂದ ಈ ನಿರ್ಧಾರ ತೆಗೆದುಕೊಂಡಿದ್ದೇನೆ. ಆದರೆ, ಸಮುದಾಯಕ್ಕೆ 2ಎ ಮೀಸಲಾತಿ ಬೇಕು ಎಂಬ ನಿಲುವಿಗೆ ಈಗಲೂ ಬದ್ಧವಾಗಿದ್ದೇನೆ’ ಎಂದು ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಚಿರತೆ ಕೊಂದ ಗ್ರಾಮಸ್ಥರು

ಆಕ್ರೋಶಕ್ಕೆ ಬಲಿಯಾದ ಚಿರತೆ

ಹಾಸನ: ಅರಸೀಕೆರೆ ತಾಲ್ಲೂಕಿನ ಬೈರಗೊಂಡನಹಳ್ಳಿ ಬೋವಿ ಕಾಲೋನಿಯಲ್ಲಿ ಸೋಮವಾರ ಬೆಳಿಗ್ಗೆ ಜಮೀನಿಗೆ ತೆರಳುತ್ತಿದ್ದ ತಾಯಿ–ಮಗನ ಮೇಲೆ ಹಾಗೂ ಸೆರೆ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಇಲಾಖೆಯ ಸಿಬ್ಬಂದಿಯ ಮೇಲೆ ದಾಳಿ ನಡೆಸಿದ ಚಿರತೆಯನ್ನು, ಸ್ಥಳೀಯರು ಸಂಜೆ ಹೊಡೆದು ಸಾಯಿಸಿದ್ದಾರೆ.

ಚಂದ್ರಮ್ಮ (5) ಮತ್ತು ಕಿರಣ್ (25) ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಹಾಸನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಅರಿವಳಿಕೆ ತಜ್ಞ ಡಾ. ಮುರಳಿ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಳಿಗ್ಗೆ 8.20ರ ಸಮಯದಲ್ಲಿ ತಾಯಿ, ಮಗ ಜಮೀನಿಗೆ ತೆರಳುತ್ತಿದ್ದಾಗ ಚಿರತೆ ದಾಳಿ ಮಾಡಿದೆ. ಮಾಹಿತಿ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಅರಿವಳಿಕೆ ತಜ್ಞ ಡಾ.ಮುರಳಿ ಜೊತೆಗೆ ಚಿರತೆ ಹಿಡಿಯಲು ಮುಂದಾದರು. ಅರಿವಳಿಕೆ ಚುಚ್ಚು ಮದ್ದು ನೀಡುತ್ತಿದ್ದಂತೆಯೇ ಚಿರತೆ ಡಾ.ಮುರಳಿ ಹಾಗೂ ಮತ್ತೊಬ್ಬರ ಮೇಲೆ ಎರಗಿದೆ.

ಹುಲಿ ಕಂಡು ಪ್ರಜ್ಞೆ ತಪ್ಪಿದಳು: ಪೊನ್ನಂಪೇಟೆ (ಕೊಡಗು): ಮಂಚಳ್ಳಿಯಲ್ಲಿ ಭಾನುವಾರ ಹುಲಿಯೊಂದನ್ನು ಸೆರೆ ಹಿಡಿಯಲಾಗಿದ್ದರೂ ಮತ್ತೂರು ಹಾಗೂ ಹರಿಹರ ಗ್ರಾಮದ ವ್ಯಾಪ್ತಿಯಲ್ಲಿ ಮತ್ತೊಂದು ಹುಲಿ ಓಡಾಡುತ್ತಿರುವುದು ತಾಲ್ಲೂಕಿನ ಜನರಲ್ಲಿ ಆತಂಕ ಹೆಚ್ಚಿಸಿದೆ.

ಮತ್ತೂರು ಗ್ರಾಮದಲ್ಲಿ, ಸೋಮವಾರ ಬೆಳಿಗ್ಗೆ ಪ್ರಥಮ ಪಿಯುಸಿ ವಿದ್ಯಾರ್ಥಿನಿ ರಕ್ಷಾ (16) ಹುಲಿ ಕಂಡು ಪ್ರಜ್ಞೆ ತಪ್ಪಿ ಆಸ್ಪತ್ರೆಗೆ ದಾಖಲಾಗಿದ್ದಾಳೆ.

ನಡೆದುಕೊಂಡು ಕಾಲೇಜಿಗೆ ತೆರಳುವಾಗ ಮಾರ್ಗದಲ್ಲಿ ಕಾಫಿ ತೋಟದಿಂದ ಹುಲಿ ರಸ್ತೆ ದಾಟಿದೆ. ಸಮೀಪದಲ್ಲಿ ಹುಲಿ ಕಂಡು ಹೆದರಿ, ಹಿಂದಕ್ಕೆ ಓಡಿದ್ದಾಳೆ. ಆದರೂ, ಮನೆಗೆ ತಲುಪಲಾಗದೆ ರಸ್ತೆ ಮಧ್ಯದಲ್ಲಿ ಕುಸಿದು ಬಿದ್ದಿದ್ದಾಳೆ ಎಂದು ಸ್ಥಳೀಯರು ತಿಳಿಸಿದರು.

ಸಿದ್ದರಾಮನಹುಂಡಿ ಗ್ರಾಮದಲ್ಲಿ ದೇಗುಲದ ಜೀರ್ಣೋದ್ಧಾರ

ರಾಮ ಮಂದಿರ: ಸಿದ್ದರಾಮಯ್ಯ ಕುಟುಂಬ ನೆರವು

• ಕೆ.ಎಸ್.ಗಿರೀಶ

ಮುಖ್ಯಾಂಶಗಳು

- ನೂರು ವರ್ಷದಷ್ಟು ಹಳೆಯ ಕೋದಂಡರಾಮ ಮಂದಿರ
- ಎರಡು ವರ್ಷದಿಂದ ಮರುನಿರ್ಮಾಣ ಕಾಮಗಾರಿ
- ರಾಮನವಮಿಗೆ ಮಂದಿರ ಸಿದ್ಧವಾಗುವ ನಿರೀಕ್ಷೆ

ಮೈಸೂರು: ತಾಲ್ಲೂಕಿನ ಸಿದ್ದರಾಮನಹುಂಡಿ ಗ್ರಾಮದಲ್ಲಿ, ನೂರು ವರ್ಷದಷ್ಟು ಹಳೆಯದಾದ ಕೋದಂಡರಾಮ ಮಂದಿರದ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರು ಹಾಗೂ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕುಟುಂಬದವರು ಕೈಜೋಡಿಸಿದ್ದಾರೆ.

ಅಂದಾಜು ₹ 60 ಲಕ್ಷ ವೆಚ್ಚದಲ್ಲಿ ಮಂದಿರ ನಿರ್ಮಾಣವಾಗುತ್ತಿದೆ. ಗ್ರಾಮದ 9 ಮಂದಿಯನ್ನು ಯಜಮಾನರನ್ನಾಗಿ ನೇಮಿಸಲಾಗಿದೆ. ತಮಿಳುನಾಡಿನ ನುರಿತ ಕುಶಲಕರ್ಮಿಗಳು, ಸ್ಥಳೀಯ ಕೆಲಸಗಾರರು ಈ ಕಾರ್ಯದಲ್ಲಿ ತೊಡಗಿದ್ದು, ಕೆಲಸ ಅಂತಿಮ ಹಂತಕ್ಕೆ ಬಂದಿದೆ.

ಗರ್ಭಗುಡಿ, ಪ್ರಾಂಗಣ ಹಾಗೂ ಹೊರಾಂಗಣವನ್ನು ಈಗಾಗಲೇ ನಿರ್ಮಿಸಲಾಗಿದೆ. ಗರ್ಭಗುಡಿಯ ಸುತ್ತ 10 ವಿವಿಧ ದೇವರುಗಳ ಮೂರ್ತಿಯನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ದೇವರಮೂರ್ತಿಯ ಪ್ರಭಾವಳಿಗಳನ್ನು ರೂಪಿಸುವ ಕಾರ್ಯ ನಡೆದಿದೆ.

‘ಗ್ರಾಮದಲ್ಲಿ ಸಿದ್ದರಾಮೇಶ್ವರ, ಚಾಮುಂಡೇಶ್ವರಿ, ರಾಮಮಂದಿರ ಸೇರಿದಂತೆ ನಾಲ್ಕು ದೇಗುಲಗಳಿವೆ. ಇವುಗಳಲ್ಲಿ ರಾಮಮಂದಿರ ಸಹ ಹಳೆಯ ದೇಗುಲವಾಗಿದ್ದು, ಶಿಥಿಲಾವಸ್ಥೆಗೆ ತಲುಪಿತ್ತು.ಜೀರ್ಣೋದ್ಧಾರಮಾಡಲುನಿಶ್ಚಯಿಸಿದ ಗ್ರಾಮಸ್ಥರು ಹಣವನ್ನು ಸಂಗ್ರಹಿಸಿದರು. ಇದಕ್ಕೆ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಮ್ಮ ದೊಡ್ಡಮೊತ್ತದ ದೇಣಿಗೆ ನೀಡಿದ್ದಾರೆ’ ಎಂದು ಗ್ರಾಮಸ್ಥರಾದ ಉದಯ್ ತಿಳಿಸಿದರು.

ಇಲ್ಲಿ 9 ದಿನ ನಡೆಯುವ ರಾಮನವಮಿಯು, ಹೋಬಳಿಯಲ್ಲೇ ಹೆಚ್ಚು ಮಹತ್ವ ಗಳಿಸಿದೆ. ಹಲವು ಕಾರ್ಯಕ್ರಮಗಳು ನಡೆಯುತ್ತವೆ. ಗ್ರಾಮದಲ್ಲಿ ರಾತ್ರಿ ರಾಮದೇವರ ಭಾವಚಿತ್ರದ ಮೆರವಣಿಗೆ ನಡೆಸಲಾಗುತ್ತದೆ. ಹೆಂಚಿನ ಚಾವಣಿ ಹೊಂದಿದ್ದ ಹಳೆಯ ಕೋದಂಡರಾಮ ಮಂದಿರವನ್ನು ಕೆಡವಿ, ಹೊಸದಾಗಿ ಕಟ್ಟಲಾಗುತ್ತಿದೆ. ‘ಲಾಕ್‌ಡೌನ್’ನಿಂದಾಗಿ ಕಳೆದ ವರ್ಷ ಕೆಲಸ ಮಂದಗತಿಯಲ್ಲಿ ಸಾಗಿತ್ತು. ಈ ಬಾರಿಯ ರಾಮನವಮಿಯ ಹೊತ್ತಿಗೆ ಮಂದಿರ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎನ್ನುತ್ತಾರೆ ಗ್ರಾಮದ ನಾಗರಾಜು, ನಿಖಿಲ್‌ಕುಮಾರ್, ರಮೇಶ್.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಎಂಜಿನಿಯರ್ ಪುನೀತ್, ‘ಗರ್ಭಗುಡಿಯಲ್ಲಿ ರಾಮ, ಸೀತೆ, ಲಕ್ಷ್ಮಣ, ಆಂಜನೇಯ ಇರುವ ಮೂರ್ತಿ ಸೇರಿದಂತೆ ಸುತ್ತಲೂ ದಶಾವತಾರದ ಮೂರ್ತಿಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಯಾವ ಯಾವ ದೇವರ ಮೂರ್ತಿಗಳನ್ನಿಡಬೇಕು ಎಂಬುದು ಇನ್ನೂ ಅಂತಿಮವಾಗಿಲ್ಲ’ ಎಂದು ತಿಳಿಸಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸ್ವಗ್ರಾಮವಾದ ಸಿದ್ದರಾಮನಹುಂಡಿಯಲ್ಲಿ ನಿರ್ಮಾಣವಾಗುತ್ತಿರುವ ಕೋದಂಡರಾಮ ಮಂದಿರ

ಅಯೋಧ್ಯೆಯಲ್ಲಿ ನಡೆಯುತ್ತಿರುವಂತೆ ನಮ್ಮ ಊರಿನಲ್ಲೂ ರಾಮಮಂದಿರ ನಿರ್ಮಾಣವಾಗುತ್ತಿದೆ. ಶಿಥಿಲಾವಸ್ಥೆಯಲ್ಲಿ ಇದ್ದ ರಾಮಮಂದಿರ ಜೀರ್ಣೋದ್ಧಾರವಾಗುತ್ತಿದೆ. ಸಿದ್ದರಾಮಯ್ಯ ಅವರೂ ದೇಣಿಗೆ ನೀಡಿದ್ದಾರೆ

ಸಿ.ಕೆಂಪೀರಯ್ಯ, ಸಿದ್ದರಾಮಯ್ಯ ಅವರ ಆಪ್ತರು

ತಮಿಳುನಾಡಿನ ಕುಂಭಕೋಣಂ ನಮ್ಮೂರು. ಇಲ್ಲಿ ದೇವಾಲಯದ ನಿರ್ಮಾಣ ಕಾರ್ಯಕ್ಕೆ ಬಂದಿದ್ದು, ಬಹುತೇಕ ನಿರ್ಮಾಣ ಕಾರ್ಯ ಮುಗಿದಿದೆ

ಸುಧಾಕರ್. ತಮಿಳುನಾಡಿನ ಶಿಲ್ಪಿ

ತೋಟಗಾರಿಕೆ ಬೆಳೆ, ಬೇಸಿಗೆ ಶೇಂಗಾ ಬೆಳೆಗೆ ಸಹಕಾರಿ

ಕೊಡಗು, ಶಿವಮೊಗ್ಗ ಸೇರಿ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಹೊಸದುರ್ಗದಲ್ಲಿ ಸೋಮವಾರ ಸಂಜೆ ಅಕಾಲಿಕ ಮಳೆ ಸುರಿಯಿತು.

ಬೆಂಗಳೂರು: ರಾಜ್ಯದಲ್ಲಿ ಶಿವಮೊಗ್ಗ, ಚಿತ್ರದುರ್ಗ, ಕಲಬುರ್ಗಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಸೋಮವಾರವೂ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಹೊಸನಗರದಲ್ಲಿ ಗಾಳಿ ಸಹಿತ ಮಳೆಯಾಗಿದೆ.

ಭಾನುವಾರ ರಾತ್ರಿ ಸುರಿದ ಮಳೆಗೆ ಶಿವಮೊಗ್ಗ ನಗರದ ತುಂಗಾ ನಾಲೆ ತಡೆಗೋಡೆ ಕುಸಿದು ಸುಭಾಷ್ ನಗರದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ವಿವಿಧೆಡೆ ಅಕಾಲಿಕ ಮಳೆ ಮುಂದುವರಿದಿದೆ.

ತೆಂಗು, ಅಡಿಕೆ, ಬಾಳೆಯಂತಹ ತೋಟಗಾರಿಕೆ ಬೆಳೆಗಳಿಗೆ ಹಾಗೂ ಬೇಸಿಗೆ ಶೇಂಗಾ ಬೆಳೆಗೆ ಸಹಕಾರಿಯಾಗಿದೆ. ಹಣ್ಣು, ಹೂವು, ತರಕಾರಿ, ಮಾವು, ದಾಳಿಂಬೆ ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ.

ಮೆಕ್ಕೆಜೋಳದ ತೆನೆ ಕಟಾವು ಮಾಡಿರುವ ರೈತರು ಜಮೀನಿನಲ್ಲಿಯೇ ರಾಶಿ ಹಾಕಿದ್ದು, ರಕ್ಷಣೆಗೆ ತಾಡಪಾಲು ಮುಚ್ಚುತ್ತಿದ್ದಾರೆ. ರಾಗಿ ಬೆಳೆ ಕಟಾವು ಮಾಡಿ ಸುಗ್ಗಿ ಕಾರ್ಯ ಮಾಡದಿರುವ ರೈತರು ಈಗ ಹುಲ್ಲು ಕಪ್ಪಾಗುವ ಆತಂಕದಲ್ಲಿದ್ದಾರೆ.

ಕೊಡಗು ಜಿಲ್ಲೆಯ ಮಡಿಕೇರಿ, ಗೋಣಿಕೊಪ್ಪಲು, ಪೊನ್ನಂಪೇಟೆ, ಮೂರ್ನಾಡು, ಕಡಗದಾಳು, ತಲಕಾವೇರಿ, ಸಿದ್ದಾಪುರ, ನೆಲ್ಯಹುದಿಕೇರಿಯಲ್ಲಿ ಸೋಮವಾರ ಸಂಜೆ ಗುಡುಗು ಸಹಿತ ಭಾರೀ ಮಳೆಯಾಗಿದೆ.

ಒಣಗಲು ಹಾಕಿದ್ದ ಕಾಫಿ, ಮಳೆಗೆ ಕೊಚ್ಚಿಹೋಗಿದೆ. ನಾಗರಹೊಳೆ ಭಾಗದಲ್ಲೂ ಮಳೆಯಾಗಿದೆ. ಕಾಡು ಹಸಿರಾಗಲಿದ್ದು, ಕಾಳ್ಗಿಚ್ಚಿನ ಆತಂಕ ದೂರವಾಗಿದೆ. ಮೈಸೂರಿನಲ್ಲೂ ಸಂಜೆ ಸಾಧಾರಣ ಮಳೆ ಸುರಿದಿದೆ.

ಕಲಬುರ್ಗಿ ನಗರದಲ್ಲಿ ಸಂಜೆ 10 ನಿಮಿಷ ಬಿರುಸಿನ ಮಳೆ ಸುರಿಯಿತು. ಬಸ್ ನಿಲ್ದಾಣ ಸೇರಿ ಪ್ರಮುಖ ರಸ್ತೆಗಳಲ್ಲಿ ನೀರು ನಿಂತಿತ್ತು. ಒಂದು ವಾರದಿಂದ ನಗರದಲ್ಲಿ ಶೀತ ಗಾಳಿಯಿದ್ದು, ಬಿಸಿಲಿನ ಪ್ರಮಾಣ ವಾಡಿಕೆಗಿಂತ ಕಡಿಮೆ ಇದೆ.

ಪುದುಚೇರಿ ಮುಖ್ಯಮಂತ್ರಿ ನಾರಾಯಣಸ್ವಾಮಿ ರಾಜೀನಾಮೆ • ರಾಷ್ಟ್ರಪತಿ ಆಡಳಿತ ಸಾಧ್ಯತೆ

ಕುಸಿದ ಸಂಖ್ಯಾಬಲ: ಸರ್ಕಾರ ಪತನ

ಪುದುಚೇರಿ (ಪಿಟಿಐ): ಪುದುಚೇರಿ ಸರ್ಕಾರವು ಸೋಮವಾರ ಪತನವಾಗಿದೆ. ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತುಮಾಡಲು ಸಾಧ್ಯವಾಗದ, ವಿ. ನಾರಾಯಣಸ್ವಾಮಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗುವ ಸಾಧ್ಯತೆ ಇದೆ.

ಆಡಳಿತಾರೂಢ ಕಾಂಗ್ರೆಸ್‌ನ ಐವರು ಶಾಸಕರು ಹಾಗೂ ಕಾಂಗ್ರೆಸ್‌ನ ಮಿತ್ರಪಕ್ಷವಾದ ಡಿಎಂಕೆಯ ಒಬ್ಬ ಶಾಸಕ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು. ಹೀಗಾಗಿ ವಿಧಾನಸಭೆಯ ಸದಸ್ಯರ ಸಂಖ್ಯೆ ಕುಸಿದು, ಸರ್ಕಾರಕ್ಕೆ ಬಹುಮತದ ಕೊರತೆ ಎದುರಾಗಿತ್ತು. ವಿರೋಧ ಪಕ್ಷಗಳು ಸರ್ಕಾರಕ್ಕೆ ಬಹುಮತವಿಲ್ಲ ಎಂದು ಲೆಫ್ಟಿನೆಂಟ್ ಗವರ್ನರ್ ಅವರಿಗೆ ಮನವಿ ಸಲ್ಲಿಸಿದ್ದವು.

ಸೋಮವಾರ ವಿ.ನಾರಾಯಣಸ್ವಾಮಿ ಅವರು ವಿಶ್ವಾಸಮತ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು. ಈ ಕುರಿತು ನಡೆದ ಚರ್ಚೆಯಲ್ಲಿ, 'ಕೇಂದ್ರ ಸರ್ಕಾರ ಮತ್ತು ಹಿಂದಿನ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಅವರು ಕಿರುಕುಳ ನೀಡಿದರು' ಎಂದು ತಮ್ಮ ಭಾಷಣದಲ್ಲಿ ಆರೋಪಿಸಿದರು. ನಿರ್ಣಯವನ್ನು ಮತಕ್ಕೆ ಹಾಕುವುದಾಗಿ ಘೋಷಿಸಿದರು.

ಬಿಜೆಪಿಯ ನಾಮನಿರ್ದೇಶಿತ ಮೂವರು ಸದಸ್ಯರಿಗೆ ಮತದಾನದ ಹಕ್ಕು ಇಲ್ಲ ಎಂದು ಕಾಂಗ್ರೆಸ್ ಪ್ರತಿಪಾದಿಸಿತು. ಈ ಬಗ್ಗೆ ಸ್ಪೀಕರ್ ಅವರು ಸ್ಪಷ್ಟನೆ ನೀಡಬೇಕು ಎಂದು ಕಾಂಗ್ರೆಸ್‌ನ ಅನಂತರಾಮನ್ ಅವರು ಒತ್ತಾಯಿಸಿದರು. ಆಗ ವಿರೋಧ ಪಕ್ಷಗಳು ಆಡಳಿತ ಪಕ್ಷದ ಸದಸ್ಯರ ಜತೆ ವಾಗ್ವಾದಕ್ಕೆ ಇಳಿದರು. ನಂತರ ಮುಖ್ಯಮಂತ್ರಿ ನಾರಾಯಣಸ್ವಾಮಿ ಸೇರಿದಂತೆ ಕಾಂಗ್ರೆಸ್ ಮತ್ತು ಡಿಎಂಕೆ ಸದಸ್ಯರು ಸದನದಿಂದ ಹೊರನಡೆದರು.

ವಿಶ್ವಾಸಮತ ನಿರ್ಣಯವನ್ನು ಮತಕ್ಕೆ ಹಾಕಲೇ ಇಲ್ಲ. ಆನಂತರ ಸ್ಪೀಕರ್ ಶಿವಕೊಲುಂಡು ಅವರು, 'ವಿಶ್ವಾಸಮತದಲ್ಲಿ ಸರ್ಕಾರ ಸೋತಿದೆ' ಎಂದು ಘೋಷಿಸಿದರು. ಈ ಮುಖ್ಯಮಂತ್ರಿ ನಾರಾಯಣಸ್ವಾಮಿ ಅವರು ರಾಜನಿವಾಸಕ್ಕೆ ತೆರಳಿ, ತಮ್ಮ ರಾಜೀನಾಮೆಯನ್ನು ಲೆಫ್ಟಿನೆಂಟ್ ಗವರ್ನರ್‌ಗೆ ಸಲ್ಲಿಸಿದರು.

ಮೂರು ರಾಜ್ಯದಲ್ಲೇ ಕಾಂಗ್ರೆಸ್ ಸರ್ಕಾರ: ಪುದುಚೇರಿಯಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗುವ ಮೂಲಕ ದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳ ಸಂಖ್ಯೆ ಮೂರಕ್ಕೆ ಕುಸಿದಿದೆ. ರಾಜಸ್ಥಾನ, ಪಂಜಾಬ್ ಮತ್ತು ಛತ್ತೀಸಗಡದಲ್ಲಿ ಮಾತ್ರ ಈಗ ಕಾಂಗ್ರೆಸ್ ಸರ್ಕಾರವಿದೆ. ಕರ್ನಾಟಕ (ಜೆಡಿಎಸ್-ಕಾಂಗ್ರೆಸ್) ಹಾಗೂ ಮಧ್ಯಪ್ರದೇಶದಲ್ಲಿ ಇದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಶಾಸಕರ ರಾಜೀನಾಮೆಯಿಂದಾಗಿ ಕುಸಿದಿದ್ದವು. ಆ ಶಾಸಕರನ್ನು ತನ್ನತ್ತ ಸೆಳೆದ ಬಿಜೆಪಿಯು ಎರಡೂ ರಾಜ್ಯಗಳಲ್ಲಿ ಸರ್ಕಾರ ರಚಿಸಿದೆ. 'ಪುದುಚೇರಿಯಲ್ಲೂ ಆಡಳಿತಾರೂಢ ಕಾಂಗ್ರೆಸ್ ಮತ್ತು ಡಿಎಂಕೆ ಶಾಸಕರನ್ನು ಸೆಳೆದು ಸರ್ಕಾರವನ್ನು ಬೀಳಿಸಿದೆ' ಎಂದು ತಮಿಳುನಾಡು ಪ್ರದೇಶ ಕಾಂಗ್ರೆಸ್ ಆರೋಪಿಸಿದೆ.

ವಿ.ನಾರಾಯಣಸ್ವಾಮಿ ಅವರು ಲೆಫ್ಟಿನೆಂಟ್ ಗವರ್ನರ್ ತಮಿಳಿಸಾಯಿ ಸೌಂದರರಾಜನ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು –ಪಿಟಿಐ ಚಿತ್ರ

ಜನರಿಂದ ತಿರಸ್ಕೃತವಾಗುವ ಬಿಜೆಪಿಯು, ಆನಂತರ ಸರ್ಕಾರವನ್ನು ಉರುಳಿಸಿ ತನ್ನ ಸರ್ಕಾರವನ್ನು ರಚಿಸುವ ತಂತ್ರವನ್ನು ಮುಂದುವರಿಸಿದೆ
ವಿ.ನಾರಾಯಣಸ್ವಾಮಿ, ಪುದುಚೇರಿ ಮಾಜಿ ಮುಖ್ಯಮಂತ್ರಿ

ಎನ್‌ಡಿಎ ಇಲ್ಲಿ ಸದ್ಯ ಸರ್ಕಾರ ರಚನೆ ಮಾಡುವುದಿಲ್ಲ. ಚುನಾವಣೆಯ ನಂತರವೇ ಎನ್‌ಡಿಎ ಪುದುಚೇರಿಯಲ್ಲಿ ಸರ್ಕಾರ ರಚನೆ ಮಾಡಲಿದೆ
ವಿ.ಸ್ವಾಮಿನಾಥನ್, ನಾಮನಿರ್ದೇಶಿತ ಬಿಜೆಪಿ ಸದಸ್ಯ

ಬಿಜೆಪಿ ಪ್ರಜಾಪ್ರಭುತ್ವಾತ್ಮಕ ನೀತಿಗಳನ್ನು ಗಾಳಿಗೆ ತೂರಿ ಸರ್ಕಾರ ರಚನೆಗಳನ್ನು ಮುಂದಾಗಿದೆ. ಇನ್ನೊಂದೆಡೆ ನಮ್ಮ ವಿ.ನಾರಾಯಣಸ್ವಾಮಿ ಅವರು ರಾಜೀನಾಮೆ ನೀಡಿ ಪ್ರಜಾಪ್ರಭುತ್ವವನ್ನು ಎತ್ತಿಹಿಡಿದ್ದಾರೆ
ಎಂ.ಕೆ.ಸ್ಟಾಲಿನ್, ಡಿಎಂಕೆ ಮುಖ್ಯಸ್ಥ

'ಕಾನೂನು ಹೋರಾಟ'

'ಚುನಾಯಿತ ಶಾಸಕರಿಗೆ ಮಾತ್ರ ಮತದಾನದ ಹಕ್ಕು ನೀಡಬೇಕು. ಚುನಾವಣೆಯಲ್ಲಿ ಸೋತು, ಕೇಂದ್ರ ಸರ್ಕಾರದಿಂದ ನಾಮನಿರ್ದೇಶನಗೊಂಡವರಿಗೆ ಮತದಾನದ ಹಕ್ಕು ಇಲ್ಲ ಎಂಬುದು ನಮ್ಮ ಪ್ರತಿಪಾದನೆಯಾಗಿತ್ತು. ಇದನ್ನು ಸ್ಪೀಕರ್ ಅವರು ಮಾನ್ಯ ಮಾಡಲಿಲ್ಲ. ಹೀಗಾಗಿ ಸದನದಿಂದ ಹೊರನಡೆದೆವು' ಎಂದು ವಿ.ನಾರಾಯಣಸ್ವಾಮಿ ಅವರು ಹೇಳಿದ್ದಾರೆ.

'ನಾವು ಸದನದಲ್ಲಿ ಇಲ್ಲದಿದ್ದರೂ, ನಿರ್ಣಯವನ್ನು ಮತಕ್ಕೆ ಹಾಕಬೇಕಿತ್ತು. ಆದರೆ, ಹಾಗೆ ಮಾಡದೆ ಸರ್ಕಾರ ವಿಶ್ವಾಸಮತ ಸಾಬೀತುಮಾಡುವಲ್ಲಿ ಸೋತಿದೆ ಎಂದು ಸ್ಪೀಕರ್ ಘೋಷಿಸಿದ್ದಾರೆ. ಇದು ಸಂಪೂರ್ಣ ತಪ್ಪು. ಹೀಗೆ ಘೋಷಿಸುವಲ್ಲಿ ಸ್ಪೀಕರ್ ಅವರು ಸದನದ ನಿಯಮಾವಳಿಗಳನ್ನು ಪಾಲನೆ ಮಾಡಿಲ್ಲ. ಈ ಬಗ್ಗೆ ಕಾನೂನು ಹೋರಾಟ ನಡೆಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಕಾವೇರಿ: ನೀರಾವರಿ ಸಚಿವರ ವೈಫಲ್ಯಕ್ಕೆ ಸಾಕ್ಷಿ- ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿಯ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ತಮಿಳುನಾಡು ಸರ್ಕಾರ ಯೋಜನೆ ರೂಪಿಸಿ, ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಅನುಷ್ಠಾನಕ್ಕೆ ಮುಂದಾಗಿರುವ ವಿಷಯ ರಾಜ್ಯದ ಜಲ ಸಂಪನ್ಮೂಲ ಸಚಿವರ ಅರಿವಿಗೇ ಬಾರದಿರುವುದು ಅವರ ವೈಫಲ್ಯಕ್ಕೆ ಸಾಕ್ಷಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಸಚಿವ ರಮೇಶ ಜಾರಕಿಹೊಳಿ ಹೆಸರು ಹೇಳದೇ ವಾಗ್ದಾಳಿ ನಡೆಸಿದ್ದಾರೆ.

ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಸಾವಿರ ರಾಜಕೀಯ ಮಾಡುವುದು, ಅವರನ್ನು ಸೋಲಿಸುತ್ತೇನೆ, ಇವರನ್ನು ಸೋಲಿಸುತ್ತೇನೆ ಎನ್ನುವುದನ್ನು ಬಿಟ್ಟು ರಾಜ್ಯದ ಹಿತಕ್ಕಾಗಿ ಸವಾಲು ಹಾಕಲಿ. ಜಲ ಸಂಪನ್ಮೂಲ ಇಲಾಖೆ ಏನು ಬೇಡುತ್ತಿದೆಯೋ ಕನಿಷ್ಠ ಅದನ್ನಾದರೂ ಗಳಿಸಿಕೊಳ್ಳಲಿ' ಎಂದೂ ಅವರು ಹೇಳಿದ್ದಾರೆ.

ಕಾವೇರಿ ವಿವಾದದಲ್ಲಿ ದೀರ್ಘಾವಧಿಯ ಹೋರಾಟದಲ್ಲಿ ರಾಜ್ಯಕ್ಕೆ ತಕ್ಕ ಮಟ್ಟಿನ ಯಶಸ್ಸು ಸಿಕ್ಕಿದೆ. ಈವರೆಗೆ ಜಲ ಸಂಪನ್ಮೂಲ ಖಾತೆ ನಿರ್ವಹಿಸಿದವರ ಬದ್ಧತೆ ಇದಕ್ಕೆ ಕಾರಣವಾಗಿರಬಹುದು. ಈ ಸರ್ಕಾರದಲ್ಲಿ ಅಂತಹ ಬದ್ಧತೆ ಕಾಣುತ್ತಿಲ್ಲ. ಇಲಾಖೆಯ ಕಚೇರಿಯಲ್ಲಿ ತಾವು ಕೂರುವುದಿಲ್ಲ ಸಚಿವರ ಇಚ್ಛೆಯಾಗಿದ್ದು, ಅದು ಅಡೆತಡೆ ಮೇಲೆ ಇಲಾಖೆ ನಡೆಸುವುದು ನಗಣ್ಯವಾಗಿದೆ ಎಂದು ಟೀಕಿಸಿದ್ದಾರೆ.

ರಾಜ್ಯ ಕೇಂದ್ರ ಎರಡೂ ಕಡೆ ಬಿಜೆಪಿ ಸರ್ಕಾರವಿದೆ. ರಾಜ್ಯದಲ್ಲಿ ಬಿಜೆಪಿ 25 ಸಂಸದರಿದ್ದಾರೆ. ಕಾವೇರಿ ವಿಷಯದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದ ಹಿತ ಕಾಯಬೇಕು. ವಿರುದ್ಧವಾಗಿ ನಡೆದುಕೊಂಡರೆ ಬಿಸಿ ಮುಟ್ಟಿಸಬೇಕಾಗುತ್ತದೆ. ತಾವು ಮುಖ್ಯಮಂತ್ರಿ ಆಗಿದ್ದಾಗ ಮೇಕೆದಾಟು ಯೋಜನೆ ರೂಪಿಸಿದ್ದಾಗ ತಮಿಳುನಾಡಿನ ಎಐಎಡಿಎಂಕೆ ಪಕ್ಷದ ಮಾತು ಕೇಳಿ ಕೇಂದ್ರ ಸರ್ಕಾರ ತೊಂದರೆ ಕೊಟ್ಟಿತ್ತು. ಅದೇ ಸರ್ಕಾರ ಈಗ ಎಐಎಡಿಎಂಕೆ ಸರ್ಕಾರಕ್ಕೆ ಹೆಚ್ಚುವರಿ ನೀರಿನ ಬಳಕೆಗೆ ಹಣಕಾಸಿನ ನೆರವನ್ನು ನೀಡಿದೆ. ರಾಜ್ಯದಿಂದ ಎಲ್ಲವನ್ನೂ ಪಡೆದ ನಂತರ ರಾಜ್ಯವನ್ನು ಶೋಷಿಸುತ್ತಿರುವುದಕ್ಕೆ ಇದು ಉದಾಹರಣೆ ಹೇಳಿದ್ದಾರೆ.

'ಹೆಚ್ಚುವರಿ ನೀರಿನ ಕಾರಣಕ್ಕಾಗಿಯೇ ತಮಿಳುನಾಡು ಸರ್ಕಾರ ಮೇಕೆದಾಟು ಯೋಜನೆಗೆ ಅಡ್ಡಿಪಡಿಸಿತ್ತು. ಈಗ ಹೆಚ್ಚುವರಿ ನೀರನ್ನು ವೈಗೈ, ವೆಲ್ಲಾರು ಮತ್ತು ಗುಂಡಾರು ನದಿಗಳಿಗೆ ಹಂಚಿಕೆ ಮಾಡಿ, ನದಿಗಳ ಜೋಡಣೆಗೆ ಮುಂದಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲು ಆಗ್ರಹ

ಬೆಂಗಳೂರು: ಕಾವೇರಿ ನದಿಯ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವ ತಮಿಳುನಾಡು ಸರ್ಕಾರ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ಪ್ರಶ್ನಿಸಿ ತಕ್ಷಣವೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ 'ಕಾವೇರಿ: ತಮಿಳುನಾಡು ವಿರುದ್ಧ ಚಕಾರವೆತ್ತದ ರಾಜ್ಯ' ವಿಶೇಷ ವರದಿಯ ತುಣುಕನ್ನು ಸೋಮವಾರ ಟ್ವೀಟರ್‌ನಲ್ಲಿ ಹಂಚಿಕೊಂಡಿರುವ ಅವರು, 'ಸುಪ್ರೀಂಕೋರ್ಟ್‌ನಲ್ಲೂ ಪ್ರಶ್ನಿಸಬೇಕು ಮತ್ತು ಆ ರಾಜ್ಯದ ಮುಖ್ಯಮಂತ್ರಿಗಳಿಗೂ ಪತ್ರ ಬರೆದು ಯೋಜನೆ ಸ್ಥಗಿತಕ್ಕೆ ಒತ್ತಾಯಿಸಬೇಕು' ಎಂದು ಆಗ್ರಹಿಸಿದ್ದಾರೆ. '45 ಟಿಎಂಸಿ ಅಡಿ ನೀರನ್ನು ಅಕ್ರಮವಾಗಿ ಬಳಸಿಕೊಂಡು ನದಿ ಜೋಡಣೆ ಮಾಡಲು ತಮಿಳುನಾಡು ಸರ್ಕಾರ ಹೊರಟಿರುವುದು ಖಂಡನೀಯ. ಈ ಅಕ್ರಮವನ್ನು ನಿಲ್ಲಿಸುವಂತೆ ಆ ರಾಜ್ಯದ ಮುಖ್ಯಮಂತ್ರಿಗಳನ್ನು ಆಗ್ರಹಿಸುತ್ತೇನೆ' ಎಂದು ಟ್ವೀಟ್ ಮಾಡಿದ್ದಾರೆ.

ಹೆಚ್ಚುವರಿ ನೀರಿನ ಬಳಕೆಗೆ ಅವಕಾಶ ಇಲ್ಲ

ಒಂದನೇ ಪುಟದಿಂದ

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ತಮಿಳುನಾಡು ಸೇರಿದಂತೆ ಯಾವುದೇ ರಾಜ್ಯದವರೂ ಹೆಚ್ಚುವರಿ ನೀರು ಪಡೆದು ಬಳಕೆ ಮಾಡಲು ಅವಕಾಶ ಕೊಡುವುದಿಲ್ಲ. ಹೇಳಿಕೆ ನೀಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಈ ಕುರಿತು ಜನರಿಗೆ ಯಾವುದೇ ಆತಂಕ ಬೇಡ' ಎಂದರು. ಕಾವೇರಿ ನದಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ಸರ್ವಪಕ್ಷ ಸಭೆ ನಡೆಸುವ ಕುರಿತು ಇನ್ನೂ ಯೋಚನೆ ಮಾಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೆಹಬೂಬಾ ಮುಫ್ತಿ ಪುನರಾಯ್ಕೆ

ಶ್ರೀನಗರ(ಪಿಟಿಐ): ಜಮ್ಮು-ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಅವರು ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ (ಪಿಡಿಪಿ) ಅಧ್ಯಕ್ಷರಾಗಿ ಸೋಮವಾರ ಪುನರಾಯ್ಕೆಯಾಗಿದ್ದಾರೆ. ಇವರ ಅಧಿಕಾರ ಅವಧಿ ಮೂರು ವರ್ಷ.

ಪಿಡಿಪಿ ಹಿರಿಯ ನಾಯಕ ಅಬ್ದುಲ್ ರೆಹಮಾನ್ ವೀರಿ ಅವರು ಪಕ್ಷದ ಚುನಾವಣಾ ಸಮಿತಿ ಅಧ್ಯಕ್ಷರಾಗಿದ್ದರು.ಹಿರಿಯ ನಾಯಕ ಸುರೀಂದರ್ ಚೌಧರಿ ಅವರು ಚುನಾವಣಾ ಅಧಿಕಾರಿಯಾಗಿದ್ದರು.

ಮಹದಾಯಿ: ಗೋವಾ ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿ

ಸ್ಥಳ ಪರಿಶೀಲನೆಗೆ ಸುಪ್ರೀಂ ಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕವು ಕಳಸಾ ತಿರುವು ಯೋಜನೆ ಮೂಲಕ ಮಲಪ್ರಭಾ ನದಿಗೆ ಅಕ್ರಮವಾಗಿ ನೀರು ಹರಿಸಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.

'ಮಲಪ್ರಭಾ ನದಿಗೆ ಮಹದಾಯಿಯ ನೀರನ್ನು ಅಕ್ರಮವಾಗಿ ಹರಿಸುವ ಮೂಲಕ ಕರ್ನಾಟಕ ಸರ್ಕಾರ ನ್ಯಾಯಾಂಗ ನಿಂದನೆ ಮಾಡಿದೆ' ಎಂದು ಆರೋಪಿಸಿ ಗೋವಾ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ನಡೆಸಿತು. ಕಣಿವೆ ವ್ಯಾಪ್ತಿಯ ಮೂರೂ ರಾಜ್ಯಗಳ ಸದಸ್ಯರನ್ನು ಒಳಗೊಂಡ ಜಂಟಿ ಸಮಿತಿಯು ಸ್ಥಳ ಪರಿಶೀಲನೆ ನಡೆಸಿ ನಾಲ್ಕು ವಾರದೊಳಗೆ ವರದಿ ಸಲ್ಲಿಸುವಂತೆ ಪೀಠ ಸೂಚಿಸಿತು. ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಕರ್ನಾಟಕವು ಕಳಸಾ ತಡೆಗೋಡೆ ಒಡೆದು ಸದ್ದಿಲ್ಲದೆ ಮಹದಾಯಿ ನೀರನ್ನು ಮಲಪ್ರಭಾ ನದಿಗೆ ಹರಿಸಿ ಆದೇಶ ಉಲ್ಲಂಘಿಸಿದೆ ಎಂದು ಗೋವಾ ಪರ ವಕೀಲ ಪಿ.ಎಸ್. ನರಸಿಂಹ ವಿಚಾರಣೆ ವೇಳೆ ದೂರಿದರು.

ರಾಜ್ಯದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, ವಕೀಲರಾದ ಮೋಹನ್ ಕಾತರಕಿ ಹಾಗೂ ನಿಶಾಂತ್ ಪಾಟೀಲ ಅವರು ಗೋವಾದ ಆರೋಪದಲ್ಲಿ ಹುರುಳಿಲ್ಲ ಎಂದು ಹೇಳಿದರು.

ಕಳೆದ ವರ್ಷದ ಮಾರ್ಚ್‌ನಲ್ಲಿ ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಪೀಠ, ನೀರಿನ ಹರಿವನ್ನು ತಿರುಗಿಸದಂತೆ 2014ರ ಏಪ್ರಿಲ್ 17ರಂದು ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ಪಾಲಿಸುವಂತೆ ಕರ್ನಾಟಕಕ್ಕೆ ಸೂಚಿಸಿತ್ತು. ಈ ಆದೇಶ ಪಾಲಿಸುವುದಾಗಿ ರಾಜ್ಯ ಸರ್ಕಾರ ತಿಳಿಸಿತ್ತು.

ಕರ್ನಾಟಕಕ್ಕೆ 13.42 ಟಿಎಂಸಿ ಅಡಿ, ಗೋವಾಗೆ 24 ಟಿಎಂಸಿ ಅಡಿ ಹಾಗೂ ಮಹಾರಾಷ್ಟ್ರಕ್ಕೆ 1.30 ಟಿಎಂಸಿ ಅಡಿ ಮಹದಾಯಿ ನೀರು ಹಂಚಿಕೆ ಮಾಡಿ ನ್ಯಾಯಮಂಡಳಿ 2018ರ ಆಗಸ್ಟ್ 14ರಂದು ನೀಡಿರುವ ಐತೀರ್ಪನ್ನು ಆಧರಿಸಿ ಕೇಂದ್ರ ಸರ್ಕಾರವು 2020ರ ಫೆಬ್ರುವರಿ 27ರಂದು ಅಧಿಸೂಚನೆ ಹೊರಡಿಸಿದ್ದು, ರಾಜ್ಯ ಸರ್ಕಾರ ಯೋಜನೆಗಾಗಿ ಅನುದಾನ ಮೀಸಲಿರಿಸುವುದಾಗಿ ಪ್ರಕಟಿಸಿತ್ತು.

ಗೋವಾ- ಮಹಾರಾಷ್ಟ್ರ ಸರ್ಕಾರಗಳು ಐತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿವೆ.

ಬರ್ಕಾ ದತ್ ಟ್ವಿಟರ್ ನಿರ್ವಾಹಕರ ವಿರುದ್ಧ ಎಫ್‌ಐಆರ್

ಉನ್ನಾವೊ(ಉತ್ತರ ಪ್ರದೇಶ) (ಪಿಟಿಐ): ಕಳೆದ ವಾರ ಜಿಲ್ಲೆಯ ಗ್ರಾಮವೊಂದರ ಹೊಲದಲ್ಲಿ ಇಬ್ಬರು ಯುವತಿಯರು ಶವವಾಗಿ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಳ್ಳು ಸುದ್ದಿಗಳನ್ನು ಪ್ರಕಟಿಸಿದ ಆರೋಪದ ಮೇಲೆ ಟ್ವಿಟರ್ ಖಾತೆಗಳನ್ನು ನಿರ್ವಹಿಸುವ ಎಂಟು ಮಂದಿಯ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸುದ್ದಿ ಪೋರ್ಟಲ್ 'ಮೊಜೊ ಸ್ಟೋರಿ' ಸಂಪಾದಕಿ ಹಿರಿಯ ಪತ್ರಕರ್ತೆ ಬರ್ಕಾ ದತ್, ಜನ್‌ಜಾಗರಣ್ ಲೈವ್, ಅಝಾದ್ ಸಮಾಜ್ ಪಾರ್ಟಿ ವಕ್ತಾರ ಸೂರಜ್ ಕುಮಾರ್ ಬೌದ್ಧ್, ನೀಲಿಮ್ ದತ್, ವಿಜಯ್ ಅಂಬೇಡ್ಕರ್, ಅಭಯ್ ಕುಮಾರ್ ಆಜಾದ್, ರಾಹುಲ್ ದಿವಾಕರ್, ನವಾಬ್ ಸತ್ಪಾಲ್ ತನ್ವರ್ ಅವರ ವಿರುದ್ಧ ಭಾನುವಾರ ಉನ್ನಾವೊದಲ್ಲಿರುವ ಸದರ್ ಕೊಟ್ವಾಲಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪತ್ರಕರ್ತೆ ಬರ್ಕಾ ದತ್, 'ಇದು ನಾಚಿಕೆಗೇಡಿನ ಕ್ರಮ. ಕಿರುಕುಳ ನೀಡುವ ಮತ್ತು ಬೆದರಿಸುವ ಪ್ರಯತ್ನ' ಎಂದಿದ್ದಾರೆ.

'ಘಟನೆ ಬಗ್ಗೆ ಎಲ್ಲಾ ದೃಷ್ಟಿಕೋನಗಳಿಂದ ವರದಿ ಮಾಡಿದ್ದೇವೆ. ನಮ್ಮನ್ನು ಬೆದರಿಸುವುದಕ್ಕಾಗಿಯೇ ಜೈಲು ಶಿಕ್ಷೆಗೆ ಒಳಗಾಗುವಂತಹ ಐಪಿಸಿ ಸೆಕ್ಷನ್‌ಗಳನ್ನು ಹಾಕಲಾಗಿದೆ' ಎಂದು ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಹುಲ್ ವಿರುದ್ಧ ಮಾನನಷ್ಟ ಮೊಕದ್ದಮೆ: ಮೇ 15ರಂದು ವಿಚಾರಣೆ

ಠಾಣೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧದ ಮಾನನಷ್ಟ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯವು ಮೇ15ರಂದು ನಿಗದಿ ಮಾಡಿದೆ.

2014ರಲ್ಲಿ ಠಾಣೆಯ ಭಿವಂಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಮಹಾತ್ಮ ಗಾಂಧೀಜಿ ಅವರ ಹತ್ಯೆಯಲ್ಲಿ ಆರ್‌ಎಸ್‌ಎಸ್ ಕೈವಾಡವಿದೆ ಎಂದು ಆರೋಪಿಸಿದ್ದರು. ಈ ವಿಡಿಯೊದ ಆಧಾರದ ಮೇಲೆ ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಸ್ಥಳೀಯ ಕಾರ್ಯಕರ್ತ ರಾಜೇಶ್ ಕುಂಟೆ ಅವರು ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ವಿದೇಶಕ್ಕೆ ತೆರಳಲು ಕಾರ್ತಿ ಚಿದಂಬರಂಗೆ ಅನುಮತಿ

ನವದೆಹಲಿ: ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರಿಗೆ ವಿದೇಶಕ್ಕೆ ತೆರಳಲು ಸುಪ್ರೀಂಕೋರ್ಟ್ ಸೋಮವಾರ ಅನುಮತಿ ನೀಡಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಮೂರ್ತಿ ಅಶೋಕ್ ಭೂಷಣ್ ಅವರ ನೇತೃತ್ವದ ಪೀಠವು 'ಕಾರ್ತಿ ಚಿದಂಬರಂಗೆ ವಿದೇಶ ಪ್ರಯಾಣಕ್ಕೆ ಅನುಮತಿ ನೀಡಿದೆ. ಆದರೆ, ನ್ಯಾಯಾಲಯಕ್ಕೆ ಸ್ಥಳದ ಸಂಪೂರ್ಣ ಮಾಹಿತಿ ಸಲ್ಲಿಸಬೇಕು ಮತ್ತು ₹2 ಕೋಟಿ ಭದ್ರತಾ ಠೇವಣಿ ಇರಿಸಬೇಕು' ಎಂದು ಹೇಳಿದೆ.

ಚಹಾದಂಗಡಿ ತೆರೆದ ಭಗ್ನ ಪ್ರೇಮಿಗಳು!

ಪಟ್ನಾ(ಬಿಹಾರ): ಭಗ್ನ ಪ್ರೇಮಿಗಳಾದ ಇಬ್ಬರು ಗೆಳೆಯರು ಇಲ್ಲಿನ ಬೋರಿಂಗ್ ರಸ್ತೆಯಲ್ಲಿ ಚಹಾದಂಗಡಿ ತೆರೆದು ತಮ್ಮಂತೆಯೇ ಪ್ರಿಯತಮೆ ತೊರೆದುಹೋದವರಿಗೆ ವಿಶೇಷ ರಿಯಾಯಿತಿ ನೀಡುವ ಮೂಲಕ ಗಮನ ಸೆಳೆದಿದ್ದಾರೆ.

'ಬೆವಫಾ ಚಾಯ್ ವಾಲ' ಹೆಸರಿನಲ್ಲಿ ಚಹಾದಂಗಡಿ ತೆರೆದಿರುವ ಸಂದೀಪ್ ಮತ್ತು ಅಂಕಿತ್ ಎಂಬುವವರು ತಮ್ಮ ಚಹಾದಂಗಡಿಯಲ್ಲಿ ಸಾಮಾನ್ಯ ಗ್ರಾಹಕರಿಗೆ ₹15ಕ್ಕೆ ಹಾಗೂ ಭಗ್ನ ಪ್ರೇಮಿಗಳಿಗೆ ₹10ಕ್ಕೆ ಚಹಾ ನೀಡುತ್ತಿದ್ದಾರೆ. ಯುವಕ, ಯುವತಿಯರು, ಕಚೇರಿಗೆ ತೆರಳುವವರು ಮತ್ತು ಕಚೇರಿಯಿಂದ ಮನೆಗೆ ಮರಳುವವರು ಈ ಚಹಾದಂಗಡಿಯ ನಿತ್ಯ ಗ್ರಾಹಕರಾಗಿದ್ದಾರೆ.

ಕರ್ನಾಟಕ ಸರ್ಕಾರ
ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ
(ಇಡಿಸಿಎಸ್) ಸಿಆಸುಇ (ಇ-ಆಡಳಿತ ಇಲಾಖೆ)
ಸಂಖ್ಯೆ 13, ಸಿಆರ್‌ಎನ್ ಛೇಂಬರ್ಸ್, 2ನೇ ಮಹಡಿ, ಧನಲಕ್ಷ್ಮೀ ಬ್ಯಾಂಕ್ ಮೇಲೆ ಕಸ್ತೂರಬಾ ರಸ್ತೆ, ಬೆಂಗಳೂರು – 560001 ದೂ: 080–22230281/22230282
ನಂ. ಇಡಿಸಿಎಸ್/21/ಎಡಿಎಮ್/2020–ಬಿ1–ಇಡಿಸಿಎಸ್ ದಿನಾಂಕ : 22.02.2021
ಪ್ರಕಟಣೆ
ಬೆಂಗಳೂರುಒನ್, ಕರ್ನಾಟಕಒನ್, ಮೊಬೈಲ್‌ಒನ್ & ಜನಸೇವಕ ಯೋಜನೆಗಳಿಗೆ ಆಪರೇಷನ್ಸ್ ಪಾಲುದಾರರನ್ನು ಆಯ್ಕೆ ಮಾಡುವ ಬಗ್ಗೆ
ಇಡಿಸಿಎಸ್ ನಿರ್ದೇಶನಾಲಯವು, **"ಬೆಂಗಳೂರುಒನ್, ಕರ್ನಾಟಕಒನ್, ಮೊಬೈಲ್‌ಒನ್ & ಜನಸೇವಕ ಯೋಜನೆಗಳಿಗೆ ಆಪರೇಷನ್ಸ್ ಪಾಲುದಾರರನ್ನು ಆಯ್ಕೆ ಮಾಡಲು" ಟೆಂಡರ್‌ನ್ನು ಆಹ್ವಾನಿಸಿದೆ.** ಟೆಂಡರ್ ವಿವರಗಳು **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **22.03.2021ರ ಮಧ್ಯಾಹ್ನ 3.00 ಗಂಟೆಯವರೆಗೆ.**
ಸಹಿ/- ನಿರ್ದೇಶಕರು, ಇಡಿಸಿಎಸ್
DIPR/DDU/VC/2880/2020-21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ–4, ಘನತ್ಯಾಜ್ಯ ನಿರ್ವಹಣೆ–1, 2ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹ ರಾಜ ಚೌಕ, ಬೆಂಗಳೂರು–560 002.
ಸಂಖ್ಯೆ: ಕಾಪಾಅ–4/ಘತ್ಯಾನಿ/ಟೆಂಡರ್/09/2020–21 ದಿನಾಂಕ: 22.02.2021
ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು–4, ಘನ ತ್ಯಾಜ್ಯ ನಿರ್ವಹಣೆ ವಿಭಾಗ, ಇವರು ಆಯುಕ್ತರು, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರ ಪರವಾಗಿ ಅರ್ಹ ಬಿಡ್ಡುದಾರರಿಂದ ಈ ಕೆಳಕಂಡವುಗಳನ್ನು ಸರಬರಾಜು, ಅಳವಡಿಕೆ, ಕಾರ್ಯಾಚರಣೆ ಮತ್ತು ನಿರ್ಮಾಣ ಮಾಡಲು ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಬಿಡ್‌ಗಿಟ್ಟಿರುವ ಅಂದಾಜು ಮೊತ್ತ (₹ಲಕ್ಷಗಳಲ್ಲಿ)
1.	ಲಮ್‌ಸಮ್, ಟರ್ನ್ ಕೀ, ನಿಗದಿತ ದರ ಯಾವುದೇ ವ್ಯತ್ಯಾಸವಿಲ್ಲದ ಟೆಂಡರ್ ಆಧಾರದಲ್ಲಿ ಟೆಂಡರುದಾರರ ಸ್ವಂತ ವಿನ್ಯಾಸದೊಂದಿಗೆ 60 ತಿಂಗಳ ಅವಧಿಗೆ ಕಾರ್ಯಾ–ಚರಣೆ ನಿರ್ವಹಣೆ ಸೇರಿದಂತೆ ಆಯ್ದ ಪ್ರದೇಶಗಳಲ್ಲಿ 100ಕೆಎಲ್‌ಡಿ ಸಾಮರ್ಥ್ಯದ ಲಿಚೆಟ್ ಸಂಸ್ಕರಣಾ ಘಟಕ–ವನ್ನು ಸರಬರಾಜು, ಅಳವಡಿಕೆ, ಕಾರ್ಯಾಚರಣೆ ನಿರ್ಮಾಣ ಕಾಮಗಾರಿ ಮಾಡುವುದು.	ಕ್ಯಾಪೆಕ್ಸ್ ರೂ. 775.00 ಲಕ್ಷಗಳು ಮತ್ತು ಒಪೆಕ್ಸ್ ರೂ.530.00 ಲಕ್ಷಗಳು (ಪ್ರತಿ ವಾರ್ಷಿಕ)
2.	ಲಮ್‌ಸಮ್, ಟರ್ನ್ ಕೀ, ನಿಗದಿತ ದರ ಯಾವುದೇ ವ್ಯತ್ಯಾಸವಿಲ್ಲದ ಟೆಂಡರ್ ಆಧಾರದಲ್ಲಿ ಟೆಂಡರುದಾರರ ಸ್ವಂತ ವಿನ್ಯಾಸದೊಂದಿಗೆ 60 ತಿಂಗಳ ಅವಧಿಗೆ ಕಾರ್ಯಾಚರಣೆ ನಿರ್ವಹಣೆ ಸೇರಿದಂತೆ ಬೃ.ಬೆಂ.ಮ.ಪಾಲಿಕೆಯ ಚಿಕ್ಕನಾಗಮಂಗಲ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ 50ಕೆಎಲ್‌ಡಿ ಸಾಮರ್ಥ್ಯದ ಲಿಚೆಟ್ ಸಂಸ್ಕರಣಾ ಘಟಕವನ್ನು ಸರಬರಾಜು, ಅಳವಡಿಕೆ, ಕಾರ್ಯಾಚರಣೆ ನಿರ್ಮಾಣ ಕಾಮಗಾರಿ ಮಾಡುವುದು.	ಕ್ಯಾಪೆಕ್ಸ್ ರೂ. 565.00 ಲಕ್ಷಗಳು ಮತ್ತು ಒಪೆಕ್ಸ್ ರೂ.265.00 ಲಕ್ಷಗಳು (ಪ್ರತಿ ವಾರ್ಷಿಕ)
ಇಎಂಡಿ (₹. ಗಳಲ್ಲಿ)	ಆದೇಶ ಸಂಖ್ಯೆ: ಎಫ್‌ಡಿ/675, ವೆಚ್ಚ–12/2020, ದಿನಾಂಕ: 22–12–2020 ರಂತೆ ಇಎಂಡಿಗೆ ವಿನಾಯಿತಿ ನೀಡಲಾಗಿದೆ.	

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **25.02.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **12.03.2021**ರ ಸಂಜೆ **4:00** ಗಂಟೆಯವರೆಗೆ. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **01.03.2021**ರ ಮಧ್ಯಾಹ್ನ **3:00** ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **01.03.2021**ರ ಸಂಜೆ **4:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಘನ ತ್ಯಾಜ್ಯ ನಿರ್ವಹಣೆ, ಅನೆಕ್ಸ್–2 ಕಟ್ಟಡ, ಕೊಠಡಿ ಸಂ.301, 3ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹ ರಾಜ ಚೌಕ, ಬೆಂಗಳೂರು–02 ಇಲ್ಲಿ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **15.03.2021**ರಂದು ಸಂಜೆ **4:00** ಗಂಟೆಯ ನಂತರ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ಡುದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು–4, ಘ.ತ್ಯಾ.ನಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ
ಕಛೇರಿ ದೂರವಾಣಿ: 08539–221895 ಫ್ಯಾಕ್ಸ್ ನಂ.: 08539–221235
e-mail : itstaff_dudc_koppal@yahoo.com
ಕಂ.ಸಂ.59750/ಕೆಪಿಡಿಯುಡಿಸಿ–11021/01/2021 ದಿನಾಂಕ : 18.02.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)
ಜಿಲ್ಲಾಧಿಕಾರಿಗಳು, ಕೊಪ್ಪಳರವರು ಘನತ್ಯಾಜ್ಯ ವಸ್ತು ವಿಲೇವಾರಿ ಘಟಕಕ್ಕೆ ಸಂಬಂಧಪಟ್ಟಂತೆ ವಿಸ್ತೃತಾ ಯೋಜನಾ ವರದಿಯನ್ನು ತಯಾರಿಸಲು ಕೆ.ಸಿ.–8 ನಿಯಮಾವಳಿಯಂತೆ ನೋಂದಾಯಿತ ಅರ್ಹ ಸಮಾಲೋಚಕರಿಗೆ ಇ–ಪೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಇಚ್ಛೆಯುಳ್ಳ ಸಮಾಲೋಚಕರು ತಮ್ಮ ಟೆಂಡರ್‌ಗಳನ್ನು ಇ–ಪೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

ಕ್ರ. ಸಂ.	ಇಂಡೆಂಟ್ ನಂಬರ್	ಯೋಜನೆಯ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಯೋಜನಾವರದಿ ತಯಾರಿಸುವ ಅವಧಿ
1	KPL/DC/DUDC/ULB/SWM DPR/2020-21	ಘನತ್ಯಾಜ್ಯ ವಸ್ತು ವಿಲೇವಾರಿ ಘಟಕಕ್ಕೆ ಸಂಬಂಧಪಟ್ಟಂತೆ (05) ಮೇಲ್ದರ್ಜೆಗೇರಿಸಿದ ನಗರ ಸ್ಥಳೀಯ ಸಂಸ್ಥೆಗಳಾದ ಕಾರಟಗಿ ಪುರಸಭೆ, ಕನಕಗಿರಿ, ತಾವರಗೇರಾ, ಕುಕನೂರು ಮತ್ತು ಭಾಗ್ಯನಗರ ಪಟ್ಟಣ ಪಂಚಾಯತಿಗಳಲ್ಲಿ ವಿಸ್ತೃತಾ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸುವುದು.	13.39	33000.00	45 ದಿನಗಳು

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **02–03–2021 ಸಂಜೆ 5.30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04–03–2021 ಸಂಜೆ 5.00 ಗಂಟೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **06–03–2021 ಸಂಜೆ 5.00 ಗಂಟೆ.**
ಸಹಿ/– ಜಿಲ್ಲಾಧಿಕಾರಿಗಳು, ಕೊಪ್ಪಳ
ವಾಸಾಸಂಇ/ಕೊಪ್ಪಳ/407/ಅಲಕನಂದ/2020-21

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಇಂಜಿನೀಯರ್, ಕೃಭಾಜನಿನಿ ಆಣೆಕಟ್ಟು ವಿಭಾಗ, ನಾರಾಯಣಪೂರ – 585219, ತಾ॥ ಹುಣಸಗಿ, ಜಿ॥ ಯಾದಗಿರಿ.
ಸಂ:ಕೃಭಾಜನಿನಿ/ಕಾನಿಇಂ/ಆ.ವಿ.ನಾ./ಪಿಬಿ/2020–21/1870 ದಿನಾಂಕ: 18–02–2021.
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ / ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಅಡಿ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ)	ಇಎಂಡಿ ಮೊತ್ತ (ರೂ. ಕೋಟಿಗಳಲ್ಲಿ)
1)	Survey, Investigation, Preparation of Designs, Drawings, Construction of Head Works including Intake Canal, Jackwell Cum Pump House, Pumping Machineries, Electrical Sub-Station, Transmission Line, Terminal Bay, Rising Main, Delivery Chamber etc. and Construction of Pipe Distribution Network including Structures and SCADA Compatible Sluice Valves, Butterfly valves, Flow Maters, Discharge Control Meters and Air Valves, Scour Valves, Providing intermediate sump cum pump house including required capacity pumps, motor with power supply arrangements wherever necessary etc. for irrigable Command Area of 17,805 Ha in Shorapur Taluk of Yadgir District including Supply of Spares, Accessories and Tools under Budihal-Peerapur LIS Extension including Operation and Maintenance of the Entire System for Five years from the date of Successful Commissioning of the entire system on Turnkey Basis (Indent No. 20362)	620.33	0.00

ಸದರಿ ಕಾಮಗಾರಿಗೆ **Two Cover System** ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು **Qualification Criteria** ನಲ್ಲಿ ನಮೂದಿಸುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಈ ಕಚೇರಿ ಟೆಂಡರು ಪ್ರಕಟಣೆ ಸಂ: 1863 ದಿನಾಂಕ: 18–02–2021 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ–ಪೋರ್ಟಲ್ ಮುಖಾಂತರ **http://eproc.karnataka.gov.in/eportal/ines./seam** ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ವಿವರ		ಟೆಂಡರ್ ಪ್ರಕ್ರಿಯೆಯ ದಿನಾಂಕ
1)	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	22–02–2021 ರಿಂದ 22–03–2021 ಸಂಜೆ 5:00 ಗಂಟೆಯವರೆಗೆ
2)	ಟೆಂಡರ್ ಪೂರ್ವಬಾವಿ ಸಭೆಯ ದಿನಾಂಕ (ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಪಿಡಬ್ಲ್ಯೂಡಿ ಕಚೇರಿ ಆವರಣ, 3ನೇ ಮಹಡಿ ಕೆ.ಆರ್. ವೃತ್ತ, ಬೆಂಗಳೂರು ಇವರ ಕಚೇರಿಯಲ್ಲಿ	:	05–03–2021 ಮುಂಜಾನೆ 11:00 ಗಂಟೆಗೆ
3)	ಟೆಂಡರಿಗೆ ಸಂಬಂಧಪಟ್ಟಂತೆ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	:	03–03–2021 ಸಂಜೆ 5:00 ಗಂಟೆಯವರೆಗೆ
4)	ಟೆಂಡರನ್ನು ಸಲ್ಲಿಸಲು ಕಡೆಯ ದಿನಾಂಕ	:	22–03–2021 ಸಂಜೆ 5:00 ಗಂಟೆಯ ವರೆಗೆ
5)	ಟೆಂಡರಿನ ಕವರ್–1 ತೆರೆಯುವ ದಿನಾಂಕ	:	25–03–2021 ಮುಂಜಾನೆ 11:00 ಗಂಟೆಗೆ
6)	ಟೆಂಡರಿನ ಕವರ್–2 ತೆರೆಯುವ ದಿನಾಂಕ	:	ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ **http://eproc.karnataka.gov.in/eportal/ines./seam** ನಲ್ಲಿ ವೀಕ್ಷಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– (**ಎಸ್.ಹೆಚ್. ನಾಯ್ಕೋಡಿ**) ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪುರ.

ಕರ್ನಾಟಕ ಲೋಕ ಸೇವಾ ಆಯೋಗ
''ಉದ್ಯೋಗ ಸೌಧ'' ಬೆಂಗಳೂರು – 560 001
ಸಂಖ್ಯೆ : ಪಿಎಸ್‌ಸಿ ಇ(2)4099/2020–21 ದಿನಾಂಕ: 20.02.2021
ಪತ್ರಿಕಾ ಪ್ರಕಟಣೆ
ಆಯೋಗವು 2019ನೇ ಸಾಲಿನ ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮತ್ತು ಕರ್ನಾಟಕ ಭವನ ದೆಹಲಿಯ ಉಳಿಕೆ ಮೂಲ ವೃಂದದ ಮತ್ತು ಹೈದ್ರಾಬಾದ್ ಕರ್ನಾಟಕ ವೃಂದದ ಸಹಾಯಕ/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, **ದಿನಾಂಕ: 24.01.2021(ಭಾನುವಾರ)ರ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಜಾರಿಗೊಳಿಸಲಾಗಿದ್ದ ಪ್ರವೇಶಪತ್ರವನ್ನು ರದ್ದುಪಡಿಸಿದೆ** ಎಂದು ಈ ಮೂಲಕ ತಿಳಿಸಿದೆ.
ಪ್ರಸ್ತುತ, ಸದರಿ ಪರೀಕ್ಷೆಯ ಅಭ್ಯರ್ಥಿಗಳಿಗೆ ಮರು ನಿಗದಿಯಾದ ದಿನಾಂಕ: **28.02.2021**ರ ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶಪತ್ರಗಳನ್ನು ಬಿಡುಗಡೆಗೊಳಿಸಿದ್ದು, ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ **http://kpsc.kar.nic.in** ನಲ್ಲಿ **''ಸಹಾಯಕರು/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ದಿನಾಂಕ: 28.02.2021(ಭಾನುವಾರ)ಕ್ಕೆ ಪರಿಷ್ಕೃತ ಪ್ರವೇಶಪತ್ರಗಳು''** ಎಂಬ ಶೀರ್ಷಿಕೆಯಡಿಯಲ್ಲಿ User Name & password ಅನ್ನು ಉಪಯೋಗಿಸಿಕೊಂಡು ಪರಿಷ್ಕೃತ ಪ್ರವೇಶ ಪತ್ರವನ್ನು Download ಮಾಡಿಕೊಳ್ಳಲು ದಿನಾಂಕ: **21.02.2021**ರಿಂದ ಅವಕಾಶ ಕಲ್ಪಿಸಲಾಗಿದೆ.
ಯಾವುದೇ ಕಾರಣಕ್ಕೂ ದಿನಾಂಕ: 24.01.2021ರ ಪ್ರವೇಶಪತ್ರವನ್ನು ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಪರಿಗಣಿಸಲಾಗುವುದಿಲ್ಲ. ಒಂದುವೇಳೆ ಅಭ್ಯರ್ಥಿಗಳು ಪರಿಷ್ಕೃತ ಪ್ರವೇಶಪತ್ರವನ್ನು ಹಾಜರುಪಡಿಸದಿದ್ದಲ್ಲಿ ಅಥವಾ ದಿನಾಂಕ: **24.01.2021**ರ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಪತ್ರವನ್ನು ಹಾಜರುಪಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ದಿನಾಂಕ: **28.02.2021**ರ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ಆದ್ದರಿಂದ, **ಅಭ್ಯರ್ಥಿಗಳು ಕಡ್ಡಾಯವಾಗಿ ದಿನಾಂಕ: 28.02.2021ರ ಸ್ಪರ್ಧಾತ್ಮಕ ಪರೀಕ್ಷೆಗೆ ಜಾರಿಗೊಳಿಸಲಾದ ಪರಿಷ್ಕೃತ ಪ್ರವೇಶ ಪತ್ರಗಳೊಂದಿಗೆ ಮಾತ್ರ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು.** ಪ್ರವೇಶಪತ್ರ Download ಮಾಡಿಕೊಳ್ಳಲು ತಾಂತ್ರಿಕ ಸಮಸ್ಯೆ / ತೊಂದರೆ ಎದುರಾದಲ್ಲಿ ಸಹಾಯವಾಣಿ ಸಂಖ್ಯೆ : 18005728707 (Tollfree) ಸಂಪರ್ಕಿಸುವಂತೆ ಸೂಚಿಸಿದೆ. ಉಳಿದಂತೆ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್‌ನಲ್ಲಿ ಭಿತ್ತರಿಸಿರುವ ದಿನಾಂಕ: **20.02.2021**ರ ಪ್ರಕಟಣೆಯನ್ನು ಅವಲೋಕಿಸಬಹುದೆಂದು ಈ ಮೂಲಕ ಸೂಚಿಸಿದೆ.
ಸಹಿ/–
(**ಜಿ. ಸತ್ಯವತಿ**)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಚೇರಿ, ಯಾಂತ್ರಿಕ (ಉ) ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027.
ದೂ. ಸಂ.: 080–22221321 ಎಕ್ಸ್‌ಟೆನ್ಷನ್: 295
ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನಾ ಪತ್ರ
ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ
ಫೇಮ್ ಇಂಡಿಯಾ ಯೋಜನೆಯ ಫೇಸ್–II ಅಡಿಯ ಬೇಡಿಕೆಯ ಪ್ರೋತ್ಸಾಹ ಧನಸಹಿತವಾಗಿ ಹಾಗೂ ಬೇಡಿಕೆಯ ಪ್ರೋತ್ಸಾಹ ಧನರಹಿತವಾಗಿ ಒಟ್ಟು ವೆಚ್ಚದ ಒಪ್ಪಂದದ (ಜಿ.ಸಿ.ಸಿ) ಮಾದರಿಯಲ್ಲಿ ಆಪರೇಟರ್ ಸ್ವಾಮ್ಯದ ಪೂರ್ಣನಿರ್ಮಿತ ಸಂಪೂರ್ಣ ವಿದ್ಯುತ್ ಚಾಲಿತ ವಾಹನಗಳ ಪೂರೈಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು, ವಾ.ಕ.ರ.ಸಾ. ಸಂಸ್ಥೆಯ ಬಿ.ಆರ್.ಟಿ.ಎಸ್. ಹುಬ್ಬಳ್ಳಿ – ಧಾರವಾಡ ನಗರ ಮಾರ್ಗಗಳಲ್ಲಿ ಮತ್ತು ಬಿಆರ್‌ಟಿ ಫೀಡರ್ ಮಾರ್ಗಗಳಲ್ಲಿ ಕಾರ್ಯಾಚರಣೆಗೊಳಿಸಲು ಆಸಕ್ತ ಹಾಗೂ ಅರ್ಹ ಬಿಡ್‌ದಾರರಿಂದ / ಒಕ್ಕೂಟದಿಂದ ಈ ಕೆಳಕಂಡಂತೆ ಕ.ರಾ.ರ.ಸಾ. ನಿಗಮದ ವತಿಯಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ ಹಾಗೂ ದಿನಾಂಕ	ಕ್ರ. ಸಂ.	ವಿವರಗಳು	ಟೆಂಡರ್ ಪರಿಮಾಣ ಸಂಖ್ಯೆಗಳಲ್ಲಿ
ಟಿ–125 ದಿ:23.02.2021	01	Selection of operator / service provider for supply, operation and maintenance of **12 Mtr AC 900 mm** floor height electric buses suitable for Hubbali - Dharawad BRTS operation for **NWKRTC.**	25
	02	Selection of operator / service provider for supply, operation and maintenance of **9 Mtr Non AC 900 mm** floor height electric buses for City operation and also suitable for BRT Feeder Service for **NWKRTC.**	25
		ಒಟ್ಟು	50

ಟೆಂಡರ್ ವೇಳಾಪಟ್ಟಿ: (1) ಪ್ರಿ–ಬಿಡ್ ಸಭೆ ದಿನಾಂಕ: **01.03.2021**ರಂದು **11:30** ಗಂಟೆಗೆ. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09.03.2021**ರಂದು **17:30** ಗಂಟೆಯ ವರೆಗೆ. (3) ಪ್ರಿ–ಕ್ವಾಲಿಫಿಕೇಷನ್ ಬಿಡ್ ತೆರೆಯುವ ದಿನಾಂಕ: **12.03.2021**ರಂದು **11:30** ಗಂಟೆಗೆ. (4) ಕಮರ್ಷಿಯಲ್ ಬಿಡ್ ತೆರೆಯುವ ದಿನಾಂಕ: **18.03.2021**ರಂದು **11:30** ಗಂಟೆಗೆ.
ಮುಂದುವರೆದಂತೆ, ಟೆಂಡರ್ ವೇಳಾಪಟ್ಟಿ, ಸ್ಪೆಸಿಫಿಕೇಷನ್, ಕಾರ್ಯವ್ಯಾಪ್ತಿ, ಇತರೆ ಷರತ್ತು ಹಾಗೂ ನಿಬಂಧನೆಗಳ ಸೇರ್ಪಡೆ / ತಿದ್ದುಪಡಿ ಮಾಹಿತಿಯನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು / ಪ್ರಚಾರ ಪಡಿಸಲಾಗುವುದು.
ಆಸಕ್ತಿಯುಳ್ಳ ಬಿಡ್‌ದಾರರು ವೆಬ್‌ಸೈಟ್ **https://eproc.karnataka.gov.in**ಗೆ ಲಾಗ್‌ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳ ಅವಶ್ಯಕತೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಕೇಂದ್ರ ದೂ.: **080–22230960** ಮತ್ತು **080–22234115**ನ್ನು ಅಥವಾ ಇ–ಮೇಲ್ **eprocurementhelpdesk@gmail.com** ನ್ನು ಸಂಪರ್ಕಿಸಬಹುದು.
ಮುಖ್ಯ ಯಾಂತ್ರಿಕ ಅಭಿಯಂತರರು (ಉ)
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)
ವಾಸಾಸಂಇ/ಉನಿನ/ಎಲ್‌ಸಿ/2857/2020–21
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



❦ ಸುಭಾಷಿತ ❦
ನಮ್ಮನ್ನು ನಾವು ವಿಶ್ವಪ್ರಜೆಗಳೆಂದು ಘೋಷಿಸಿಕೊಂಡರೆ ಅದನ್ನು ಯಾರೂ ಆಕ್ಷೇಪಿಸಲಾರರು. ಅದೇನು ಕಡಿಮೆ ಮಹತ್ವವುಳ್ಳ ಸಂಗತಿಯೇ?
–ಶರತ್‌ಚಂದ್ರ ಚಟ್ಟೋಪಾಧ್ಯಾಯ

ಅಪಘಾತ ಪ್ರಕರಣ: ಸರ್ಕಾರದ ಕಣ್ತೆರೆಸುವ ಕಟುವಾಸ್ತವ ವರದಿ

ಭಾರತದಲ್ಲಿ ಸಂಭವಿಸುವ ರಸ್ತೆ ಅಪಘಾತಗಳಿಗೆ ಸಂಬಂಧಿಸಿದಂತೆ ವಿಶ್ವಬ್ಯಾಂಕ್ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿ ಹತ್ತು ಹಲವು ಹೊಸ ಆಯಾಮಗಳ ಮೇಲೆ ಬೆಳಕು ಚೆಲ್ಲಿದೆ. ಅಪಘಾತ ಪ್ರಕರಣಗಳು ಬೀರುತ್ತಿರುವ ಸಾಮಾಜಿಕ ಪರಿಣಾಮಗಳ ತೀವ್ರತೆಯನ್ನು ಗ್ರಹಿಸುವಲ್ಲಿ ಸರ್ಕಾರಗಳು ವಿಫಲವಾಗಿರುವುದನ್ನೂ ಆ ವರದಿ ಎತ್ತಿತೋರಿದೆ. ರಸ್ತೆ ಅಪಘಾತಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳು ಎಂತಹ ಕಲ್ಲು ಹೃದಯವನ್ನೂ ಕರಗಿಸುವಷ್ಟು ಭಯಾನಕ. ಉದಾಹರಣೆಗೆ ಹೇಳುವುದಾದರೆ, ದೇಶದಲ್ಲಿ ಪ್ರತೀ ಗಂಟೆಗೆ 53 ಅಪಘಾತ ಪ್ರಕರಣಗಳು ವರದಿಯಾಗುತ್ತಿವೆ. ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದ ಅಪಘಾತಗಳು ಸಂಭವಿಸುತ್ತಿರುವ ದೇಶಗಳ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. 2019ರಲ್ಲಿ ನಮ್ಮ ದೇಶದಲ್ಲಿ ಸಂಭವಿಸಿದ ಅಪಘಾತಗಳು 1.5 ಲಕ್ಷ ಸಾವುಗಳಿಗೆ ಕಾರಣವಾಗಿವೆ. ಜಗತ್ತಿನಲ್ಲಿರುವ ಒಟ್ಟು ವಾಹನಗಳಿಗೆ ಹೋಲಿಸಿದರೆ ಭಾರತದಲ್ಲಿರುವ ವಾಹನಗಳ ಪ್ರಮಾಣ ಶೇಕಡ 1ರಷ್ಟು ಮಾತ್ರ. ಆದರೆ, ಜಾಗತಿಕ ರಸ್ತೆ ಅಪಘಾತಗಳ ಪ್ರಮಾಣದಲ್ಲಿ ಶೇ 6ರಷ್ಟು ಹಾಗೂ ಅದರಿಂದ ಸಂಭವಿಸುವ ಸಾವಿನ ಸಂಖ್ಯೆಯಲ್ಲಿ ಶೇ 11ರಷ್ಟು ಭಾರತದಲ್ಲೇ ಸಂಭವಿಸು-ತ್ತಿರುವುದು ಬಹುದೊಡ್ಡ ದುರಂತ. ಕಳೆದ ಕೆಲವು ವರ್ಷಗಳಲ್ಲಿ, ರಸ್ತೆಗೆ ಇಳಿಯುತ್ತಿರುವ ವಾಹನಗಳ ಪ್ರಮಾಣ ವಿಪರೀತ ಎನಿಸುವಷ್ಟು ಹೆಚ್ಚಾಗಿದೆ. ಅರ್ಥ ಚಟುವಟಿಕೆಗಳಿಗೆ ಉತ್ತೇಜನ ನೀಡಲು ರಸ್ತೆ ಜಾಲವನ್ನೂ ಹೆಚ್ಚಿಸಲಾಗಿದೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ದಿಸೆಯಲ್ಲಿ ರಸ್ತೆ ಜಾಲವನ್ನು ವಿಸ್ತರಿಸುವುದು ಅಗತ್ಯ ಕೂಡ. ಆದರೆ, ರಸ್ತೆಜಾಲ ಹೆಚ್ಚಿದಂತೆ, ವಾಹನಗಳ ಓಡಾಟ ಹೆಚ್ಚಿದಂತೆ ಅಪಘಾತ ಪ್ರಕರಣಗಳು ಕೂಡ ಹೆಚ್ಚುತ್ತಿರುವುದು ವಿಷಾದಕರ.

ಅಪಘಾತಗಳಲ್ಲಿ ನೊಂದ ಕುಟುಂಬಗಳಿಗೆ ನೆರವಾಗುವುದರ ಜೊತೆಗೆ ರಸ್ತೆಗಳ ಸುಧಾರಣೆ, ಚಾಲಕರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳಿಗೂ ಆದ್ಯತೆ ಸಿಗಬೇಕು

ವಿಶ್ವಬ್ಯಾಂಕ್ ವರದಿಯಲ್ಲಿ ಮಾನವೀಯ ಅಂತಃಕರಣವನ್ನೇ ಕಲಕುವಂತಹ ಹಲವು ವಿವರಗಳಿವೆ. ಅಪಘಾತಗಳಿಂದ ಹೆಚ್ಚಿನ ಹೊಡೆತ ತಿಂದು ತತ್ತರಿಸಿದ್ದು ಕಡಿಮೆ ಆದಾಯದ ಬಡಕುಟುಂಬಗಳು. ಬಹುತೇಕ ಎಲ್ಲ ದುರಂತಗಳಲ್ಲಿ ಮೊದಲು ಬಲಿಪಶುವಾಗುವುದು ಬಡವರೇ ಅಲ್ಲವೆ? ಹೆಚ್ಚಿನ ಆದಾಯದ ಕುಟುಂಬಗಳಿಗಿಂತ ನಾಲ್ಕು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಕಡಿಮೆ ಆದಾಯದ ಕುಟುಂಬಗಳು ಜೀವಗಳನ್ನು ಕಳೆದುಕೊಂಡಿವೆ. ಅಪಘಾತಗಳ ಬಳಿಕ ಬಾಧಿತ ಶ್ರೀಮಂತ ಕುಟುಂಬಗಳ ಶೇ 54ರಷ್ಟು ಆದಾಯಕ್ಕೆ ಹೊಡೆತ ಬಿದ್ದರೆ, ಬಡಕುಟುಂಬಗಳು ಶೇ 75ರಷ್ಟು ಆದಾಯದ ಕೊರತೆ ಅನುಭವಿಸಿವೆ. ಅಂಗವೈಕಲ್ಯಕ್ಕೆ ತುತ್ತಾಗುವವರ ಪ್ರಮಾಣದಲ್ಲೂ ಬಡವರ ಸಂಖ್ಯೆಯೇ ಹೆಚ್ಚಾಗಿದೆ. ವೈದ್ಯಕೀಯ ವೆಚ್ಚ ಭರಿಸಲಾಗದೆ ಸೂಕ್ತ ಚಿಕಿತ್ಸೆ ದೊರಕದಿರುವುದೂ ಇದಕ್ಕೆ ಕಾರಣವಾಗಿದೆ. ಬಾಧಿತ ಕುಟುಂಬದ ನಿರ್ವಹಣೆಯ ಹೆಚ್ಚುವರಿ ಹೊಣೆಯು ಬಹುತೇಕ ಮಹಿಳೆಯರ ಮೇಲೆಯೇ ಬಿದ್ದಿರುವುದು ಸುಸ್ಪಷ್ಟ. ಪ್ರಾಣಹಾನಿಗೆ ಕಾರಣವಾಗುತ್ತಿರುವ ಅಪಘಾತಗಳು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಊಹಿಸಲು ಸಾಧ್ಯವಾಗದಷ್ಟು ಪ್ರತಿಕೂಲ ಪರಿಣಾಮವನ್ನೂ ಬೀರುತ್ತವೆ. ಬಾಧಿತ ಕುಟುಂಬಗಳು, ಅದರಲ್ಲೂ ಬಡಕುಟುಂಬಗಳು ಇಂತಹ ಸನ್ನಿವೇಶಗಳಿಂದ ನಲುಗಿ ಹೋಗುತ್ತಿವೆ. ರಸ್ತೆ ಅಪಘಾತಗಳಿಗೆ ಕಾರಣಗಳು ಅನೇಕ. ನಮ್ಮ ದೇಶದಲ್ಲಿ ಸಂಪೂರ್ಣವಾಗಿ ಸುಸ್ಥಿತಿಯಲ್ಲಿರುವ ರಸ್ತೆಗಳು ಸಿಗುವುದೇ ಅಪರೂಪ. ಗುಂಡಿಬಿದ್ದ ರಸ್ತೆ, ಹದಗೆಟ್ಟ ವಾಹನ, ಅಜಾಗರೂಕತೆಯ ಚಾಲನೆ, ನಿಯಮಗಳ ಉಲ್ಲಂಘನೆ... ಹೀಗೆ ಅಪಘಾತಗಳು ಯಾವುದರಿಂದಲೂ ಸಂಭವಿಸಬಹುದು. ಅಪಘಾತ ಪ್ರಕರಣಗಳನ್ನು ತಹಬಂದಿಗೆ ತರಲು ಸಂಚಾರ ನಿಯಮ ಉಲ್ಲಂಘನೆಗೆ ಭಾರಿ ಪ್ರಮಾಣದ ದಂಡ ವಿಧಿಸುವ ಕಾಯ್ದೆಯನ್ನು ರೂಪಿಸಿ, ಕೈಕಟ್ಟಿ ಕುಳಿತರೆ ಸಾಲದು. ರಸ್ತೆಗಳು ಸದಾ ಸುಸ್ಥಿತಿಯಲ್ಲಿ ಇರುವಂತೆಯೂ ನೋಡಿಕೊಳ್ಳಬೇಕು. ಚಾಲಕರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದರೊಟ್ಟಿಗೆ ಅಪಘಾತಗಳಿಂದ ಬಾಧಿತವಾದ ಕುಟುಂಬಗಳ ನೆರವಿಗೆ ಧಾವಿಸುವುದು ಕೂಡ ಅಷ್ಟೇ ಮುಖ್ಯ. ಇಂತಹ ಕುಟುಂಬಗಳು ಸಾಲದ ಸುಳಿಗೆ ಸಿಲುಕಿ, ಮಾನಸಿಕ ಸಮಸ್ಯೆಯಿಂದ ನರಳುವುದೇ ಹೆಚ್ಚು. ಅಪಘಾತಗಳಿಂದ ನೊಂದ ಕುಟುಂಬಗಳ, ಅದರಲ್ಲೂ ಬಡಕುಟುಂಬಗಳ ಕಣ್ಣೀರು ಒರೆಸುವುದು ಸರ್ಕಾರದ ಆದ್ಯತೆ ಆಗಬೇಕು. ಆ ದಿಸೆಯಲ್ಲಿ ಸಾಧ್ಯಾಸಾಧ್ಯತೆಗಳ ಕುರಿತು ಚಿಂತಿಸಿ, ಕಾರ್ಯಪ್ರವೃತ್ತರಾಗಬೇಕು.

ದಿನದ ಟ್ವೀಟ್

ಇದು ರಾಜಕಾರಣ ಅಲ್ಲ

ಜನರ ಖರೀದಿ/ ಮಾರಾಟದ ಮೂಲಕ ರಾಜಕಾರಣ ಮಾಡುವ ಸ್ಥಿತಿ ಯಾವ ಕ್ಷಣದಲ್ಲಿ ನಿರ್ಮಾಣವಾಗುತ್ತದೋ ಅಲ್ಲಿಂದಾಚೆಗೆ ಅದು ರಾಜಕಾರಣ ಎನಿಸಿಕೊಳ್ಳುವುದಿಲ್ಲ. ಅದು ಕೇವಲ ದಂಧೆ ಆಗುತ್ತದೆ. ಅಂತಹ ಸ್ಥಿತಿ ಅಧಿಕೃತಗೊಂಡಂತಿರುವ ದೇಶದಲ್ಲಿ ನಾವು ನೆಲೆಸಿದ್ದೇವೆ.

ಸೈಯದ್ ಉಸ್ಮಾನ್, ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 23-2-1996

• **ತಾರತಮ್ಯ ನಿಲ್ಲಿಸಿ: ಸಿಬಿಐಗೆ ನ್ಯಾಯಾಧೀಶರ ಎಚ್ಚರಿಕೆ**

ನವದೆಹಲಿ, ಫೆ. 22 (ಯುಎನ್ಐ)– ಹವಾಲ ಪ್ರಕರಣದ ತನಿಖೆಯ ಪ್ರಗತಿ ಪರಿಶೀಲನೆ ನಡೆಸಿರುವ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ವಿ.ಬಿ.ಗುಪ್ತಾ ಅವರು ಇಂದು ಸಿಬಿಐ ಅಧಿಕಾರಿಗಳಿಗೆ, ‘ಕ್ರಮ ಕೈಗೊಳ್ಳುವುದರಲ್ಲಿ ದ್ವಿಮುಖ ನೀತಿ ಅನುಸರಿಸಬೇಡಿ’ ಎಂದು ಎಚ್ಚರಿಕೆ ನೀಡಿದ್ದಾರೆ.

‘ಹವಾಲ ಹಣ ನೀಡಿದ ಆರೋಪಿ ಜೈನ್‌ನನ್ನು ಬಂಧಿಸಲಾಗಿದೆ. ಆದರೆ ಹಣ ಪಡೆದ ಆರೋಪಿ, ನೈವೇಲಿ ಲಿಗ್ನೈಟ್ ನಿಗಮದ ಚೇರ್‌ಮನ್ ಎಂ.ಪಿ.ನಾರಾಯಣನ್‌ರನ್ನು ಯಾಕೆ ಬಂಧಿಸಿಲ್ಲ?’ ಎಂದು ಸಿಬಿಐ ಅಧಿಕಾರಿಗಳನ್ನು ಪ್ರಶ್ನಿಸಿದ ನ್ಯಾಯಾಧೀಶರು, ‘ಸಿಬಿಐ ತಾರತಮ್ಯ ನಡೆಸುತ್ತಿರುವುದು ಇದೇ ಮೊದಲಲ್ಲ’ ಎಂದೂ ಗುಡುಗಿದರು.

‘ಕಾನೂನು ಎಲ್ಲರಿಗೂ ಒಂದೇ ರೀತಿ ಅನ್ವಯವಾಗಬೇಕು. ಕೆಲವು ಆರೋಪಿಗಳಿಗೆ ಪಕ್ಷಪಾತ ತೋರಿಸುವ ಮೂಲಕ ಕಾನೂನಿಗಿಂತ ಸಿಬಿಐ ದೊಡ್ಡದು ಎಂದು ಬಿಂಬಿಸಲಾಗದು’ ಎಂದು ನಾರಾಯಣನ್ ಸಲ್ಲಿಸಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ನ್ಯಾಯಾಧೀಶರು ಹೇಳಿದರು.

• **ಹವಾಲ: ಷರೀಫ್ ಸೇರಿ 14 ಜನರ ವಿರುದ್ಧ ಸಿಬಿಐ ಆರೋಪ**

ನವದೆಹಲಿ, ಫೆ. 22 (ಪಿಟಿಐ, ಯುಎನ್ಐ)– ಹವಾಲ ಹಗರಣದಲ್ಲಿ ಕಳಂಕಿತರಾಗಿರುವ ಬೂಟಾ ಸಿಂಗ್, ಆರ್.ಕೆ.ಧವನ್, ಕಮಲನಾಥ್, ಅರವಿಂದ ನೇತಂ, ಜಾಫರ್ ಷರೀಫ್, ಎನ್.ಡಿ. ತಿವಾರಿ, ಶರದ್ ಯಾದವ್ ಸೇರಿ 14 ಮಂದಿ ಉನ್ನತ ರಾಜಕಾರಣಿಗಳ ವಿರುದ್ಧ ಸಿಬಿಐ ಇಂದು ಮತ್ತೆ ಆರೋಪಪಟ್ಟಿ ಸಲ್ಲಿಸಿದೆ. ದೆಹಲಿ ಮುಖ್ಯಮಂತ್ರಿ ಮದನ್ ಲಾಲ್ ಖುರಾನಾ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ಕೋರಿದ ಬೆನ್ನಲ್ಲೇ ಅವರು ರಾಜೀನಾಮೆ ಸಲ್ಲಿಸಿದರು.

65 ಕೋಟಿ ರೂ. ಹವಾಲ ಹಗರಣದಲ್ಲಿ ಇದುವರೆಗೆ 62 ರಾಜಕಾರಣಿಗಳ ಸಹಿತ 159 ವ್ಯಕ್ತಿಗಳು ಆರೋಪಿಗಳಾಗಿರುವುದಾಗಿ ಸಾಲಿಸಿಟರ್ ಜನರಲ್ ದೀಪಂಕರ್ ಪಿ. ಗುಪ್ತಾ ಅವರು ಇಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು. ಈ ಪೈಕಿ ಆರು ಮಂದಿ ದಿವಂಗತರು. 8 ಜನರನ್ನು ಇನ್ನೂ ಗುರುತು ಹಚ್ಚಬೇಕಿದೆ.

50 ವರ್ಷಗಳ ಹಿಂದೆ

ಮಂಗಳವಾರ, 23-2-1971

• **1970ರ ವೇತನ ಶ್ರೇಣಿಯಲ್ಲಿದ್ದ ಲೋಪ ನಿವಾರಣೆ**

ಬೆಂಗಳೂರು, ಫೆ. 22– ಸರ್ಕಾರದ ವಿವಿಧ ಇಲಾಖೆಗಳ 87 ಹುದ್ದೆಗಳಿಗೆ ಸಂಬಂಧಿಸಿದಂತೆ 1970ರ ವೇತನ ಶ್ರೇಣಿಯಲ್ಲಿದ್ದ ಲೋಪಗಳನ್ನು ನಿವಾರಿಸಿ ಮೈಸೂರು ಸರ್ಕಾರವು ವಿಸ್ತೃತ ಆದೇಶವೊಂದನ್ನು ಹೊರಡಿಸಿದೆ.

ವೇತನ ವ್ಯವಸ್ಥೆಗೆ ಸಂಬಂಧಿಸಿದ ಅಧಿಕೃತ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಹೊರಡಿಸಲಾದ ಈ ಆದೇಶದಲ್ಲಿ ನೌಕರರು ರಜೆಯ ಬದಲು ರಜೆಯ ವೇತನವನ್ನು ಪಡೆಯುವ ಕ್ರಮ, ಬಡ್ತಿ ಮತ್ತು ವೇತನ ಬಡ್ತಿ, ಕೆಲವು ವರ್ಗದವರಿಗೆ ವಿಶೇಷ ವೇತನ ಹಾಗೂ ವಿಧಾನ ಮಂಡಲದ ಸಿಬ್ಬಂದಿಗೆ ಓವರ್ ಟೈಂ ಭತ್ಯೆಯ ಬಗ್ಗೆ ನಿಯಮಗಳನ್ನು ಸ್ಪಷ್ಟಪಡಿಸಲಾಗಿದೆ.

• **ಬಂಗಾಳ ಬಂದ್ ‘ಶಾಂತಿಯುತ’ ಯಶಸ್ವಿ: ಜನಜೀವನ ಸ್ಥಗಿತ**

ಕಲ್ಕತ್ತ, ಫೆ. 22– ಫಾರ್ವರ್ಡ್ ಬ್ಲಾಕ್ ಅಧ್ಯಕ್ಷ ಶ್ರೀ ಹೇಮಂತಕುಮಾರ ಬಸು ಅವರ ಕಗ್ಗೊಲೆ ವಿರುದ್ಧ ಪ್ರತಿಭಟಿಸಲು ಪಶ್ಚಿಮ ಬಂಗಾಳ ಇಂದು ಆಚರಿಸಿದ 24 ಗಂಟೆಗಳ ಬಂದ್‌ನಿಂದ ಜನಜೀವನ ಸ್ಥಗಿತಗೊಂಡಿತು. ಬಂದ್ ಹೆಚ್ಚುಕಡಿಮೆ ಶಾಂತಿಯುತವಾಗಿತ್ತು.

ಚಾರಿತ್ರಿಕ ಸ್ಥಿತಿಯಾಚೆಗಿನ ಪ್ರಾಕೃತಿಕ ಹೆಣ್ಣನ್ನು ಕಾಣಲಾಗದಷ್ಟು ಕಣ್ಕಟ್ಟುಗಳು...

ಅವಳ ಅರಿವು ಮತ್ತು ಲೋಕದೃಷ್ಟಿ

ವಿಶ್ಲೇಷಣೆ

ಡಾ. ಗೀತಾ ವಸಂತ

ಮನುಷ್ಯ ಹುಟ್ಟುತ್ತ ವಿಶ್ವಮಾನವ, ಬೆಳೆಯುತ್ತ ಅಲ್ಪಮಾನವ ಎಂಬ ಕುವೆಂಪು ಅವರ ಮಾತನ್ನು ನಾವು ಒಂದು ಸುಂದರ ಕೋಟ್ ಎಂಬಂತೆ ಬಳಸುತ್ತೇವೆ. ಡಿಬೇಟ್ ಮಾಡುವ ನಮ್ಮ ವಿದ್ಯಾರ್ಥಿಗಳು ಇದನ್ನು ಮಾತಿನಲ್ಲಿ ಬಳಸಿ ಗೆಲ್ಲುತ್ತಾರೆ. ‘ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯಃಕಶ್ಚಿತ-ವಲ್ಲ...’ ಇದೂ ಕುವೆಂಪು ಮಾತೇ. ಇದು ಆಧ್ಯಾತ್ಮಿಕ ಸತ್ಯವೂ ಹೌದು, ಸಾಮಾಜಿಕ ನ್ಯಾಯದ ತತ್ವವೂ ಹೌದು, ರಾಜಕೀಯ ಸರಿತನದ ಪ್ರತಿಪಾದನೆಯೂ ಹೌದು. ಆದರೆ, ಇದನ್ನು ಒಂದು ಸಮಗ್ರ ದರ್ಶನವಾಗಿ ಕಾಣುವ ನೋಟಕ್ರಮವನ್ನು ನಾವು ಕಲಿಯಲೇ ಇಲ್ಲ. ಅದನ್ನು ಬರಿಮಾತಾಗಿ ಗ್ರಹಿಸಿ ನಮ್ಮ ಅಗತ್ಯಕ್ಕೆ ತಕ್ಕಂತೆ ಬಳಸುವ ಜಾಣ್ಮೆಯನ್ನು ಮಾತ್ರ ನಾವು ರೂಢಿಸಿಕೊಂಡುಬಿಟ್ಟಿದ್ದೇವೆ. ಮಾತುಗಳಾಚೆಗೆ ನಾವು ಬದುಕುತ್ತಿರುವುದು ಭೇದ ರಾಜಕಾರಣದ ಪ್ರಪಂಚದಲ್ಲಿಯೇ. ಇನ್ನೊಬ್ಬರನ್ನು ಆಳಬೇಕೆಂದರೆ ಅವರನ್ನು ಅಮುಖ್ಯರೆಂದು ಕಾಣಿಸುವುದು ಅನಿವಾರ್ಯ.

ಇದೇ ಮಾತುಗಳನ್ನು ಲಿಂಗಸಂಬಂಧಿ ಚರ್ಚೆಗಳಲ್ಲೂ ಅನ್ವಯಿಸಿಕೊಳ್ಳಬಹುದು. ಹೆಣ್ಣನ್ನು ಮುಖ್ಯ ತತ್ವವೊಂದಕ್ಕೆ ಅಧೀನವಾದ ತತ್ವ ಎಂದೇ ಪರಿಭಾವಿಸುವ ಸುಖವನ್ನು ಪುರುಷಪ್ರಧಾನ ವ್ಯವಸ್ಥೆ ಅನುಭವಿಸುತ್ತ ಬಂದಿರುವುದರಿಂದ ಮನುಷ್ಯ ಎಂಬ ಪರಿಕಲ್ಪನೆಯ ಹೊರಗೇ ಆಕೆ ಉಳಿದುಕೊಳ್ಳುತ್ತಾಳೆ. ಹೆಣ್ಣು ಮುಟ್ಟಾಗುವುದನ್ನು ನಮ್ಮಕಡೆ ‘ಹೊರಗಾಗುವುದು’ ಎನ್ನುತ್ತಿ-ದ್ದರು. ದೇಹದ ಪರಿವರ್ತನೆ, ಬದಲಾವಣೆ ಎಲ್ಲವೂ ಸೃಷ್ಟಿಕ್ರಿಯೆಯ ಬಹುಮುಖ್ಯ ಭಾಗವೇ ಆಗಿದ್ದರೂ ಜೀವಸೃಷ್ಟಿಯೇ ಪ್ರಕೃತಿಯ ಪ್ರಧಾನ ತತ್ವವಾಗಿದ್ದರೂ ಅವಳು ಸಮಾಜದಿಂದ, ಕುಟುಂಬದಿಂದ, ಮನೆಯಿಂದ, ಮನದಿಂದ ಹೊರಗಾಗುತ್ತಲೇ ಉಳಿಯುತ್ತಾಳೆ. ದೇವಸ್ಥಾನದಿಂದ, ಮಸೀದಿಯಿಂದ, ಚರಿತ್ರೆಯಿಂದ, ಭಾಷೆಯಿಂದ... ಹೀಗೆ ಹೊರಗಾಗುವ ಪಟ್ಟಿ ಉದ್ದವಾಗುತ್ತದೆ.

ಒಂದು ಎರಡಾಗುವ, ಹಲವಾಗುವ, ಅನಂತ ಸಾಧ್ಯತೆಯಾಗಿ ವಿಸ್ತರಿಸುವ ಈ ಸೃಷ್ಟಿತತ್ವವನ್ನು ಅಧಿಕಾರದ ಜಡ ತತ್ವವು ಬಂಧಿಸಿರುವುದೇ ವಿಪರ್ಯಾಸ. ಏನನ್ನೂ ಮೊಳೆಸಲರಿಯದ ಈ ಅಧಿಕಾರವು ಬರೀ ಹತ್ತಿಕ್ಕುವ, ನಾಶ ಮಾಡುವ ಮೂಲಕ ವಿನಾಶಕಾರೀ ಅಹಂ ಅನ್ನು ಮಾತ್ರ ಬೆಳೆಸುತ್ತ ಹೋಗುತ್ತದೆ. ಭೂಮಿ ಎಂಬ ಸಕಲವನ್ನೂ ಧರಿಸುವ, ಮೊಳೆಯಿಸುವ, ಹಿಗ್ಗಿಸುವ ವಿಕಾಸತತ್ವವನ್ನು ಭೂಪತಿಯೆನಿಸಿಕೊಂಡ ಗಂಡು ತನ್ನ ಸ್ವತ್ತೆಂದು ಭಾವಿಸಿ, ಮುಳ್ಳುಬೇಲಿಗಳನ್ನು ಹಾಕಿಸಿ, ಆಳವಾದ ಕಂದಕಗಳನ್ನು ಕೊರೆಯಿಸಿ ತನ್ನದೆಂದು ಷರಾ ಬರೆಸುತ್ತಾನೆ. ಶಾಸನಗಳು, ಲಾಂಛನಗಳು, ಕಾವ್ಯ ಪುರಾಣಗಳನ್ನು ಅವನ ಭಾಷೆ ಸೃಷ್ಟಿಸುತ್ತದೆ. ಸೃಷ್ಟಿಶಕ್ತಿಯ ಸಾಕಾರವಾದ ಹೆಣ್ಣನ್ನು ಮದುವೆ ಎಂಬ ಬಂಧನದಲ್ಲಿ ತೊಡಗಿಸಿ, ತನ್ನ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಸಾಧನೆಯಲ್ಲಿ ಪುರುಷ ತೊಡಗಿದ್ದು ಇತಿಹಾಸ.

ತಾಯ್ತನವು ಅವಳ ದೇಹ, ಮನಸ್ಸುಗಳ ಆಯ್ಕೆಯಾಗಿರದೇ ಅದು ಗಂಡೆಜಮಾನಿಕೆಯನ್ನು ಸ್ಥಾಪಿಸುವ ವಂಶ ಪ್ರಜ್ಞೆಯಾಗಿ ಬೆಳೆದಾಗಲೇ ಅವಳ ಅಧೀನತೆಯ ಸ್ಥಿತಿಯೊಂದು ಜನ್ಮತಾಳಿತು. ಈ ಚಾರಿತ್ರಿಕ ಸ್ಥಿತಿಯಾಚೆಗಿನ ಪ್ರಾಕೃತಿಕ ಹೆಣ್ಣನ್ನು ಕಾಣಲಾಗದಷ್ಟು ಕಣ್ಕಟ್ಟುಗಳು ನಮ್ಮನ್ನು ಇಂದು ಆವರಿಸಿವೆ.

ಪ್ರಕೃತಿಯ ಸಹಜ ಲಯವನ್ನು ಭಂಜಿಸಿ ಮನುಷ್ಯನು ಕುಟುಂಬ, ಸಮಾಜ, ಸಂಸ್ಕೃತಿ, ರಾಜಕಾರಣ ಹಾಗೂ ಅಭಿವೃದ್ಧಿ ಮಾದರಿಗಳನ್ನು ರಚಿಸಿಕೊಂಡಿದ್ದಾನೆ. ದೇಹ ಮತ್ತು ಪ್ರಜ್ಞೆಗಿರಬಹುದಾದ ವಿಕಾಸದ ವಿನ್ಯಾಸಗಳು ಅಧಿಕಾರ ರಾಜಕಾರಣದಲ್ಲಿ ರೂಪಾಂತರಗೊಂಡಿವೆ. ಯಾವುದು ಅವಳ ಶಕ್ತಿಕೇಂದ್ರವಾಗಿದೆಯೋ ಅದೇ ಅವಳ ದೌರ್ಬಲ್ಯವೆಂಬಂತೆ ಬಿಂಬಿತವಾಗುತ್ತ ಹೋಗಿ ಸೃಷ್ಟಿಶಕ್ತಿಯ ನಿಗೂಢತೆಯ ಬಗೆಗಿದ್ದ ಭಯವೇ ಅವಳನ್ನು ನಿಯಂತ್ರಿಸಲು ಕಾರಣವಾಯಿತು. ಆರಂಭದಲ್ಲಿ ಸಲಹುವ ತಾಯ್ತನವೇ ಅಧಿಕಾರ ಕೇಂದ್ರವಾಗಿದ್ದು, ಅದು ಪಿತೃ ಪ್ರಧಾನತೆಯೆಡೆ ಮಗ್ಗುಲು ಬದಲಾಯಿಸಿದ ಇತಿಹಾಸವೇ ನಾಗರಿಕತೆಯ ಇತಿಹಾಸ.

ಕುಟುಂಬದ ರಚನೆಯ ಮೂಲಕ ಶ್ರಮ ವಿಭಜನೆ ಹಾಗೂ ಜವಾಬ್ದಾರಿಗಳ ಹಂಚಿಕೆಯನ್ನು ಮಾಡುವಾಗ ಅವಳ ಶಕ್ತಿಕೇಂದ್ರವಾಗಿದ್ದ ದೇಹವನ್ನೇ ಮಿತಿಯೆಂದು ಭಾವಿಸುತ್ತ ಬಂದ ಯೋಚನಾ ಕ್ರಮವು ಕಣ್ಕಟ್ಟಿನಂತೆ ಆವರಿಸಿಕೊಳ್ಳುತ್ತ ಹೋಯಿತು. ಅಧಿಕಾರಜನ್ಯ-ವಾದ ಹಿಂಸೆಯು ಅವಳ ಶಕ್ತಿಕೇಂದ್ರವನ್ನು ಮಸುಕುಗೊಳಿಸುತ್ತ ಹೋಯಿತು. ಮದುವೆ ಎಂಬ ಅನಿವಾರ್ಯ ಚೌಕಟ್ಟಿನಲ್ಲಿ ಬಂದಿಯಾದಂತೆ ಹೊರಬರುವ ದಾರಿಗಳೇ ಮುಚ್ಚಿಹೋದವು. ವಿವಾಹದ ಪಾವಿತ್ರ್ಯ ಹಾಗೂ ಪಾಲುದಾರಿಕೆಯು ಎರಡು ಜೀವಗಳು ಒಂದನ್ನೊಂದು ಉದ್ದೀಪಿಸುತ್ತಾ ಜೊತೆಜೊತೆಯಾಗಿ ಬೆಳೆಯಬಹುದಾದ ಸಾಧ್ಯತೆಯಾಗಿ ವಿಕಾಸವಾಗಬಹುದಿತ್ತು. ಆದರೆ ಬಾಂಧವ್ಯವು ಬಂಧನವಾಗತೊಡಗಿದಂತೆಲ್ಲ ಹಿಂಸೆಯ ನಾನಾ ಸ್ವರೂಪಗಳು ಬೆಳೆಯುತ್ತ ಹೋದವು. ಕುಟುಂಬದ ಮೂಲಕ ಸಂತಾನವನ್ನು ನೆಲೆಗೊಳಿಸುವ ಆದರ್ಶ ಕಲ್ಪನೆಯು ವಂಶಪಾರಂಪರ್ಯದ ಹಕ್ಕುಸ್ಥಾಪನೆಯಡಿಯಲ್ಲಿ ನರಳಿತು. ವಾತ್ಸಲ್ಯದಲ್ಲಿ ಅರಳಬೇಕಾದ ಜೀವಗಳನ್ನು ಅಧಿಕಾರದ ಬೇಟೆಯ ಭಾಷೆಗೆ ಪಳಗಿಸಲಾಯಿತು. ಗಂಡುಮಗು ಅಧಿಕಾರದ ಮುಂದುವರಿಕೆಯಾಗಿಯೂ ಹೆಣ್ಣುಮಗು ವಂಶಾಭಿವೃದ್ಧಿಯ ಸಾಧನವಾಗಿಯೂ ರೂಪುಗೊಳ್ಳುತ್ತ ಪ್ರಜ್ಞೆಯ ವಿಕಾಸದ ಸಾಧ್ಯತೆಗಳು ಮೊಟಕಾದವು.

ಸದ್ಯ ನೋಡಿದ ‘ದ ಗ್ರೇಟ್ ಇಂಡಿಯನ್ ಕಿಚನ್’ ಎಂಬ ಮಲಯಾಳಂ ಸಿನಿಮಾ, ಮದುವೆಯೊಳಗಿನ ಅಸಹನೀಯ ಮೌನವನ್ನೂ ಅಡುಗೆ ಮನೆಯೆಂಬ ಜಗತ್ತಿನಲ್ಲಿ ಹೂತುಹೋದ ಹೆಣ್ಣಿನ ಪ್ರಜ್ಞೆಯನ್ನೂ ಧ್ವನಿಪೂರ್ಣವಾಗಿ ಕಾಣಿಸಿತು. ಕಟ್ಟಿಕೊಂಡ ಸಿಂಕಿನ ರೂಪಕವು ಹರಿವು ಕಾಣದೆ ನಾರುವ ಹೆಣ್ಣಿನ ಅಸಹಾಯ ಸಂಕಟವನ್ನು ಮಾರ್ದನಿಸಿತು. ಮದುವೆಯೆಂಬ ಅನುಕೂಲಸಿಂಧು ವ್ಯವಸ್ಥೆಯಲ್ಲಿ ತಿಂದು ಬಿಸಾಡಿದ ಕಸದಂತೆ, ಕಾಮಕ್ಕೆ ಒದಗುವ ನಿತ್ಯ ವಸ್ತುವಿನಂತೆ, ತನ್ನ ಅರಿವು ತನಗಿಲ್ಲದೆ ಕರಗುವ ಹೆಣ್ಣು ಜೀವದ ಸುಯ್ಲು ತಲ್ಲಣವನ್ನು ಉಂಟುಮಾಡುತ್ತದೆ. ಅಣೆಕಟ್ಟುಗಳನ್ನು ಕೊಚ್ಚಿಹರಿಯಬೇಕೆಂಬ ನದಿಯ ತಳಮಳ ನಮಗೆ ಹೇಗೆ ಅರಿವಾಗುವುದಿಲ್ಲವೋ ಹಾಗೇ ಮದುವೆಯೆಂಬ ಸಂಸ್ಥೆ ಶಾಶ್ವತ ಸತ್ಯವೆಂದು ಭಾವಿಸಿದ ಮನಸ್ಸುಗಳಿಗೆ ಅವಳ ಬಿಡುಗಡೆಯ ತಪನೆ ಅರ್ಥವಾಗುವುದಿಲ್ಲ. ಬಿಡುಗಡೆಯೆಂಬುದು ಬರೀ ಸ್ತ್ರೀವಾದಿ ಆಶಯವಲ್ಲ. ಅದು ಜೀವಚೈತನ್ಯವೊಂದರ ವಿಕಾಸದ ಅಸೀಮ ಹಂಬಲ. ಅವಳು ಹುಟ್ಟಿದಾಗಲೇ ಈ ವಿಕಾಸದ ಸಾಧ್ಯತೆಯೂ ಹುಟ್ಟಿಬಿಟ್ಟಿದೆ. ಅದನ್ನು ಎಷ್ಟುದಿನ ಅದುಮಿಡಲು ಸಾಧ್ಯ? ಹರಿಯುವುದೇ ಹೊಳೆಯ ಸಹಜ ಸ್ವಭಾವ. ಅಕ್ಕಮಹಾದೇವಿಯು ಮದುವೆಯನ್ನು ನಿರಾಕರಿಸುವ ನಿರ್ಧಾರದ ಹಿಂದೆ, ವ್ಯವಸ್ಥೆಯನ್ನು ಮುರಿಯುವ ಬಂಡುಕೋರತೆಗಿಂತ ಹೆಚ್ಚಾಗಿ ಇದ್ದದ್ದು ತನ್ನನ್ನು ಆ ಜಡ ಚೌಕಟ್ಟಿನಾಚೆಗೆ ಹಿಗ್ಗಿಸಿಕೊಳ್ಳುವ ಹಂಬಲ.

ವರ್ಜಿನಿಯಾ ವೂಲ್ಫ್ ‘ತನ್ನದೇ ಕೋಣೆಯ’ ರೂಪಕದಲ್ಲಿ ಬಯಸುವ ತನ್ನದೇ ಕಾಲ ಮತ್ತು ಸ್ಥಳ ಅವಳನ್ನು ಧ್ಯಾನಸ್ಥ ಏಕಾಂತದಲ್ಲಿ ಮರುರಚಿಸಿಕೊಳ್ಳುವ ಹಂಬಲದಿಂದ ಕೂಡಿದ್ದು. ಇಂದಿನ ಹೆಣ್ಣು ತನ್ನ ದುಡಿಮೆಯ ಮೂಲಕ ಬದುಕಿನ ಎಲ್ಲ ನೆಲೆಗಳನ್ನು ಕಟ್ಟಲು ಬಯಸುವುದು ತನ್ನ ಕ್ರಿಯಾಶಕ್ತಿಯನ್ನು ಅನ್ವೇಷಿಸುವ ಹಂಬಲದಿಂದ. ಆದರೆ ಅಧಿಕಾರಾರೂಢ ವ್ಯವಸ್ಥೆಗೆ ಅವಳ ಆತ್ಮವಿಶ್ವಾಸ ಅಹಂಕಾರದಂತೆಯೂ ಅವಳ ಏಕಾಂತದ ಹಂಬಲ ಸ್ವಾರ್ಥದಂತೆಯೂ ತೋರುತ್ತವೆ. ಅವಳು ಬದಲಾಗಿಬಿಟ್ಟಿದ್ದಾಳೆಂಬ ಭಯವು ಪ್ರಳಯ ಭಯಕ್ಕಿಂತಲೂ ಮಿಗಿಲಾಗಿ ಕಾಡುತ್ತಿದೆ.

ಇಂದು ರೂಪಿಸಲ್ಪಟ್ಟ ಹೆಣ್ಣು ತನ್ನ ಕಣ್ಣುಪಟ್ಟಿ ಕಳಚಿ ತನ್ನನ್ನು ನೈಜ ನೆಲೆಯಲ್ಲಿ ಮರುರಚಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನವನ್ನು ಅತ್ಯಂತ ಸಹಜವಾಗಿ ಕಾಣುವ ಜ್ಞಾನಮೀಮಾಂಸೆಯ ಅಗತ್ಯವಿದೆ. ಇಚ್ಛಾಶಕ್ತಿಯೂ ಕ್ರಿಯಾಶಕ್ತಿಯೂ ಆಗಿರುವ ಅವಳು ಜ್ಞಾನಶಕ್ತಿಯೂ ಹೌದು. ಅವಳ ಅರಿವಿನಿಂದ ಮೂಡಿದ ಲೋಕದೃಷ್ಟಿಯು ಲೋಕಮೀಮಾಂಸೆಯೂ ಆದಾಗ ಧರ್ಮ, ರಾಜಕಾರಣ, ಅಭಿವೃದ್ಧಿ, ಸಾಹಿತ್ಯ, ಕಲೆ ಹಾಗೂ ಜ್ಞಾನವಲಯಗಳು ಮರುರಚನೆಗೊಳ್ಳುತ್ತವೆ. ಆದ್ದರಿಂದ ಅವಳ ಮರುರಚನೆಯಲ್ಲಿ ಲೋಕದ ಮರುರಚನೆಯೂ ಇದೆ. ಸಹಜವಿಕಾಸದ ಮುಕ್ತತೆಯಲ್ಲಿ ಮಾತ್ರ ಜೀವನಪ್ರೀತಿ ಅರಳುತ್ತದೆ. ಸೃಷ್ಟಿ ನಿರಂತರವಾಗುತ್ತದೆ.

ಲೇಖಕಿ: ಮುಖ್ಯಸ್ಥೆ, ಕನ್ನಡ ವಿಭಾಗ, ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಚುರುಮುರಿ

ಕೇಳು ಜನಮೇಜಯ

• ಲಿಂಗರಾಜು ಡಿ.ಎಸ್.

‘**ಪೆಟ್ರೋಲ್**, ಡೀಜೆಲ್ ಸೆಂಚುರಿ ಬಾರಿಸ್ಯವೆ. ತೆರಿಗೆ, ದಿನಸಿ, ಗ್ಯಾಸು, ಕರಂಟು ಶಾಕು ಹೊಡೀತಾವೆ. ಬದುಕು ಕುರುಕ್ಷೇತ್ರ ಯುದ್ಧ ಆಗ್ಯದಲ್ಲಾ?’ ತುರೇಮಣೆಗೆ ಕೇಳಿದೆ.

‘ನೀನು ಆರ್ಥಿಕ ರಾಜಕೀಯದ ಮಹಾಭಾರತದೇಲಿ ಕರ್ಣ ಇದ್ದಂಗೆ, ಕೊಡದೆಲ್ಲಾ ಕೊಟ್ಟು ಅಮಿಕ್ಕಂಡಿರದಷ್ಟೇ ನಿನ್ನ ಕೆಲಸ. ಎಲ್ಲಾ ಅವನ ಕ್ರಿಯೆ ಕನಾ ಜನಮೇಜಯ!’ ಅಂದರು.

‘ವ್ಯವಸ್ಥೇಲಿ ನಾವು ಯಾತಕೂ ಸಲುವಲ್ಲದೋರಾ ಸಾ?’

‘ವ್ಯವಸ್ಥೇಲಿ 9 ಮನೆ ಇರತವೆ ತಿಳಕೋ ಜನಮೇಜಯ’ ಅಂದರು. ಇದೇನೋ ಒಂಥರಾ ವ್ಯರ್ಥಶಾಸ್ತ್ರದ ಗ್ರಹಕೂಟ ಇದ್ದಂಗದಲ್ಲಾ ಅನ್ನಿಸಿ ‘ಆಮೇಲ್ಲಾ?’ ಅಂದೆ.

‘ವ್ಯವಸ್ಥೆಯ ಮೂಲಾಧಾರ ಬಡವ ಕನೋ. ಎರಡನೇ ಮನೇಲಿರಾ ಶ್ರೀಮಂತನಿಗೆ ಬಡವನ್ನ ಗೋರಿಕ್ಕಂಡು ತಿನ್ನದೇ ಕೆಲಸ. ಮೂರನೇ ವರ್ಗದೇಲಿರ ಪೋಲೀಸು ಮೇಲಿನ ಎರಡು ವರ್ಗಕ್ಕೆ ರಕ್ಷಣೆ ಕೊಡಬೇಕು. ನಾಲ್ಕನೇ ಮನೇಲಿ ನನ್ನ-ನಿನ್ನಂತಾ ಮಧ್ಯಮ ವರ್ಗದ ಬಿಕನಾಸಿಗಳಿರತೀವಿ. ಮೇಲಿನ ಮೂರೂ ವರ್ಗಕ್ಕೂ ನಮ್ಮದೇ ಖರ್ಚು! ಒಳ್ಳೆ ದಿನ ಬತ್ತದೆ ಅಂತ ಭ್ರಮೆಯಲ್ಲೇ ಎಲ್ಲಾ ಬದುಕ್ತರೆ!’ ಅಂದರು.

‘ಮುಂದೆ ಸಾ!’

‘ಐದನೇ ಮನೇಲಿ ಬ್ಯಾಂಕರುಗಳಿರತರೆ ಕಲಾ. ನಾಲ್ಕೂ ವರ್ಗದ ದುಡ್ಡು ಇವರು ಮಡಿಕಂಡು ಉಳ್ಳೋರಿಗೇ ಕೊಡತರೆ. ಆರನೇ ಮನೇಲಿ ಕಾರ್ಯಾಂಗ ಇರತದೆ. ಮೇಲಿನ ಐದು ವರ್ಗಕ್ಕೂ ದಾರಿ ತಪ್ಪಿಸೋರು ಇವರೇಯ! ಏಳನೇ ಮನೇಲಿ ಪೋಲಿಪಕಾರುಗಳಿರತರೆ. ಇವರು ಎಲ್ಲ ಆರೂ ವರ್ಗಗಳನ್ನ ಹೆದರಿಸ್ಕ್ಯಂಡು ಬದಿಕ್ಕತರೆ. ಎಂಟನೇ ವರ್ಗ ಧರ್ಮಗುರುಗಳದ್ದು. ಎಲ್ಲಾರೂ ಇವರ ಆಶೀರ್ವಾದ ಕೇಳತರೆ!’

‘ಒಂಬತ್ತನೇ ಗ್ರಹ ಯಾವುದು?’ ಅಂದೆ.

‘ಬೊಡ್ಡಿಹೈದ್ನೇ, ಒಂಬತ್ತನೇ ಮನೇ ರಾಜಕಾರಣಿಗಳದ್ದು. ಇವರು ಎಂಟೂ ವರ್ಗದವರ ತಲೆ ಸವರಿಕ್ಯಂಡು ಮಜವಾಗಿರೊತ್ತೇ ನಮಗೆ ಈ ವಡಬಾಳು!’ ಅಂದ್ರು.

ಜನಮೇಜಯನ ಕತೆ ಕೇಳಿ ಚಂದ್ರು, ಯಂಟಪ್ಪಣ್ಣ ಬಗನಿ ಗೂಟ ಹೊಡಸಿಕ್ಯಂಡೋ-ರಂಗೆ ಉಸೂರಂತಾ ವಾರೆಯಾಗಿ ಕುಂತಗಂಡ್ರು.

ಸಂಗತ

ವ್ಯಂಗ್ಯಚಿತ್ರ ಎಂಬ ಅಪ್ರಿಯ ಸತ್ಯ

ಆಡಳಿತಾರೂಢರು– ಹಾಸ್ಯಕಲಾವಿದರ ಮಧ್ಯೆ ಉತ್ತಮ ಸಂಬಂಧ ಸಾಧ್ಯವಿಲ್ಲವೇಕೆ?

• ಬಿ.ಕೆ.ಚಂದ್ರಶೇಖರ್

ಹೊಸ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ದ್ವಾರಗಳಲ್ಲಿ ಪ್ರತಿಭಟಿಸುತ್ತಿರುವ ರೈತರ ಪರವಾಗಿ ದನಿ ಎತ್ತಿದ ಹಲವರ ವಿರುದ್ಧ ಕೇಂದ್ರ ಸರ್ಕಾರ ಮುಗಿಬಿದ್ದಿದೆ. ರೈತರನ್ನು ಬೆಂಬಲಿಸಿ ಟ್ವೀಟ್ ಮಾಡಿದ ಕೆಲವರ ಮೇಲೆ ‘ದೇಶದ್ರೋಹ’ದ ಪ್ರಕರಣ ದಾಖಲಾಗಿದೆ!

ಏಳು ದಶಕಗಳಿಂದ ಬೆಳೆದು ಬಲಿಷ್ಠವಾದ ‘ಆತ್ಮ-ವಿಶ್ವಾಸ’ದಿಂದಿರುವ ನಮ್ಮ ದೇಶಕ್ಕೆ ಕೇವಲ ಕೆಲವರ ಹೇಳಿಕೆಯಿಂದ ಥಟ್ಟನೆ ಚೈತನ್ಯ ಇಲ್ಲದಂತೆ ಆಗಿದೆಯೇ ಅಥವಾ ಬಹುಮತ ಹೊಂದಿದ್ದರೂ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಯಾವುದೋ ಅಮೂರ್ತ ಭೀತಿ ಕಾಡುತ್ತಿರಬಹುದೇ? ಅದಕ್ಕಾಗಿ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದ ಪ್ರಯೋಗ ಬೇಕಿತ್ತೇ? ‘ದೇಶದ್ರೋಹ’, ‘ಸರ್ಕಾರವನ್ನು ಅಸ್ಥಿರಗೊಳಿಸುವ ಸಂಚು’ ಎಂಬಂತಹ ಅಪಾಯಕಾರಿ ಬ್ರಹ್ಮಾಸ್ತ್ರ ಪ್ರಯೋಗವು ಸರ್ಕಾರಗಳಿಗೆ ಅನುಕೂಲಕರ-ವಾಗಿದೆ. ಇದರಿಂದ ಆಪಾದಿತರನ್ನು ಸಾಕುಬೇಕಾದಷ್ಟು ಬಾರಿ ಕೋರ್ಟಿಗೆ ಅಲೆಯುವಂತೆ ಮಾಡಬಹುದು.

ಸರ್ಕಾರಗಳ ನೀತಿ ನಿರ್ಧಾರಗಳನ್ನು ಟೀಕಿಸುವವರ ವಿರುದ್ಧ ಪ್ರಯೋಗಿಸುತ್ತಿರುವ ಈ ಅಸ್ತ್ರವನ್ನೇ ವ್ಯಂಗ್ಯಚಿತ್ರಕಾರರು ಮತ್ತು ಹಾಸ್ಯಕಲಾವಿದರ ವಿರುದ್ಧವೂ ಪ್ರಯೋಗಿಸುವುದು ಸಾಮಾನ್ಯವಾಗಿಬಿಟ್ಟಿದೆ. ಅಸೀಮ್ ತ್ರಿವೇದಿ ಭ್ರಷ್ಟಾಚಾರ ವಿರೋಧಿ ಕಾರ್ಟೂನ್‌ಗಳಿಗೆ ಜನಪ್ರಿಯರಾದವರು. 2012ರಲ್ಲಿ ಮಹಾರಾಷ್ಟ್ರದ ಸರ್ಕಾರ ಅವರ ಕಾರ್ಟೂನೊಂದರ ವಿರುದ್ಧ ದೇಶದ್ರೋಹದ ಕೇಸ್ ದಾಖಲಿಸಿತ್ತು. ‘ಭಾರತೀಯ ದಂಡಸಂಹಿತೆಯ ಪ್ರಕಾರ, ತ್ರಿವೇದಿಯವರ ಚಿತ್ರದಲ್ಲಿ ಪ್ರಭುತ್ವದ ವಿರುದ್ಧ ಪ್ರಚೋದನೆ, ಹಿಂಸೆಗೆ ಪ್ರೇರೇಪಣೆ ಕುರಿತ ಆಪಾದನೆ ಕಿಂಚಿತ್ತೂ ಇಲ್ಲವಾದ್ದರಿಂದ ದೇಶದ್ರೋಹದ ಪ್ರಶ್ನೆಯಿಲ್ಲ’ ಎಂದು ಬಾಂಬೆ ಹೈಕೋರ್ಟ್ ತೀರ್ಪಿತ್ತಿತ್ತು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮನ್ನು ವಿಡಂಬನೆ ಮಾಡಿದ್ದ ವ್ಯಂಗ್ಯಚಿತ್ರಕಾರರನ್ನು ಅರೆಸ್ಟ್ ಮಾಡಿಸಿದ್ದರು. ಸೃಜನಶೀಲ ಕಲೆಗಳನ್ನೇ ಸಂಕೋಲೆಯಲ್ಲಿ ಇಟ್ಟಂತಹ ಇಂತಹ ಬಂಧನಗಳ ವಿರುದ್ಧ ದೇಶದ ನೂರಕ್ಕೂ ಹೆಚ್ಚು ಕಲಾವಿದರು ಹೇಳಿಕೆಯನ್ನು ಕೊಟ್ಟಿದ್ದರು. ಕಾರ್ಟೂನಿಸ್ಟ್‌ಗಳೇ ಇಲ್ಲದಂತಹ ದೇಶವಿದೆಯೇ?

ನಮಗೆ ದೇಶದ್ರೋಹ ಕಾಯ್ದೆಯನ್ನು ಕೊಟ್ಟ ಬ್ರಿಟನ್‌ನಲ್ಲಿ ತೀವ್ರ ಟೀಕೆಗೆ ಒಳಪಡುವ ಜನಪ್ರತಿ-ನಿಧಿಗಳಿಗೆ ದೇಶದ್ರೋಹದ ಆಪಾದನೆ ಮಾಡಲು ಅವಕಾಶವಿಲ್ಲ. ಅಮೆರಿಕದಲ್ಲಿ ಬಹುಪಾಲು ಯಾವ ಅಡಚಣೆಯೂ ಇಲ್ಲದೆ ವ್ಯಂಗ್ಯಚಿತ್ರಗಳು, ಅಣಕು ವಿಡಿಯೊಗಳು, ಪತ್ರಿಕಾ ವರದಿಗಳು ಬರುತ್ತಿವೆ. ನಮ್ಮ ರಾಜಕಾರಣಿಗಳಂತೆ ಅಲ್ಲಿ ಆಕ್ಷೇಪ ಬರುವುದಿಲ್ಲ. ಇದು ಆ ದೇಶಗಳ ಜನ ಮತ್ತು ನಾಯಕರು ಸೃಜನಶೀಲತೆಗೆ, ಕಲೆಗೆ ತೋರುವ ಗೌರವವಲ್ಲವೇ? ನಮ್ಮಲ್ಲೇಕೆ ಇದು ಸಾಧ್ಯವಾಗಬಾರದು?

ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದಾಗ ವ್ಯಂಗ್ಯಚಿತ್ರಕಾರ ಇ.ಪಿ.ಉಣ್ಣಿಯವರು ‘ಶಂಕರ್ಸ್ ವೀಕ್ಲಿ’ ಪತ್ರಿಕೆಯಲ್ಲಿ ಅವರನ್ನು ರಚನಾತ್ಮಕವಾಗಿ ಟೀಕಿಸು-ತ್ತಿದ್ದರು. ಹೀಗಿದ್ದರೂ ಪತ್ರಿಕೆಯ ಸಂಸ್ಥಾಪಕ ಶಂಕರ್ ಅವರ ದೊಡ್ಡ ಅಭಿಮಾನಿಯಾಗಿದ್ದ ನೆಹರೂ ‘ನನಗೆ ಯಾವುದೇ ರಿಯಾಯಿತಿ ಬೇಡ’ ಎಂದಿದ್ದುದು ಅವರ ಪ್ರಜಾಪ್ರಭುತ್ವದ ಮನೋಧೋರಣೆ, ಸಹನೆಗೆ ನಿದರ್ಶ-ನವಾಗಿತ್ತು.

ಆ ಬಗೆಯ ಹಾಸ್ಯಪ್ರಜ್ಞೆಯ ಕೊರತೆ ಇಂದಿನ ಬಹುತೇಕ ಧುರೀಣರಲ್ಲಿ ಎದ್ದು ಕಾಣುತ್ತದೆ. ಅದಕ್ಕೆ ಅಪವಾದ ಎಂಬಂತಹ ಎರಡು ಸಂಗತಿಗಳನ್ನು ಇಲ್ಲಿ ಹೇಳಲೇಬೇಕು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಸಚಿವರಾಗಿದ್ದ ಜಸ್ವಂತ್ ಸಿಂಗ್, ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಅಪಹರಿಸಿದ್ದ ತಾಲಿಬಾನ್ ಭಯೋತ್ಪಾದಕರೊಡನೆ ಸಂಧಾನ ನಡೆಸಿದ ನಂತರ ಪ್ರಯಾಣಿಕರೊಡನೆ ಭಾರತಕ್ಕೆ ಹಿಂದಿರುಗಿದ್ದರು. ಮಾರನೆಯ ದಿನವೇ ವ್ಯಂಗ್ಯಚಿತ್ರ ಕಲಾವಿದ ಸುಧೀರ್ ತೈಲಂಗ್ ಅವರು ಜಸ್ವಂತ್ ಸಿಂಗ್ ಬಂದೂಕಿನೊಡನೆ ತಾಲಿಬಾನ್ ದಿರಿಸಿನಲ್ಲಿರುವ ಚಿತ್ರವನ್ನು ರಚಿಸಿದ್ದರು. ಅದು ಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು. ಜಸ್ವಂತ್ ಅವರು ತೈಲಂಗ್ ಅವರಿಗೆ ಫೋನ್ ಮಾಡಿ ‘ವ್ಯಂಗ್ಯ-ಚಿತ್ರದ ಅಸಲು ಪ್ರತಿ ಕೊಡುವಿರಾ? ಕಟ್ಟು ಹಾಕಿಸಿ ನನ್ನ ಕಚೇರಿಯಲ್ಲಿಡುತ್ತೇನೆ’ ಎಂದು ತರಿಸಿಕೊಂಡರು!

ಸಚಿವರಾಗಿದ್ದ ಮುರಳಿ ಮನೋಹರ ಜೋಷಿಯವರು ‘ನನಗೆ ನಿಮ್ಮ ಮೇಲೆ ಸಿಟ್ಟು ಬಂದಿದೆ. ಆರು ತಿಂಗಳಿಂದ ನನ್ನನ್ನು ನಿರ್ಲಕ್ಷಿಸಿದ್ದೀರಿ. ನನ್ನ ಕುರಿತು ವ್ಯಂಗ್ಯಚಿತ್ರವನ್ನು ಬರೆದಿಲ್ಲವೇಕೆ? ರಾಜಕಾರಣದಲ್ಲಿ ಅಷ್ಟು ಅಪ್ರಸ್ತುತನಾಗಿದ್ದೇನೆಯೇ?’ ಎಂದಿದ್ದನ್ನು ತೈಲಂಗ್ ಅವರೇ ದಾಖಲಿಸಿದ್ದಾರೆ. ಕಲೆಯ ಬಗ್ಗೆ ಆಸಕ್ತಿ ಹೊಂದಿದ್ದ ಇವರಿಬ್ಬರೂ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಪ್ರಭಾವಿತರಾಗಿದ್ದರು.

ಭಾರತದ ಸಂಸ್ಕೃತಿಯಲ್ಲಿ ವೈಚಾರಿಕತೆಗೆ, ಹಾಸ್ಯ-ಪ್ರಜ್ಞೆಗೆ, ರಚನಾತ್ಮಕ ವಿಮರ್ಶೆಗೆ ಎಂದಿನಿಂದಲೂ ಸ್ಥಾನವಿತ್ತು. ಕಾಳಿದಾಸ, ಶೂದ್ರಕ ಅವರ ನಾಟಕಗಳಲ್ಲಿ ಬರುವ ವಿದೂಷಕರು, ವಿಜಯನಗರದ ದೊರೆ ಕೃಷ್ಣ-ದೇವರಾಯನ ಆಸ್ಥಾನದಲ್ಲಿದ್ದ ತೆನಾಲಿ ರಾಮಕೃಷ್ಣ, ಅಕ್ಬರನ ಆಸ್ಥಾನದಲ್ಲಿದ್ದ ಬೀರ್‌ಬಲ್ ಅವರನ್ನು ಉದಾಹರಿಸಬಹುದು. ಅಪ್ರಿಯವಾದ, ಮುಜುಗರ ಉಂಟುಮಾಡುವ ಸತ್ಯವನ್ನು ಅಂದಿನ ಹಾಸ್ಯಕಲಾ-ವಿದರು ತಮ್ಮನ್ನಾಳುವವರ ಮುಂದಿರಿಸುತ್ತಿದ್ದರು. ಇಂದಿನ ಆಡಳಿತಾರೂಢರು ಮತ್ತು ಹಾಸ್ಯಕಲಾವಿದರ ನಡುವೆಯೂ ಇಂತಹ ಸಂಬಂಧ ಸಾಧ್ಯವಿಲ್ಲವೇಕೆ?

ಪ್ರಜಾಪ್ರಭುತ್ವ ಎಂದು ಹೇಳಿಕೊಳ್ಳುವ ವ್ಯವಸ್ಥೆಗೆ ಅಸಮ್ಮತಿ ಹಾಗೂ ಭಿನ್ನಾಭಿಪ್ರಾಯ ಎಂಬುವು ಮೂಲಭೂತ ತತ್ವಗಳು. ಅವು ರಾಜಕೀಯದಲ್ಲಿ ಮಾತ್ರವಲ್ಲ, ಸಂಸ್ಕೃತಿಗೂ ಅತ್ಯವಶ್ಯಕ. ಪ್ರಭುತ್ವದ ಬೆಂಬಲದಿಂದಲೇ ರಾಜಕೀಯವು ಧರ್ಮಾಧಾರಿತ-ವಾದಾಗ ಹಾಸ್ಯ, ವಿಡಂಬನೆ, ಟೀಕೆ ಎಲ್ಲವೂ ಅದರ ಕರ್ತೃಗಳಿಗೆ ಅಪಾಯಕಾರಿಯೇ!

ಲೇಖಕ: ಕಾಂಗ್ರೆಸ್ ಮುಖಂಡ, ವಿಧಾನಪರಿಷತ್ತಿನ ಮಾಜಿ ಸಭಾಪತಿ

ವಾಚಕರ ವಾಣಿ

ಬಟ್ಟೆ ಹಾವೂ ಕಚ್ಚುವಂತಾಯಿತು!

ಹದಿನೈದು ವರ್ಷಗಳ ಹಿಂದಿನ ಮೈತ್ರಿ ಸರ್ಕಾರದಲ್ಲಿ ಹಾಲಿ ಮುಖ್ಯಮಂತ್ರಿ ಸೇರಿದಂತೆ ಅನೇಕ ಮುಖಂಡರು, ಮಠಾಧೀಶರನ್ನು ಬೀದಿಗೆ ಕರೆತಂದು ಪ್ರತಿಭಟನೆ ಮಾಡಿಸಿದ್ದರು. ಆಗಿನ ಅಧಿಕಾರದ ಏಣಿಗೆ ಕಾವಿಯನ್ನು ಸಂದರ್ಭೋಚಿತವಾಗಿ ಬಳಸಿಕೊಂಡವರು, ತಮ್ಮ ಬೆನ್ನಿಗೆ ನಿಂತವರನ್ನು ಸಂತೈಸಲು ಭರಪೂರ ದೇಣಿಗೆ ನೀಡಿದ್ದು ಸಾರ್ವಜನಿಕ ಸತ್ಯ. ಅಂದಿನಿಂದ ಬಟ್ಟೆ ಹಾವನ್ನು ತೋರಿಸಿ ಒತ್ತಾಯಿಸುವ ಆಟವನ್ನು ಮಂತ್ರಿಮಹೋದಯರು ಅನುಕರಿಸಿದ್ದರು. ಆದರೆ ಅದೇ ಹಾವು ಮುಂದೊಮ್ಮೆ ಕಚ್ಚುವಂತಹ ಹಲ್ಲುಗಳನ್ನು ಬೆಳೆಸಿಕೊಳ್ಳುತ್ತದೆ ಎಂದು ನಂಬಿರಲಿಲ್ಲ.

ಅಧಿಕಾರದ ಆಸುಪಾಸಿನಲ್ಲೇ ಇರುವ ಮುಖಂಡರು ತಮ್ಮ ಸರ್ಕಾರದ ವಿರುದ್ಧವೇ ಪ್ರತಿಭಟಿಸುತ್ತಿದ್ದಾರೆ. ಮುಂದುವರಿದ ಹಾವಿನಾಟ, ಅಧಿಕಾರಕ್ಕಾಗಿನ ಹಾವು-ಏಣಿ ಆಟವಾಗಿರುವುದು ಸ್ಪಷ್ಟ. ಇನ್ನಾದರೂ ರಾಜಕೀಯ ನಾಯಕರು ಧರ್ಮ, ಜಾತೀಯತೆಯಿಂದ ಕೊಂಚ ದೂರ ಉಳಿದರೆ ಅವರಿಗೇ ಒಳ್ಳೆಯದಲ್ಲವೆ? ರಾಜಕೀಯವು ಮಠದ ಹೊರಗಿದ್ದರೆ ಒಳ್ಳೆಯದು. ಎರಡೂ ಅದಲು ಬದಲಾದರೆ ನಂತರದ ಪೀಕಲಾಟದಲ್ಲಿ ಸೂತ್ರಧಾರರೇ ಪಾತ್ರಧಾರಿಗಳಾಗಿ ಬಿಡುತ್ತಾರೆ.

ಶಾಂತರಾಜು ಎಸ್. ಮಳವಳ್ಳಿ, ಬೆಂಗಳೂರು

ಮಾತೃಭಾಷೆಗೆ ಆದ್ಯತೆ ಸಿಗಲಿ

ತಾಯಿನುಡಿ ಮತ್ತು ಸಾಂಸ್ಕೃತಿಕ ಅಸ್ಮಿತೆ ಕುರಿತು ಯೋಗಾನಂದ ಅವರು ಬರೆದಿರುವ ಲೇಖನ (ಸಂಗತ, ಫೆ. 22) ತುಂಬಾ ಪ್ರಸ್ತುತ ಹಾಗೂ ಮೌಲಿಕ ಚಿಂತನೆಗಳಿಂದ ಕೂಡಿದೆ. ವ್ಯಕ್ತಿಗೆ ತನ್ನ ತಾಯಿಯೊಂದಿಗಿನ ಸಂಬಂಧದಷ್ಟೇ ಅತ್ಯಂತ ಸಮೀಪದ ಸಂಬಂಧ ತಾಯಿನುಡಿಯೊಂದಿಗೆ ಇದೆ. ಮಗುವು ತನ್ನ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಅಥವಾ ಪರಿಸರದ ಭಾಷೆಯಲ್ಲಿ ಕಲಿತಿದ್ದೇ ಆದಲ್ಲಿ ಮಗುವಿನ ವ್ಯಕ್ತಿತ್ವ ನಿರಾಯಾಸವಾಗಿ ಅರಳಲು ಸಾಧ್ಯವಾಗುತ್ತದೆ.

ಪಾಲಕರು ಮಾತೃಭಾಷೆಯ ಮಹತ್ವವನ್ನು ಅರಿತುಕೊಂಡು ತಮ್ಮ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ಕೊಡಿಸಿದಾಗ ಮಾತ್ರ ನಮ್ಮ ಸಂಸ್ಕೃತಿಯ ಪರಿಚಯ ಆಗಲು ಸಾಧ್ಯ. ಸರ್ಕಾರ ಕೂಡ ಈ ದಿಸೆಯಲ್ಲಿ ಕನ್ನಡ ಭಾಷೆಯನ್ನು ಅನ್ನದ ಭಾಷೆಯನ್ನಾಗಿ ರೂಪಿಸುವಂತಹ ಕಾರ್ಯ ಮಾಡಬೇಕಾದದ್ದು ಅತಿ ಜರೂರು.

ಡಾ. ಸಂಜೀವಕುಮಾರ ಅತಿವಾಳೆ, ಬೀದರ್

ವೈಯಕ್ತಿಕ ಮಟ್ಟದ ಟೀಕೆ ಸಲ್ಲದು

‘ಅಗತ್ಯ ವಸ್ತುಗಳ ಬೆಲೆ ಏರುತ್ತಿದೆ. ಜನರಿಗೆ ಮುಖ ತೋರಿಸುವುದು ಹೇಗೆ ಎಂದು ಪ್ರಧಾನಿ ಮೋದಿ ಗಡ್ಡ ಬೆಳೆಸಿಕೊಂಡು ಜನರಿಗೆ ತಮ್ಮ ಗುರುತು ಸಿಗದ ಹಾಗೆ ಮಾಡಿಕೊಳ್ಳುತ್ತಿದ್ದಾರೆ’ ಎಂಬರ್ಥದಲ್ಲಿ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರು ಪ್ರಧಾನಿ ವಿರುದ್ಧ ವ್ಯಂಗ್ಯವಾಡಿದ್ದಾರೆ (ಪ್ರ.ವಾ., ಫೆ. 22). ಸಿದ್ದರಾಮಯ್ಯ ಅವರಿಂದ ಯಾರೇ ಆದರೂ ತೂಕದ ಮಾತುಗಳನ್ನು ಮಾತ್ರ ಕೇಳಲು ಅಪೇಕ್ಷಿಸುವರೇ ಹೊರತು ಯಾರೋ ಹೊಣೆಗೇಡಿ ಆಡಬಹುದಾದ ಕ್ಷುಲ್ಲಕ, ವ್ಯಂಗ್ಯದ ಮಾತುಗಳನ್ನಲ್ಲ.

ಒಬ್ಬ ಸಾಮಾನ್ಯ ನಾಗರಿಕನೂ ಸಾರ್ವಜನಿಕವಾಗಿ ಅಥವಾ ಸಭೆಗಳಲ್ಲಿ ತಾನು ಆಡುವ ಮಾತುಗಳು ಒಂದು ಮಿತಿಯಲ್ಲಿ ಇರತಕ್ಕದ್ದು ಎಂಬ ಎಚ್ಚರವನ್ನು ಹೊಂದಿರಬೇಕು. ಹೀಗಿರುವಾಗ ದೇಶದ ಪ್ರಧಾನಿಯ ಬಗ್ಗೆ ಟೀಕಿಸುವಾಗ, ಮುಖ್ಯಮಂತ್ರಿ ಹುದ್ದೆಯಲ್ಲಿದ್ದವರು ವೈಯಕ್ತಿಕವಲ್ಲದ ರೀತಿಯ ಟೀಕೆಗಳನ್ನು ಮಾಡಿದರೆ ಮಾತ್ರ ಅಂಥ ಟೀಕೆಗೆ ತೂಕ ಇರುತ್ತದೆ ಮತ್ತು ಟೀಕೆಯನ್ನು ಒಪ್ಪದವರೂ ಟೀಕೆಯ ರೀತಿಯನ್ನು ಮೆಚ್ಚುತ್ತಾರೆ.

ಸಾಮಗ ದತ್ತಾತ್ರಿ, ಬೆಂಗಳೂರು

ಮೀಸಲಾತಿಯ ಪರಿಕಲ್ಪನೆ: ಚರ್ಚೆ ಅಗತ್ಯ

‘ಮೀಸಲಾತಿಯ ಮೇಲಾಟದ ಅಪಾಯ’ ಎಂಬ ಲೇಖನದಲ್ಲಿ (ಪ್ರ.ವಾ., ಫೆ. 19) ನಾರಾಯಣ ಎ. ಅವರು ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವ ಶ್ರೀಗಳನ್ನು ಜಾತಿಶ್ರೀಗಳು ಎಂದು ಸಂಬೋಧಿಸಿರುವುದು ವಿಷಾದನೀಯ. ಈ ಶ್ರೀಗಳು ಕೂಡ ಭಾರತದ ಪ್ರಜೆಗಳಾಗಿ ತಮ್ಮ ಹಾಗೂ ತಮ್ಮ ಸಮುದಾಯದ ತೊಳಲಾಟವನ್ನು ಸಮಾಜಕ್ಕೆ ಹಾಗೂ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಹಕ್ಕನ್ನು ಹೊಂದಿರುತ್ತಾರೆ. ಅವರ ಮೀಸಲಾತಿಯ ಹೋರಾಟವನ್ನು ರಾಜಕೀಯಪ್ರೇರಿತ ಒಳಸಂಚು ಹಾಗೂ ಅವರ ಹೋರಾಟವೇ ಅತಾರ್ಕಿಕ ಎಂದು ಬಿಂಬಿಸುವುದು ಅಥವಾ ಊಹಿಸುವುದು ಸರಿಯಲ್ಲ.

ನ್ಯಾಯಾಂಗಕ್ಕೆ ಹೋದರೆ ನ್ಯಾಯ ಸಿಗುತ್ತದೆ ಎಂಬ ಖಾತರಿ ಇಲ್ಲ ಎನ್ನುವ ಸುಪ್ರೀಂ ಕೋರ್ಟಿನ ಒಬ್ಬ ನಿವೃತ್ತ ಮುಖ್ಯ ನ್ಯಾಯಮೂರ್ತಿಯವರ ಹೇಳಿಕೆಯನ್ನು ಮೀಸಲಾತಿಯೊಂದಿಗೆ ತಳುಕು ಹಾಕುವುದು ಅಸಂಬದ್ಧವಾಗುತ್ತದೆ. ಮೀಸಲಾತಿಯನ್ನು ಒಳಗೊಂಡಿರುವ ಶಾಸಕಾಂಗ ಹಾಗೂ ಕಾರ್ಯಾಂಗಗಳಲ್ಲಿಯೂ ನಾವು ಗುಣಮಟ್ಟ, ದಕ್ಷತೆ, ಕಾರ್ಯಕ್ಷಮತೆಗಳಲ್ಲಿ ಅನೇಕ ಲೋಪದೋಷಗಳನ್ನು ಕಾಣಬಹುದಾಗಿದೆ. ಮೀಸಲಾತಿ ಇಲ್ಲದೆಯೇ ಅರ್ಹತೆಯ ಆಧಾರದ ಮೇಲೆ ಭಾರತಮಾತೆಗಾಗಿ ನಿಸ್ವಾರ್ಥ, ದಕ್ಷ, ಕಾರ್ಯಕ್ಷಮತೆ ಹಾಗೂ ಶಿಸ್ತಿನಿಂದ ಕಾರ್ಯನಿರ್ವಹಿಸುತ್ತಿರುವ ನಮ್ಮ ಗೌರವಾನ್ವಿತ ಸೇನಾಪಡೆಗಳು ಹಾಗೂ ತಮ್ಮ ಸಾಧನೆಗಳ ಮೂಲಕ ಭಾರತದ ಪ್ರತಿಷ್ಠಿತ ಸಂಸ್ಥೆ ಇಸ್ರೊ, ಜಗತ್ತಿನ ಅತ್ಯಂತ ಶ್ರೇಷ್ಠ ಸಂಸ್ಥೆ ಎಂಬ ಹೆಗ್ಗಳಿಕೆ ಪಡೆದಿರುವುದಕ್ಕೆ ಮೇರು ನಿದರ್ಶನಗಳಾಗಿವೆ.

ಮೀಸಲಾತಿಗೆ ಅರ್ಹರಾಗಿದ್ದರೂ ಮೀಸಲಾತಿಯ ಲಾಭವನ್ನು ಪಡೆಯದೆ ಕೋಟ್ಯಂತರ ಜನ ಸಂಕಷ್ಟದಲ್ಲಿರು-ವುದು ಎಷ್ಟು ಸತ್ಯವೋ ಮೇಲ್ವರ್ಗದವರಲ್ಲಿಯೂ ಶೋಷಿತರಾಗಿ, ಆರ್ಥಿಕವಾಗಿ ಹಿಂದುಳಿದವರಾಗಿ, ದುರ್ಬಲ ಧ್ವನಿವಿಹೀನರಾಗಿ ಇರುವುದು ಅಷ್ಟೇ ಕಟು ಸತ್ಯವಾಗಿದೆ. ದಶಕಗಳಿಂದಲೂ ಪಾಲಿಸಿಕೊಂಡುಬಂದ, ಅವೈಜ್ಞಾನಿಕ ಮೀಸಲಾತಿ ನೀತಿಯನ್ನು ಒಮ್ಮೆ ಚರ್ಚೆಗೊಳಪಡಿಸಿ, ನಿಜವಾಗಿಯೂ ಶೋಷಿತರು, ಆರ್ಥಿಕವಾಗಿ ಹಿಂದುಳಿದವರು, ದುರ್ಬಲರನ್ನು ಗುರುತಿಸಿ ಅವರಿಗೆ ಮೀಸಲಾತಿ ದೊರಕಿಸಿಕೊಡುವಂತಹ ಕೆಲಸವನ್ನು ಮೀಸಲಾತಿಯ ಲಾಭವನ್ನು ಪಡೆಯುತ್ತಿರುವವರು ಹಾಗೂ ಮೀಸಲಾತಿಗಾಗಿ ಹೋರಾಡುತ್ತಿರುವವರು ಒಟ್ಟಾಗಿ ಮಾಡಬೇಕಾದುದು ಆದ್ಯ, ಜವಾಬ್ದಾರಿಯುತ ಕರ್ತವ್ಯವಾಗಿದೆ.

ಮಹೇಶ್ ಸಿ.ಎಚ್., ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಾತು ಕೊಟ್ಟು, ಅನ್ಯಾಯ ಮಾಡುವುದು ಸರಿಯೆ?

• ವಿ.ಎಸ್. ಸುಬ್ರಹ್ಮಣ್ಯ

● ಪಾದಯಾತ್ರೆಗೆ ಸ್ಪಂದನೆ ಯಾವ ರೀತಿ ಇತ್ತು?
2020ರ ಅಕ್ಟೋಬರ್‌ನಲ್ಲೇ ಪಾದಯಾತ್ರೆ ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ, ದೂರವಾಣಿ ಮೂಲಕ ಮಾತುಕತೆ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒಂದು ತಿಂಗಳ ಕಾಲಾವಕಾಶ ಕೋರಿದರು. ಆದರೆ, ಯಾವ ನಿರ್ಧಾರವನ್ನೂ ಕೈಗೊಂಡಿರಲಿಲ್ಲ. ಜನವರಿ 14ರಿಂದ ಆರಂಭವಾದ ಪಾದಯಾತ್ರೆಯಲ್ಲಿ 18 ಜಿಲ್ಲೆಗಳಲ್ಲಿ ಹಾದು ಬಂದಿದ್ದೇವೆ.
ನಿರೀಕ್ಷೆಗೂ ಮೀರಿದ ಸ್ಪಂದನೆ ದೊರಕಿದೆ. ಅದರ ನಡುವೆಯೇ ಚಿತ್ರದುರ್ಗ, ಹರಿಹರ, ತುಮಕೂರಿನಲ್ಲೇ ಪಾದಯಾತ್ರೆಯನ್ನು ಮೊಟಕುಗೊಳಿಸಲು ಯಡಿಯೂರಪ್ಪ ಪ್ರಯತ್ನಿಸಿದರು. ಅವರ ಪ್ರಯತ್ನ ಫಲ ನೀಡಲಿಲ್ಲ.

● ಪಂಚಮಸಾಲಿಗಳಿಗೆ ಮೀಸಲಾತಿ ನೀಡುವುದಕ್ಕೆ ಅಡ್ಡಿ ಯಾರು?
27 ವರ್ಷಗಳಿಂದಲೂ ಈ ಬೇಡಿಕೆ ಇದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅವರ ಮುಂದೆಯೂ ಬೇಡಿಕೆ ಇಟ್ಟಿದ್ದೆವು. ಆದರೆ, ಕಾಲಾವಕಾಶ ಕೇಳಿದರು. ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದಾಗ ಲಿಂಗಾಯತ ಬಣಜಿಗರಿಗೆ ಮೀಸಲಾತಿ ನೀಡಿದರು. ಪಂಚಮಸಾಲಿ ಸಮುದಾಯಕ್ಕೆ ನ್ಯಾಯ ಒದಗಿಸಲಿಲ್ಲ. ಈಗ ಮೀಸಲಾತಿ ನೀಡುವುದಕ್ಕೆ ಯಡಿಯೂರಪ್ಪ ಸಿದ್ಧರಿಲ್ಲ.

> **● ಪಂಚಮಸಾಲಿ ಸಮುದಾಯವನ್ನು '2ಎ'ಗೆ ಸೇರಿಸಿದರೆ ತಮಗೆ ಅನ್ಯಾಯ ಆಗುತ್ತದೆ ಎಂಬ ಆತಂಕ ಸಣ್ಣ ಸಮುದಾಯಗಳಲ್ಲಿ ಇದೆಯಲ್ಲವೆ?**
> ಆ ರೀತಿ ಆತಂಕಪಡುವ ಅಗತ್ಯವಿಲ್ಲ. ನಾವು ಬೇರೆಯವರ ಪಾಲನ್ನು ಕಿತ್ತುಕೊಳ್ಳುವುದಿಲ್ಲ. ನಮ್ಮ ಸಮುದಾಯಕ್ಕೆ ನ್ಯಾಯ ಕೇಳುತ್ತಿದ್ದೇವೆ. '2ಎ' ಮೀಸಲಾತಿ ಪ್ರಮಾಣದ ಹೆಚ್ಚಿಸಬೇಕಾದರೆ ಆ ಹೋರಾಟದ ನೇತೃತ್ವ ವಹಿಸುವುದಕ್ಕೆ ನಾನು ಸಿದ್ಧನಿದ್ದೇನೆ.

● ಯಡಿಯೂರಪ್ಪ ಅವರಿಗೆ ಹಟ ಏಕೆ?
ಯಡಿಯೂರಪ್ಪ ಈಗ ಸಂಪೂರ್ಣವಾಗಿ ಪುತ್ರ ವ್ಯಾಮೋಹಕ್ಕೆ ಒಳಗಾಗಿದ್ದಾರೆ. ವಿಜಯೇಂದ್ರ ಅವರನ್ನು ಮುಂದಿನ ನಾಯಕ ಎಂದು ಬಿಂಬಿಸುತ್ತಿದ್ದಾರೆ. ವಿಜಯೇಂದ್ರ ಕೂಡ ಅದೇ ರೀತಿ ಬಿಂಬಿಸಿಕೊಳ್ಳುತ್ತಿದ್ದಾರೆ. ಪಂಚಮಸಾಲಿ ಸಮುದಾಯ ಲಿಂಗಾಯತರಲ್ಲೇ ಬಹುಸಂಖ್ಯಾತರು. ಈಗಲೂ ನಮ್ಮ ಸಮುದಾಯದ 26 ಶಾಸಕರಿದ್ದಾರೆ. ಮೀಸಲಾತಿ ನೀಡಿದರೆ ರಾಜಕೀಯ ಹಿಡಿತ ಕೈತಪ್ಪಿ, ಮಗನನ್ನು ಅಧಿಕಾರಕ್ಕೆ ತರುವುದು ಕಷ್ಟವಾಗಬಹುದು ಎಂಬ ಕಾರಣದಿಂದ ಯಡಿಯೂರಪ್ಪ ಈ ರೀತಿ ವರ್ತಿಸುತ್ತಿದ್ದಾರೆ.

● ಮೀಸಲಾತಿ ಹೋರಾಟವನ್ನು ಬಳಸಿಕೊಂಡು ಮುರುಗೇಶ ನಿರಾಣಿ ಮಂತ್ರಿಯಾದರು ಎಂಬ ಮಾತು ಇದೆಯಲ್ಲ?
ಯಾರಿಗೋ ಒಬ್ಬರಿಗೆ ಟಿಕೆಟ್ ಕೊಡಿಸಲು ಅಥವಾ ಮಂತ್ರಿ ಸ್ಥಾನ ಕೊಡಿಸಲು ಹೋರಾಟ ನಡೆಯುತ್ತಿಲ್ಲ. ಮಂತ್ರಿ ಆದ ಬಳಿಕ ಹೋರಾಟ ಬೇಡ ಎಂದು ಹೇಳಿರುವುದು ನಿಜ. ಆದರೆ, ಅವರ ಮಾತಿಗೆ ಬೆಲೆ ಸಿಕ್ಕಿಲ್ಲ. ಸಚಿವರಾದ ನಿರಾಣಿ ಮತ್ತು ಸಿ.ಸಿ. ಪಾಟೀಲ ಈಗ ಸಮುದಾಯದ ಜತೆ ಇಲ್ಲ, ಸರ್ಕಾರದ ಜತೆ ಇದ್ದಾರೆ. ಅವರಿಬ್ಬರನ್ನೂ ಬಳಸಿಕೊಂಡ ಯಡಿಯೂರಪ್ಪ ಹೋರಾಟ ಹತ್ತಿಕ್ಕಲು ಯತ್ನಿಸಿದ್ದೂ ನಿಜ.

● '2ಎ' ಮೀಸಲಾತಿ ನೀಡುವುದಕ್ಕೆ ಏನು ಅಡ್ಡಿಗಳಿವೆ?
ಯಾವ ತೊಡಕುಗಳೂ ಇಲ್ಲ. ದುರುದ್ದೇಶದಿಂದ ಕೇಂದ್ರದ ಕಡೆ ಕೈ ತೋರಿಸುತ್ತಿದ್ದಾರೆ. ಹಿಂದುಳಿದ ವರ್ಗಗಳ ಆಯೋಗದ ವರದಿ ಪಡೆಯದೆ, ಹಿಂದೆ ಬಣಜಿಗ ಲಿಂಗಾಯತರು, ಬಲಿಜರಿಗೆ ಮೀಸಲಾತಿ ನೀಡಿದ್ದಾರೆ. ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಮ್ಯಾದಾರ ಸಮುದಾಯಕ್ಕೂ ನೀಡಲಾಗಿದೆ. ಈಗಲೂ ರಾಜ್ಯ ಸರ್ಕಾರ ನಿರ್ಧರಿಸಿದರೆ ಮೀಸಲಾತಿ ನೀಡಬಹುದು.

● ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಕ್ರಮ ಕೈಗೊಳ್ಳುವ ಸಾಧ್ಯತೆ ಬಗ್ಗೆ ಏನು ಹೇಳುತ್ತೀರಿ?
ಯತ್ನಾಳ ಅವರು ಸಮುದಾಯದ ಪರ ಹೋರಾಟಕ್ಕೆ ಬಂದಿದ್ದಾರೆ. ಅವರಿಗೆ ಯಾವುದೇ ರೀತಿಯ ಅನ್ಯಾಯ ಆದರೂ ಪಂಚಮಸಾಲಿ ಸಮುದಾಯ ತಕ್ಕ ಪಾಠ ಕಲಿಸುತ್ತದೆ.

● ಕೂಡಲಸಂಗಮ ಮತ್ತು ಹರಿಹರ ಪೀಠಗಳ ನಡುವೆ ಒಡಕು ಮೂಡಿದೆಯೆ?
ಹಾಗೇನೂ ಇಲ್ಲ. ಎರಡೂ ಪೀಠಗಳ ಸ್ಥಾಪನೆಯ ಸಂದರ್ಭದಲ್ಲಿ ಭಿನ್ನಾಭಿಪ್ರಾಯ ಇತ್ತು. ಈಗ ಅಂಥದ್ದೇನೂ ಇಲ್ಲ. ಹರಿಹರ ಪೀಠದ ವಚನಾನಂದ ಸ್ವಾಮೀಜಿ ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ತಮ್ಮ ಸಂಪರ್ಕಗಳನ್ನು ಬಳಸಿಕೊಂಡು ಸರ್ಕಾರದ ಮನವೊಲಿಕೆ ಮಾಡುವುದಾಗಿ ತಿಳಿಸಿ ಅವರು ಭಾನುವಾರ ತೆರಳಿದ್ದಾರೆ.

● ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟ ಅಂತ್ಯಗೊಂಡಿದೆಯೆ?
ಲಿಂಗಾಯತ ಧರ್ಮ ಬಸವಣ್ಣನವರ ಕಾಲದಿಂದಲೂ ಇದೆ. ನಾವು, ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಸ್ಥಾನಮಾನಕ್ಕಾಗಿ ಹೋರಾಟ ನಡೆಸಿದ್ದೇವೆ. ಅದನ್ನು ತಪ್ಪಾಗಿ ಅರ್ಥೈಸಿದ್ದರಿಂದ ಕಾಂಗ್ರೆಸ್‌ಗೆ ರಾಜಕೀಯವಾಗಿ ನಷ್ಟವಾಯಿತು. ಆದರೆ, ಈ ಹೋರಾಟ ನಿಲ್ಲುವುದಿಲ್ಲ.

● ಅಂತಿಮವಾಗಿ ಸರ್ಕಾರಕ್ಕೆ ಏನು ಹೇಳುತ್ತೀರಿ?
ಮಾರ್ಚ್ 4ರೊಳಗೆ ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಮೀಸಲಾತಿ ನೀಡಲೇಬೇಕು. ತಪ್ಪಿದರೆ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದು ನಿಶ್ಚಿತ. ಯಡಿಯೂರಪ್ಪ ಅವರು ಸಮುದಾಯಕ್ಕೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ಪಂಚಮಸಾಲಿಗಳ ಋಣ ತೀರಿಸಬೇಕು.

'ಮೀಸಲಾತಿ ನೀಡಿದರೆ ಸಮುದಾಯದ ಮೇಲಿನ ರಾಜಕೀಯ ಹಿಡಿತ ಕೈತಪ್ಪುತ್ತದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪಂಚಮಸಾಲಿ ಸಮುದಾಯವನ್ನು ನಿರ್ಲಕ್ಷಿಸುತ್ತಿದ್ದಾರೆ' ಎಂದು ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಆರೋಪಿಸಿದ್ದಾರೆ. ಆದರೆ 'ನಮ್ಮ ಸರ್ಕಾರ ಯಾರನ್ನೂ ನಿರ್ಲಕ್ಷಿಸಿಲ್ಲ, ಸಂಯಮದ ಹೆಜ್ಜೆಯನ್ನಿಟ್ಟು ಎಲ್ಲರಿಗೂ ನ್ಯಾಯ ಒದಗಿಸುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ ವಿಜಯೇಂದ್ರ ಪ್ರತಿಪಾದಿಸಿದ್ದಾರೆ. ಈ ಇಬ್ಬರು ನಾಯಕರ ಜತೆ 'ಪ್ರಜಾವಾಣಿ' ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ...

ಪ್ರಜಾವಾಣಿ ಸಂದರ್ಶನ

ವಿಜಯಾನಂದ ಕಾಶಪ್ಪನವರ
ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ

ಬಿ.ವೈ ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ

ಮೀಸಲಾತಿ: ನಿರ್ಲಕ್ಷಿತ, ಅಸಂಘಟಿತ ಜಾತಿಗಳಿಗೂ ನ್ಯಾಯ

• ಎಸ್.ರವಿಪ್ರಕಾಶ್

● ಮೀಸಲಾತಿಯ ಜೇನುಗೂಡಿಗೆ ಕಲ್ಲು ಹೊಡೆದವರೇ ನಿಮ್ಮ ಸರ್ಕಾರದಲ್ಲಿರುವ ಕೆಲ ಮಂತ್ರಿಗಳು. 'ರಾಜಕೀಯ ಅಥವಾ ಬೇರೆ ಉದ್ದೇಶಕ್ಕಾಗಿ ಮಠಾಧೀಶರನ್ನು ಮುಂದೆ ಬಿಟ್ಟು ಹೋರಾಟ ಆರಂಭಿಸಿದರು' ಎಂಬ ಮಾತು ಕೇಳಿಬಂದಿದೆ. ಈಗ ಹೋರಾಟಗಳು ತೀವ್ರ ಸ್ವರೂಪ ಪಡೆದಿವೆ. ಸರ್ಕಾರ ಇಕ್ಕಟ್ಟಿಗೆ ಸಿಲುಕಿದೆಯೇ?
ಇಂತಹ ಸಮಸ್ಯೆ ಮತ್ತು ಸಂಕಷ್ಟದ ಪರಿಸ್ಥಿತಿ ಎದುರಿಸಿದ ಅನುಭವ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗಿದೆ. ರಾಜ್ಯದ ಜನತೆಗೂ ಮುಖ್ಯಮಂತ್ರಿಯವರ ಮೇಲೆ ಭರವಸೆ ಇದೆ. ನೈಜ ಕಾಳಜಿಯುಳ್ಳ ಹೋರಾಟಕ್ಕೆ ಸ್ಪಂದಿಸುವ ತಂತ್ರಗಾರಿಕೆಯೂ ಗೊತ್ತಿದೆ. ಕುತಂತ್ರ ರಾಜಕೀಯಗಳಿಗೆ ಮಣಿಯುವುದಿಲ್ಲ. ಅಂತಹ ರಾಜಕಾರಣ ಮಾಡುವುದೂ ಇಲ್ಲ. ನೇರ, ಪಾರದರ್ಶಕ ನಡೆ ಸರ್ಕಾರದ್ದು.

● ಬಿಜೆಪಿಯಲ್ಲಿ ಈವರೆಗೆ ಬಹಿರಂಗವಾಗಿ ಜಾತಿಯನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಿದ್ದಿಲ್ಲ. ಆದರೆ, ಈ ಅವಧಿಯಲ್ಲಿ ಕೆಲವರು ಜಾತಿಯನ್ನು ದಾಳವಾಗಿ ಬಳಸುತ್ತಿದ್ದಾರೆ, ಮೀಸಲಾತಿಯನ್ನು ಅದಕ್ಕೆ ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಭಾವನೆ ಮೂಡಿದೆಯಲ್ಲ?
ರಾಜ್ಯದ ಜನರು ಪ್ರಜ್ಞಾವಂತರು. ಸಾಮಾಜಿಕ ನ್ಯಾಯದ ಪರವಾಗಿ ಮತ್ತು ತಮ್ಮ ಹಕ್ಕನ್ನು ಪಡೆಯುವ ಸಲುವಾಗಿ ಹೋರಾಟ ನಡೆದರೆ ಸ್ವಾಗತಾರ್ಹ. ಆದರೆ, ಅದನ್ನು ರಾಜಕೀಯ ದಾಳವಾಗಿ ಉಪಯೋಗಿಸುವ ಪರಿಸ್ಥಿತಿ ನೀವು ಹೇಳುವ ರೀತಿಯಲ್ಲಿ ಇದ್ದರೆ ಜನರು ಕ್ಷಮಿಸುವುದಿಲ್ಲ. ಬಿಜೆಪಿ ರಾಷ್ಟ್ರೀಯತೆಯಲ್ಲಿ ನಂಬಿಕೆ ಇರುವ ಪಕ್ಷ. ನಮ್ಮ ಪಕ್ಷದಲ್ಲಿ ಜಾತಿಯ ಹೆಸರಿನಲ್ಲಿ ರಾಜಕಾರಣ ಮಾಡಲು ಅವಕಾಶವೇ ಇಲ್ಲ. ಜಾತಿ, ಧರ್ಮಗಳನ್ನು ಎತ್ತಿಕಟ್ಟಿ, ಸಮಾಜ ಒಡೆಯುವ ಸಂಸ್ಕೃತಿಯನ್ನು ಜನರು ಒಪ್ಪುವುದಿಲ್ಲ.

● ದೊಡ್ಡ ಸಮುದಾಯಗಳು ಮೀಸಲಾತಿಗಾಗಿ ಬೀದಿಗಿಳಿದ ಬೆನ್ನಲ್ಲೇ, ಸಣ್ಣ- ಪುಟ್ಟ ಸಮುದಾಯಗಳೂ ಅದೇ ಹಾದಿಯನ್ನು ಹಿಡಿದಿವೆ. ಎಲ್ಲ ಸಮುದಾಯಗಳಿಗೂ ನ್ಯಾಯ ಒದಗಿಸುವುದಾಗಿ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅದು ಹೇಗೆ ಸಾಧ್ಯ?
'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ತತ್ವದಲ್ಲಿ ಮುಖ್ಯಮಂತ್ರಿಯವರು ನಂಬಿಕೆ ಇಟ್ಟಿದ್ದಾರೆ. ಎಲ್ಲ ಸಣ್ಣ-ಪುಟ್ಟ ಹಿಂದುಳಿದ ಸಮುದಾಯಗಳನ್ನು ಹೇಗೆ ಒಟ್ಟಿಗೆ ಕೊಂಡೊಯ್ಯಬಹುದು ಎಂಬುದಕ್ಕೆ ಬಸವಣ್ಣನವರೇ ಸ್ಫೂರ್ತಿ. ಸಣ್ಣ-ಪುಟ್ಟ ಸಮುದಾಯಗಳಿಗೂ ಎಳ್ಳಷ್ಟೂ ಅನ್ಯಾಯ ಆಗದ ರೀತಿಯಲ್ಲಿ ಮತ್ತು ಆರ್ಥಿಕ ದುರ್ಬಲರಿಗೂ ನ್ಯಾಯ ಒದಗಿಸುವ ಸೂತ್ರವನ್ನು ರೂಪಿಸುವ ಸಾಮರ್ಥ್ಯ ಸರ್ಕಾರಕ್ಕಿದೆ.

● ತಮ್ಮದೇ ಆದ ಮಠಾಧೀಶರಾಗಲಿ, ನಾಯಕರನ್ನಾಗಲಿ ಹೊಂದಿಲ್ಲದ, ತೀರಾ ಹಿಂದುಳಿದ ಎಷ್ಟೋ ಸಣ್ಣ-ಪುಟ್ಟ ಜಾತಿಗಳಿವೆ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜಾತಿಗಳ ಮಠಾಧೀಶರು, ರಾಜಕೀಯ ನಾಯಕರ ಬ್ಲ್ಯಾಕ್‌ಮೇಲ್ ತಂತ್ರಗಳಿಗೆ ಸರ್ಕಾರ ಸೊಪ್ಪು ಹಾಕಿದರೆ, ಸಣ್ಣ ಪುಟ್ಟ ಸಮುದಾಯಗಳ ಪಾಡೇನು?
ಸಮಾಜದ ಕಟ್ಟ ಕಡೆಯ ಪ್ರಜೆಗೂ ಅನ್ಯಾಯ ಆಗದ ರೀತಿಯಲ್ಲಿ ಸಾಮಾಜಿಕ ನ್ಯಾಯ ಒದಗಿಸುವ ಬದ್ಧತೆ ಸರ್ಕಾರದ್ದು. ಪಕ್ಷದ ಸಿದ್ಧಾಂತವೂ ಅದನ್ನೇ ಹೇಳುತ್ತದೆ. ಧ್ವನಿ ಇಲ್ಲದವರ ಪರವಾಗಿ ಹೋರಾಟ ಮಾಡಿಕೊಂಡು ಬಂದ ಕಾರಣದಿಂದಲೇ ಯಡಿಯೂರಪ್ಪ ಅವರನ್ನು 'ಬೆವರಿನಿಂದ ಬಂದ ಬಂಗಾರದ ಮನುಷ್ಯ' ಎಂದು ಜನತೆ ಪರಿಗಣಿಸಿದ್ದಾರೆ. ನಾವು ನಿರ್ಗತಿಕರು ಮತ್ತು ಧ್ವನಿ ಇಲ್ಲದವರ ಪರ. ಆದ್ದರಿಂದ, ಯಾವುದೇ ಅಸಂಘಟಿತ ಸಮಾಜಕ್ಕೂ ಅನಾಥ ಪ್ರಜ್ಞೆ ಎದುರಾಗಲು ಅವಕಾಶ ಕೊಡುವುದಿಲ್ಲ.

● ಪಂಚಮಸಾಲಿಗಳು '2ಎ'ಗೆ ಬೇಡಿಕೆ ಇಟ್ಟಿದ್ದಾರೆ. ವಾಲ್ಮೀಕಿಗಳು ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಹೆಚ್ಚಿಸಬೇಕು ಎಂದು ಹೋರಾಟ ಮಾಡುತ್ತಿದ್ದಾರೆ. ಕುರುಬ ಸಮುದಾಯ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಬೀದಿಗಿಳಿದಿದ್ದಾರೆ. ಕುರುಬರನ್ನು ಎಸ್‌ಟಿಗೆ ಸೇರಿಸಲು ಕೆಲವು ಜಾತಿಗಳು ವಿರೋಧಿಸುತ್ತಿವೆ. ಇದು ಜಾತಿ ಕಲಹಕ್ಕೆ ಕಾರಣವಾಗದೇ?
ಸಂವಿಧಾನದ ಚೌಕಟ್ಟನಲ್ಲಿ ಮೀಸಲಾತಿ ವಿಚಾರ ಪರಿಶೀಲಿಸಬೇಕಾಗುತ್ತದೆ. ಸರ್ಕಾರ ಬೇಕಾಬಿಟ್ಟಿ ಮೀಸಲಾತಿ ಹಂಚಲು ಸಾಧ್ಯವಿಲ್ಲ ಎಂಬುದು ಹೋರಾಟ ನಡೆಸುತ್ತಿರುವವರಿಗೂ ತಿಳಿಯದ ಸಂಗತಿಯೇನಲ್ಲ. ಸಂವಿಧಾನದ ಚೌಕಟ್ಟಿನಲ್ಲಿಯೇ, ಎಲ್ಲಾ ಸಮುದಾಯಗಳ ಬೇಡಿಕೆಗಳ ಈಡೇರಿಕೆಗೆ ಲಭ್ಯವಿರುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳಲಾಗುವುದು.

● ಕೇಂದ್ರ ಸರ್ಕಾರದ ಒಬಿಸಿ ಪಟ್ಟಿಗೆ ವೀರಶೈವ-ಲಿಂಗಾಯತ ಸಮುದಾಯದ ಎಲ್ಲಾ ಉಪಜಾತಿಗಳನ್ನು ಸೇರಿಸಬೇಕು ಎಂಬ ಮಠಾಧೀಶರ ಹೊಸ ಬೇಡಿಕೆಯು ಲಿಂಗಾಯತ ಪಂಚಮಸಾಲಿಗಳ ಹೋರಾಟವನ್ನು ದುರ್ಬಲಗೊಳಿಸಲು ಹುಟ್ಟು ಹಾಕಿದ್ದು, ಇದರ ಹಿಂದೆ ನೀವೇ ಇದ್ದೀರಿ ಎಂಬ ಮಾತೂ ಕೇಳಿ ಬರುತ್ತಿದೆ?
ವೀರಶೈವ ಲಿಂಗಾಯತ ಸಮುದಾಯದ ವ್ಯಾಪ್ತಿಯಲ್ಲೇ ಪಂಚಮಸಾಲಿ ಸಮುದಾಯ ಬರುತ್ತದೆ. ಪಂಚಮಸಾಲಿ ಸಮುದಾಯದ ಹೋರಾಟವು ಕರ್ನಾಟಕ ಸರ್ಕಾರದ ಮೀಸಲಾತಿ ನೀತಿಗೆ ಸಂಬಂಧಿಸಿದ ಬೇಡಿಕೆ. ವೀರಶೈವ ಲಿಂಗಾಯತ ಸಮುದಾಯದ ಬೇಡಿಕೆ ಕೇಂದ್ರದ ಒಬಿಸಿ ಪಟ್ಟಿಗೆ ಸೇರಬೇಕು ಎಂಬುದಾಗಿದೆ. ಈ ಬೇಡಿಕೆಗೂ ಪಂಚಮಸಾಲಿ ಸಮುದಾಯ ಕೇಳುತ್ತಿರುವ ಬೇಡಿಕೆಗೂ ವ್ಯತ್ಯಾಸವಿಲ್ಲ. ಆದರೆ, ಈ ಬೇಡಿಕೆಗಳಿಗೆ ಸಂವಿಧಾನ ಮತ್ತು ನ್ಯಾಯಾಲಯಗಳ ಈ ಹಿಂದಿನ ತೀರ್ಪುಗಳ ಹಿನ್ನೆಲೆಯಲ್ಲಿ ಪರಿಹಾರ ಕಂಡುಕೊಳ್ಳಬೇಕಿದೆ. ಸಂಯಮದಿಂದ, ಎಚ್ಚರಿಕೆಯ ಹೆಜ್ಜೆ ಇಡುವುದು ಸರ್ಕಾರದ ಬದ್ಧತೆಯಾಗಿದೆ. ಹೋರಾಟವನ್ನು ಹತ್ತಿಕ್ಕುವ ಉದ್ದೇಶ ಸರ್ಕಾರಕ್ಕಾಗಲಿ, ಯಡಿಯೂರಪ್ಪ ಅವರಿಗಾಗಲಿ ಇಲ್ಲ.

● ಮೀಸಲಾತಿ ಕುರಿತ ರಾಜ್ಯದ ಜವಾಬ್ದಾರಿಯನ್ನು ಕೇಂದ್ರದ ಹೆಗಲಿಗೆ ಜಾರಿಸುವ ಉದ್ದೇಶವೂ ಇದರ ಹಿಂದೆ ಇದೆಯೇ?
ಹಾಗೇನೂ ಇಲ್ಲ, ಸಮಸ್ಯೆಗಳಿಗೆ ಬೆನ್ನು ತಿರುಗಿಸುವುದು, ಜವಾಬ್ದಾರಿಗಳಿಂದ ನುಣುಚಿಕೊಂಡು ಪಲಾಯನ ಮಾಡುವ ಸಂಸ್ಕೃತಿ ನಮ್ಮದಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರ ನಮ್ಮದೇ ಆಗಿರುವಾಗ, ನಮ್ಮ ಹೊಣೆಗಾರಿಕೆ ಕೇಂದ್ರದ ಹೆಗಲಿಗೆ ದಾಟಿಸುವ ಮಾತು ಹಾಸ್ಯಾಸ್ಪದ ಎನಿಸುತ್ತದೆ. ಈ ನಿಟ್ಟಿನಲ್ಲಿ ಕೇಂದ್ರದಿಂದ ಸಿಗಬಹುದಾದ ಸಹಕಾರ ಪಡೆದು ಸಮನ್ವಯತೆಯಿಂದ ಪರಿಹಾರ ಕಂಡುಕೊಳ್ಳುತ್ತೇವೆ.

ಸಂವಿಧಾನದ ಆಶಯಗಳ ಅಣಕ

'ನಿಕೃಷ್ಟವಾಗಿ ಬದುಕು ಸಾಗಿಸುತ್ತಿರುವ ಅನೇಕ ಜಾತಿಗಳು ಸಮಾಜದಲ್ಲಿವೆ. ಇಂತಹ ಜಾತಿಗಳನ್ನು ಒಗ್ಗೂಡಿಸಿ ಮೇಲಕ್ಕೆ ತರುವ ಪ್ರಯತ್ನ ನಡೆಯುತ್ತಿಲ್ಲ. ಸೌಲಭ್ಯ ಪಡೆಯಲು ಸ್ವಾರ್ಥ ಬೆಳೆಯುತ್ತಿದೆ. ಇದು ನಿಜಕ್ಕೂ ಸಂವಿಧಾನದ ಆಶಯಗಳ ಅಣಕ.

'ಸಾಂವಿಧಾನಿಕವಾಗಿ ಸವಲತ್ತು ಕೇಳುವುದು ತಪ್ಪಲ್ಲ. ಆದರೆ, ಪ್ರತಿನಿತ್ಯ ಅವಮಾನ ಅನುಭವಿಸುತ್ತಿರುವ, ದೌರ್ಜನ್ಯಕ್ಕೆ ಒಳಗಾಗುತ್ತಿರುವ ಸಮುದಾಯಕ್ಕೆ ಸುಸ್ಥಿರ ಬದುಕು ಕಲ್ಪಿಸುವ ಹೊಣೆಗಾರಿಕೆ ಇಡೀ ಸಮಾಜದ ಮೇಲಿದೆ.

'ಬಲಾಢ್ಯರು ಸೌಲಭ್ಯ ಕೇಳುತ್ತಿರುವುದರಿಂದ ಕಳವಳ ಆಗಿಲ್ಲ. ಆಳುವ ಸರ್ಕಾರ ಸಂವಿಧಾನದ ಆಶಯ ಈಡೇರಿಸುವಲ್ಲಿ ತಳಸಮುದಾಯಗಳಿಗೂ ನ್ಯಾಯ ದೊರಕಿಸಿ ಕೊಡಬೇಕು. ಅನ್ನ ಇಲ್ಲದವರತ್ತ, ಹಸಿದವರತ್ತ ಗಮನ ಕೊಡಬೇಕು. ಅನ್ನ, ಬದುಕು ಕಸಿಯುವ ಕೆಲಸ ಮಾಡಬಾರದು. ಸರ್ಕಾರ ಗಟ್ಟಿ ನಿಲುವು ತಳೆದು ಶೋಷಿತ ಸಮುದಾಯಗಳಿಗೆ ನ್ಯಾಯ ನೀಡಬೇಕು. ಅಸ್ಪೃಶ್ಯ ಜಾತಿಗಳಿಗೆ ಸರಿಯಾದ ಮೀಸಲಾತಿ ನೀಡಬೇಕು'.

ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ,
ಆದಿಜಾಂಬವ ಮಠ, ಹಿರಿಯೂರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮಂಗಳ ಗ್ರಹಕ್ಕೆ ನಾಸಾ ಕಳುಹಿಸಿರುವ ಪರ್ಸಿವಿಯರೆನ್ಸ್ ರೋವರ್ ನೌಕೆಯು, ಮಂಗಳ ಗ್ರಹದ ಮೇಲ್ಮೈನ ವಿಡಿಯೊವನ್ನು ಕಳುಹಿಸಿದೆ ಎಂಬ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ. ರೋವರ್‌ನಂತಹ ನೌಕೆಯು ಮಂಗಳ ಗ್ರಹದ ಮೇಲ್ಮೈ ಅನ್ನು ಬಲದಿಂದ ಎಡಕ್ಕೆ ತಿರುಗಿ ನೋಡುವ ದೃಶ್ಯವು ಆ ವಿಡಿಯೊದಲ್ಲಿ ಇದೆ. ಜತೆಗೆ ಅಲ್ಲಿ ಜೋರಾಗಿ ಬೀಸುವ ಗಾಳಿಯ ಸದ್ದೂ ಆ ವಿಡಿಯೊದಲ್ಲಿ ಕೇಳುತ್ತದೆ. ಸಾವಿರಾರು ಕನ್ನಡಿಗರೂ ಈ ವಿಡಿಯವನ್ನು ಪೋಸ್ಟ್ ಮಾಡಿದ್ದಾರೆ. ಈ ವಿಡಿಯೊ ಮತ್ತು ಪೋಸ್ಟ್‌ಗಳು 10 ಲಕ್ಷಕ್ಕೂ ಹೆಚ್ಚು ಬಾರಿ ಷೇರ್ ಆಗಿವೆ.

ಆದರೆ, ಪರ್ಸಿವಿಯರೆನ್ಸ್ ನೌಕೆ ಕಳುಹಿಸಿರುವ ಯಾವುದೇ ವಿಡಿಯೊವನ್ನು ನಾಸಾ ಈವರೆಗೆ ಬಿಡುಗಡೆ ಮಾಡಿಲ್ಲ. ನಾಸಾ ಈ ಹಿಂದೆ ಮಂಗಳ ಗ್ರಹಕ್ಕೆ ಕಳುಹಿಸಿದ್ದ ಕ್ಯೂರಿಯಾಸಿಟಿ ರೋವರ್ ನೌಕೆಯು ಕಳುಹಿಸಿದ್ದ ವಿಡಿಯೊವನ್ನೇ, ಪರ್ಸಿವಿಯರೆನ್ಸ್ ನೌಕೆ ಕಳುಹಿಸಿರುವ ವಿಡಿಯೊ ಎಂದು ತಪ್ಪಾಗಿ ಹಂಚಿಕೊಳ್ಳಲಾಗಿದೆ. ಮೂಲ ವಿಡಿಯೊದಲ್ಲಿ ಯಾವುದೇ ಧ್ವನಿ ಇಲ್ಲ. ಅದನ್ನು ಬೇರೆ ಸದ್ದನ್ನು ಎಡಿಟ್ ಮಾಡಿ, ವಿಡಿಯೊಗೆ ಸೇರಿಸಲಾಗಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಒಂದೇ ಬಾರಿ ಮೂರು ಪರೀಕ್ಷೆಗಳು

ಮಹೋಷಧಕುಮಾರನಾದ ಬೋಧಿಸತ್ವನ ಪರೀಕ್ಷೆಯನ್ನು ಸೆನೆಕ ಮತ್ತು ಇತರ ಅಮಾತ್ಯರು ಮುಂದುವರಿಸಿಯೇ ಬಿಟ್ಟರು. ಹೇಗಾದರೂ ಮಾಡಿ ಮಹೋಷಧಕುಮಾರನನ್ನು ಸೋಲಿಸುವುದು ಅವರ ಉದ್ದೇಶ.

ಈ ಬಾರಿ ಒಂದು ಎತ್ತನ್ನು ಚೆನ್ನಾಗಿ ಮೇಯಿಸಿ, ಬಲಿಷ್ಠವನ್ನಾಗಿ ಮಾಡಿ, ಅದಕ್ಕೆ ಸಕಲ ಅಲಂಕಾರಗಳನ್ನು ಮಾಡಿದರು. ಕೊಂಬಿಗೆ ಬಣ್ಣ ಬಳಿದು. ಮೈಗೆಲ್ಲ ಅರಿಷಿಣದ ಬಣ್ಣ ಉಜ್ಜಿ, ಅದರ ಮೈಮೇಲೆ ರೇಶಿಮೆಯ ಬಟ್ಟೆಯನ್ನು ಹೊದಿಸಿ ದೂತರೊಂದಿಗೆ ಮಹೋಷಧಕುಮಾರನ ನಗರಕ್ಕೆ ಕಳುಹಿಸಿದರು. ದೂತರು ನಗರಕ್ಕೆ ಬಂದು ಸುತ್ತಾಡಿ, ನಗಾರಿ ಬಾರಿಸಿ ಘೋಷಣೆ ಮಾಡಿದರು. 'ಮಹಾರಾಜರು ಈ ನಗರದ ಪಂಡಿತರ ಬುದ್ಧಿಮತ್ತೆಯನ್ನು ಅಳೆಯುವುದಕ್ಕೆ ಮೂರು ಪರೀಕ್ಷೆಗಳನ್ನು ಒಡ್ಡಿದ್ದಾರೆ. ಸರಿಯಾದ ಉತ್ತರ ಹೇಳಿದರೆ ಬಹುಮಾನ. ಹೇಳದಿದ್ದರೆ ಪ್ರತಿ ಪರೀಕ್ಷೆಗೆ ಸಾವಿರದ ಹಣದಂತೆ ಮೂರು ಸಾವಿರ ದಂಡ ವಿಧಿಸಲಾಗುತ್ತದೆ'. ಮೊದಲನೆಯ ಪರೀಕ್ಷೆಯೆಂದರೆ ಒಂದು ದೊಡ್ಡ ಬಿದಿರಿನ ಬುಟ್ಟಿಯಲ್ಲಿ ಒಂದು ಸರ್ಪ ಮತ್ತು ಇನ್ನೊಂದರಲ್ಲಿ ಸರ್ಪಿಣಿ ಇದೆ. ಇದರಲ್ಲಿ ಸರ್ಪ ಯಾವುದು, ಸರ್ಪಿಣಿ ಯಾವುದು ಎಂಬುದನ್ನು ಕಂಡುಹಿಡಿಯಬೇಕು. ಎರಡನೆಯ ಪರೀಕ್ಷೆಯೆಂದರೆ ಈ ನಗರದವರು ರಾಜರಿಗೆ ಸಂಪೂರ್ಣವಾಗಿ ಬೆಳ್ಳಗಿರುವ, ಕಾಲುಗಳಲ್ಲಿ ಕೊಂಬು ಇರುವ, ತಲೆಯ ಮೇಲೆ ಡುಬ್ಬ ಇರುವ, ನಿಯತವಾಗಿ ಕೂಗಿ ಎಚ್ಚರಿಸುವ ಒಂದು ಎತ್ತನ್ನು ಕಳುಹಿಸಬೇಕು. ಮೂರನೆಯ ಪರೀಕ್ಷೆಯೆಂದರೆ ನಮ್ಮ ಜೊತೆಗೆ ಬಂದ ಮಂಗಲ ಎತ್ತಿಗೆ ಗರ್ಭ ಕಟ್ಟಿದೆ. ಅದನ್ನು ಈಯಿಸಿ ಕರುವಿನೊಂದಿಗೆ ಕಳುಹಿಸಬೇಕು.

ನಗರದ ಪಂಡಿತರು ಪ್ರಶ್ನೆಗಳನ್ನು ತಿಳಿಯಲಾರದೆ ಗಾಬರಿಯಿಂದ ಮಹೋಷಧಕುಮಾರನ ಬಳಿಗೆ ಬಂದು ಪರಿಹಾರ ಕೇಳಿದರು. ಆತ ನಿಧಾನವಾಗಿ ಸಮಸ್ಯೆಗಳನ್ನು ಕುರಿತು ಚಿಂತಿಸಿ ಒಂದೊಂದಾಗಿ ಪರಿಹಾರಗಳನ್ನು ಹೇಳಿದ. ಸರ್ಪದ ಬಾಲ ದಪ್ಪಗಿರುತ್ತದೆ, ಸರ್ಪಿಣಿಯ ಬಾಲ ತೆಳುವಾದದ್ದು. ಸರ್ಪದ ತಲೆ ದಪ್ಪ, ಸರ್ಪಿಣಿಯದು ಉದ್ದ. ಸರ್ಪದ ಕಣ್ಣುಗಳು ಸರ್ಪಿಣಿಯ ಕಣ್ಣುಗಳಿಗಿಂತ ದಪ್ಪಗಿರುತ್ತದೆ. ಸರ್ಪದ ಹೆಡೆಯ ಸ್ವಸ್ತಿಕ ಬಿಗಿಯಾಗಿದ್ದರೆ, ಸರ್ಪಿಣಿಯ ಸ್ವಸ್ತಿಕ ಹೆಡೆಯ ತುಂಬ ಹರಡಿಕೊಂಡಿರುತ್ತದೆ.

ರಾಜ ಹೇಳಿದ್ದು ಎತ್ತು ಅಲ್ಲ, ಆ ಪ್ರಾಣಿಯನ್ನು ಎತ್ತಿಕೊಂಡು ಬನ್ನಿ ಎಂದರ್ಥ. ಅದು ಸಂಪೂರ್ಣ ಬೆಳ್ಳಗಿರುವ ಹುಂಜ. ಅದರ ಕಾಲಿನಲ್ಲಿ ಉಗುರು ಇದೆ, ಅದನ್ನೇ ಕೊಂಬು ಎಂದಿದ್ದಾನೆ. ತಲೆಯ ಮೇಲಿನ ಪುಕ್ಕದ ಸ್ಥಳ ಸ್ವಲ್ಪ ಮೇಲೆದ್ದಿರುವುದರಿಂದ ಅದನ್ನು ಡುಬ್ಬ ಎನ್ನುತ್ತಾರೆ. ಈ ಹುಂಜ ಮಾತ್ರ ನಿಯತವಾಗಿ ಕೂಗಿ ಜನರನ್ನು ಎಬ್ಬಿಸುತ್ತದೆ. ಆದ್ದರಿಂದ ರಾಜನಿಗೊಂದು ಬಿಳಿ ಹುಂಜವನ್ನು ಕಳುಹಿಸಿ ಎಂದ. ಇನ್ನು ಮೂರನೆಯ ಪರೀಕ್ಷೆ, ಎತ್ತಿಗೆ ಹೆರಿಗೆ ಮಾಡಿಸುವುದು. ಮಹೋಷಧಕುಮಾರ ಒಬ್ಬ ತರುಣ ನಟನನ್ನು ತಯಾರು ಮಾಡಿದ. ಅವನಿಗೆ 'ನೀನು ನಿನ್ನ ತಲೆಗೂದಲುಗಳನ್ನು ಹೆಗಲಮೇಲೆ ಹರಡಿಕೊಂಡು ಜೋರಾಗಿ ಅಳುತ್ತ ರಾಜನ ದರ್ಬಾರಿಗೆ ಹೋಗು. ಅಯ್ಯೋ, ನನ್ನ ತಂದೆ ಏಳು ದಿನಗಳಿಂದ ಒದ್ದಾಡುತ್ತಿದ್ದಾನೆ, ಹೆರಿಗೆಯಾಗುತ್ತಿಲ್ಲ. ದಯವಿಟ್ಟು ನಿಮ್ಮ ಅರಮನೆಯ ಸೂಲಗಿತ್ತಿಯನ್ನು ಕಳುಹಿಸಿಕೊಡಿ' ಎಂದು ಬೇಡಿಕೋ. ಆಗ ರಾಜ ಮತ್ತು ದರ್ಬಾರಿನವರು ಹಾಸ್ಯಮಾಡಿ, 'ಗಂಡಸು ಗರ್ಭಧರಿಸುವುದು, ಹಡೆಯುವುದು ಸಾಧ್ಯವೇ?' ಎನ್ನುತ್ತಾರೆ. ಆಗ ನೀನು, 'ತಾವು ಕಳುಹಿಸಿದ ಮಂಗಲ ಎತ್ತು ಗರ್ಭಧರಿಸುವುದಾದರೆ ನನ್ನ ತಂದೆಗೆ ಯಾಕೆ ಸಾಧ್ಯವಿಲ್ಲ?' ಎಂದು ಕೇಳು ಎಂದು ಬೋಧಿಸಿದ. ಕುಮಾರನು ಹೇಳಿದಂತೆಯೇ ನಡೆದು, ಮೂರೂ ಪರೀಕ್ಷೆಗಳಲ್ಲಿ ಅವರು ಗೆದ್ದದ್ದನ್ನು ಕಂಡು ರಾಜನಿಗೆ ಬಹಳ ಸಂತೋಷವಾಯಿತು. ದರ್ಬಾರಿನ ಜನರೆಲ್ಲ ಮಹೋಷಧಕುಮಾರನ ಜ್ಞಾನವನ್ನು ಸೂಕ್ಷ್ಮಜ್ಞತೆಯನ್ನು ಕೊಂಡಾಡಿದರು. ಅಮಾತ್ಯರ ಮುಖಗಳು ಪೆಚ್ಚಾದವು. ❖

ಗುಂಡಣ್ಣ

ದಿನ ಭವಿಷ್ಯ

ಮಂಗಳವಾರ 23 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ಏಕಾದಶೀ ಗಂ. 20-45 (ಹ. 3-04) ಮಂಗಳವಾರ ನಿತ್ಯ ನಕ್ಷತ್ರ ಆರ್ದ್ರೆ ಗಂ 7-56 (ಬೆ. 9-56) ಆಯುಃ ನಾಮ ಯೋಗ ಗಂ 49-24 ಭದ್ರೆ ಕರಣ ಗಂ 20-45 ವಿಷ. ಗಂ. 39-21 ಅಮೃತಾಭಾವಃ : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-44 ಸೂರ್ಯಾಸ್ತ: 6-23 ಅದೃಷ್ಟ ಸಂಖ್ಯೆ 3 4

ಮೇಷ: ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಹಾರಗಳಲ್ಲಿ ತೊಡಗಿಕೊಂಡವರಿಗೆ ನಿರೀಕ್ಷಿತವಾದ ಕಾರ್ಯ ಸಿದ್ಧಿಯಾಗಿ ಲಾಭ ದೊರಕಲಿದೆ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕಲಿದೆ. ಆರೋಗ್ಯದಲ್ಲಿ ಸುಧಾರಣೆ.

ವೃಷಭ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷಿತ ಕೆಲಸಗಳು ಉತ್ತಮ ಫಲ ನೀಡುವುದರೊಂದಿಗೆ ಹಣಕಾಸಿನ ಅನುಕೂಲತೆಗಳು ದೊರಕಲಿದೆ. ಶುಭದ ಆಶಾಕಿರಣ ಮೂಡಿಬರಲಿದೆ. ಬಂಧುಗಳಿಂದ ಉತ್ತಮ ಸಹಕಾರ ದೊರಕಲಿದೆ.

ಮಿಥುನ: ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಪ್ರಗತಿ ನಿರೀಕ್ಷಿಸಬಹುದು. ಭವಿಷ್ಯಕ್ಕೆ ಸಂಬಂಧಿಸಿದ ಹಲವಾರು ಉತ್ತಮ ಮಾರ್ಗಗಳು ಗೋಚರ. ದೀರ್ಘಕಾಲದಿಂದ ಚಿಂತಿಸುತ್ತಿರುವ ಕಾರ್ಯವೊಂದು ಕಾರ್ಯರೂಪಕ್ಕೆ ಬರಲಿದೆ.

ಕರ್ಕಾಟಕ: ಬ್ಯಾಂಕ್, ಸಹಕಾರ ಕ್ಷೇತ್ರಗಳಲ್ಲಿ ದುಡಿಯುವವರಿಗೆ ಉತ್ತಮ ಸಹಕಾರ ದೊರಕಲಿದೆ. ಕಾರ್ಯಕ್ಷೇತ್ರದಲ್ಲಿ ಅನಿರೀಕ್ಷಿತ ಪ್ರಶಂಸೆಗಳು ನಿಮ್ಮ ಪಾಲಿಗೆ ಬರಲಿವೆ. ಮಹಿಳೆಯರ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಯ.

ಸಿಂಹ: ಹೊಸದಾಗಿ ಆರಂಭಿಸುವ ಕೆಲಸ ಕಾರ್ಯಗಳು ನಿರ್ವಿಘ್ನದಾಯಕವಾಗಿ ನಡೆಯಲಿದ್ದು ಉತ್ತಮ ಫಲಿತಾಂಶ ನೀಡಲಿದೆ. ವಿದ್ಯಾರ್ಥಿಗಳಿಗೆ ಅದೃಷ್ಟ ಒಲಿದು ಬರಲಿದೆ. ಮನೋರಂಜನೆಗಾಗಿ ಹೆಚ್ಚಿನವೆಚ್ಚ ಭರಿಸಬೇಕಾದೀತು.

ಕನ್ಯಾ: ವ್ಯಾಪಾರದಲ್ಲಿ ಲಾಭ ಹೊಂದಲಿದ್ದೀರಿ. ಮನಸ್ಸಿಗೆ ನೆಮ್ಮದಿ. ಕೆಲಸ ಕಾರ್ಯಗಳಲ್ಲಿ ಮುನ್ನಡೆ ಹಾಗೂ ಯಶಸ್ಸು ನಿಮ್ಮದಾಗಲಿದೆ. ಆರ್ಥಿಕ ಸಂಪನ್ಮೂಲಗಳನ್ನು ಹುಡುಕುವ ಭರದಲ್ಲಿ ಎಚ್ಚರಿಕೆಯ ನಡೆ ಅಗತ್ಯ.

ತುಲಾ: ನಿಮ್ಮ ಪಾಲಿನ ಕೆಲಸ ಕಾರ್ಯಗಳು ಸರಾಗವಾಗಿ ನಿರ್ವಹಣೆಯಾಗಲಿದೆ. ದೂರದೂರುಗಳಿಗೆ ಪ್ರಯಾಣ ಸಾಧ್ಯತೆ. ವಾಹನ ಚಾಲನೆಯಲ್ಲಿ ಎಚ್ಚರ ವಹಿಸಿ. ಮಕ್ಕಳ ನಡವಳಿಕೆಗಳ ಬಗ್ಗೆ ಗಮನ ಅಗತ್ಯ ಎನಿಸುತ್ತಿದೆ.

ವೃಶ್ಚಿಕ: ಆರ್ಥಿಕ ಸ್ಥಿರತೆಯಿಂದಾಗಿ ನೆಮ್ಮದಿ. ನೆರೆಹೊರೆಯವರೊಂದಿಗೆ ಮಧುರ ಬಾಂಧವ್ಯ. ವಿದೇಶದಲ್ಲಿರುವ ಕುಟುಂಬದಿಂದ ಸುವಾರ್ತೆ. ಮಾತೃವರ್ಗದವರ ಸಮಾಗಮ.

ಧನು: ವೈವಾಹಿಕ ವ್ಯವಹಾರಗಳಲ್ಲಿ ಬಂಧು ಮನ್ನಣೆ ದೊರಕಲಿದೆ. ವೈಯಕ್ತಿಕ ಬದುಕಿನಲ್ಲಿ ಹಿತಕರ ಬದಲಾವಣೆ ಕಂಡುಬರಲಿದೆ. ಸಾಮಾಜಿಕ ಬದುಕು ಸರಾಗ. ವಿದ್ಯಾರ್ಥಿಗಳಿಗೆ ಹುಮ್ಮಸ್ಸು ತರುವಂತಹ ವಾತಾವರಣ ಮೂಡಲಿದೆ.

ಮಕರ: ಉದ್ಯೋಗದಲ್ಲಿ ಒಳ್ಳೆಯ ಹೆಸರು. ದೂರದ ಊರಿಗೆ ವರ್ಗಾವಣೆ ಸಾಧ್ಯತೆ. ಮನೆ ನಿರ್ಮಾಣಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಅಭಿವೃದ್ಧಿ ಕಂಡುಕೊಳ್ಳುವಿರಿ.

ಕುಂಭ: ರಚನಾತ್ಮಕ ಕಾರ್ಯಕ್ರಮಗಳಿಗೆ ವೆಚ್ಚ ಭರಿಸಬೇಕಾದೀತು. ಅಣ್ಣನ ಸಹಕಾರದಿಂದ ನೆಮ್ಮದಿ ಹೊಂದಲಿದ್ದೀರಿ. ಸ್ವತ್ತು ವ್ಯವಹಾರಗಳ ಬಗ್ಗೆ ಸೋದರರೊಡನೆ ಚರ್ಚೆ ಮಾಡಲಿದ್ದೀರಿ.

ಮೀನ: ಪುತ್ರ ಸಮಸ್ಯೆ ಪರಿಹಾರ ಮಾನಸಿಕ ಶಾಂತಿ ದೊರಕಲಿದೆ. ಧಾರ್ಮಿಕ ಕಾರ್ಯಕ್ರಮಗಳ ಸಂಭ್ರಮ. ಪ್ರಯಾಣದಲ್ಲಿ ಎಚ್ಚರ ಅಗತ್ಯ. ಮಹಿಳೆಯರ ಮಾನಸಿಕ ನೆಮ್ಮದಿ ಕದಡುವ ಪ್ರಸಂಗ ಎದುರಾದೀತು.

ನಿಮ್ಮ ಜನ್ಮದಿನ 23-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ಮದುವೆ ವಿಚಾರದಲ್ಲಿ ಸಾವಧಾನದಿಂದ ಮುಂದುವರಿಯುವಂತೆ ತಂದೆಯಿಂದ ಹಿತನುಡಿ ಪಡೆಯುವಿರಿ. ಮಕ್ಕಳ ಓದಿನ ಬಗ್ಗೆ ವಿಶೇಷ ಗಮನ ಕೊಡುವಿರಿ. ಬಂಧುಗಳ ವಿಚಾರದಲ್ಲಿ ಮೃದುಧೋರಣೆ ಉತ್ತಮ. ವಿದ್ಯುತ್ ಉಪಕರಣ ಮಾರಾಟಗಾರರಿಗೆ ಉತ್ತಮ ಆದಾಯ ತಂದುಕೊಡಲಿದೆ.

ಪದಬಂಧ 4517

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೃಷ್ಟಿದೋಷಕ್ಕಾಗಿ ಕಣ್ಣಿಗೆ ಹಾಕಿಕೊಳ್ಳುವ ಸಾಧನ (4)
3.ಭೋಜನ ಸಮಾರಂಭಕ್ಕೆ ಬೇಕಾದ ಸಾಮಗ್ರಿ (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ನಸುಕಿನಲ್ಲಿ ಬಿದ್ದ ಸ್ವಪ್ನವಿಲ್ಲಿ ನಿಜವಾಗಿದೆ (3)
10.ಮಾತೆ ತೋರಿದ ಪ್ರೀತಿ (3)
12.ಪಾದದ ಹತ್ತಿರವಿರುವ ದ್ರವ ರೂಪದ ಲೋಹ (4)
15.ವನದ ಬಳಿ ಬೀಸಿದ ಗಾಳಿ (3)
16.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
17.ನಡುವೆ ಸರ ಧರಿಸಿ ಮಾಡಿದ ವ್ಯಾಯಾಮ (4)

ಮೇಲಿಂದ ಕೆಳಕ್ಕೆ
1.ಬಣ್ಣ ಬಣ್ಣ ದಾರದಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
2.ತಿರುಗಿಸಿ ನೋಡಿದರೂ ಇದು ಬಂಗಾರ (3)
3.ಮುಂಗುಸಿ ಇಲ್ಲಿ ಉಲ್ಟಾ ನಿಂತಿದೆಯಲ್ಲಾ? (3)
4.ದಟ್ಟವಾಗಿ ಬೆಳೆದ ಗಿಡಗಳ ಗುಂಪು (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅತ್ಯಂತ ಚಲುವಾದುದು (5)
11.ತೆರ ನೀಡದಿರುವ ಪೆದ್ದ (3)
12.ಪಾಕದ ನಂತರ ಕುಡಿದಿರುವ ಷರಬತ್ತು (3)
13.ಹೋಮಕ್ಕೆ ಬೇಕಾಗುವ ಪುರಳೆ (3)
14.ಉದಾಹರಣೆ ನೀಡುವಾಗಿನ ತೃಷೆ (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

4516ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಐಹಿಕ 3.ಮಸ್ತಕ 5.ರವಿಕಿರಣ 6.ತಡ 8.ನಾಯಿ 9.ನಾರಿ 10.ಕರು 14.ನರಭಕ್ಷಕ 15.ಕಡಲು 16.ವಿಪತ್ತು

ಮೇಲಿಂದ ಕೆಳಕ್ಕೆ: 1.ಐರಾವತ 2.ಕರಡಿ 3.ಮಣಕ 4.ಕಸುಗಾಯಿ 7.ಡಬರಿ 8.ನಾಸ್ತಿಕ 9.ನಾಗರಿಕ 11.ರುಷುವತ್ತು 12.ಹೊನಲು 13.ಕುಕವಿ

ಸುಡೊಕು 4903

7	9	2		3			6	8
4					7	3		9
		3		9		1		7
		4					8	
	2							3
8							4	
	4			2		8		
			9					5
2		8		7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4902 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಷೇರುಪೇಟೆ ವಹಿವಾಟು 1145



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,982
ಇಂದಿನ ಅಂತ್ಯ	14,676
▼	306
ದಿನದ ಕನಿಷ್ಠ	14,635

ವಿನಿಮಯ ದರ

$ ಡಾಲರ್	72.49
£ ಪೌಂಡ್	101.4
€ ಯುರೊ	87.63
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1500 (1470)
ಸೋಯಾ (ರಿಫೈನ್ಡ್)	₹1160 (1150)
ಸೂರ್ಯಕಾಂತಿ (ರಿಫೈನ್ಡ್)	₹1500 (1480)
ಪಾಮೋಲಿನ್	₹1130 (1120)

ಏನಿದು ಷೇರುಪೇಟೆ ಸೂಚ್ಯಂಕ?

ಷೇರು ಮಾತು
ಶರತ್ ಎಂ.ಎಸ್.

ಪ್ರಾತಿನಿಧಿಕ ಚಿತ್ರ

ತರಕಾರಿ, ದಿನಸಿ ಮತ್ತಿತರ ವಸ್ತುಗಳನ್ನು ತರಲು, ಮಾರಾಟ ಮಾಡಲು ನಾವು ಹೇಗೆ ಮಾರುಕಟ್ಟೆಯನ್ನು ಅವಲಂಬಿಸಿದ್ದೇವೆಯೋ, ಅದೇ ರೀತಿ ಷೇರುಗಳನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಷೇರುಪೇಟೆ ಅನುವು ಮಾಡಿಕೊಡುತ್ತದೆ. ರಿಲಯನ್ಸ್, ಇನ್ಫೊಸಿಸ್, ಟಾಟಾ ಮೋಟರ್ಸ್ ಅಥವಾ ಇನ್ಯಾವುದೇ ಕಂಪನಿಯ ಷೇರು ಕೊಂಡು ವ್ಯವಹರಿಸಬೇಕಾದರೆ ಷೇರು ಮಾರುಕಟ್ಟೆ ಅದಕ್ಕೆ ಸಹಾಯ ಮಾಡುತ್ತದೆ. ಸರಳವಾಗಿ ಹೇಳುವುದಾದರೆ ಷೇರುಗಳನ್ನು ಕೊಳ್ಳುವವರು ಮತ್ತು ಮಾರಾಟ ಮಾಡುವವರನ್ನು ಒಂದೇ ವೇದಿಕೆಗೆ ತರುವ ವ್ಯವಸ್ಥೆಯೇ ಷೇರುಪೇಟೆ.

ಭಾರತದಲ್ಲಿ ಪ್ರಮುಖವಾಗಿ ಎರಡು ಷೇರುಪೇಟೆಗಳಿವೆ. ಮುಂಬೈ ಷೇರುಪೇಟೆ (ಬಿಎಸ್‌ಇ) ಮತ್ತು ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ).

ಏನಿದು ಷೇರುಪೇಟೆ ಸೂಚ್ಯಂಕ?: 'ಬೆಂಗಳೂರಿನಲ್ಲಿ ಸದ್ಯದ ಸಂಚಾರ ದಟ್ಟಣೆ ಹೇಗಿದೆ' ಎಂದು ನಾನು ನಿಮ್ಮನ್ನು ಕೇಳಿದರೆ ಅದಕ್ಕೆ ನೀವು ಹೇಗೆ ಉತ್ತರಿಸುವಿರಿ? ನಗರದಲ್ಲಿ ಸಾವಿರಾರು ರಸ್ತೆಗಳಿವೆ. ಎಲ್ಲಾ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹೇಗಿದೆ ಎನ್ನುವುದನ್ನು ಪರಿಶೀಲಿಸಿ ಉತ್ತರ ಕಂಡುಕೊಳ್ಳುವುದು ಕಷ್ಟ. ಹೀಗಿರುವಾಗ ನಗರದ ಪ್ರಮುಖ ದಿಕ್ಕುಗಳ ಮುಖ್ಯ ರಸ್ತೆಗಳನ್ನು ಗಮನಿಸಿ ಸಂಚಾರ ದಟ್ಟಣೆ ಹೆಚ್ಚಿದೆಯೋ, ಕಡಿಮೆ ಇದೆಯೋ ಎನ್ನುವ ನಿರ್ಣಯಕ್ಕೆ ಬರುತ್ತೀರಿ.

ಇಲ್ಲಿ ಪ್ರಮುಖ ದಿಕ್ಕುಗಳ ಮುಖ್ಯ ರಸ್ತೆಗಳನ್ನು ನೀವು ಮಾನದಂಡವನ್ನಾಗಿ ಪರಿಗಣಿಸುತ್ತೀರಿ. ಇದನ್ನೇ ಆಧಾರವಾಗಿ ಇಟ್ಟುಕೊಂಡು, 'ಷೇರು ಮಾರುಕಟ್ಟೆ ಇಂದು ಹೇಗೆ ವರ್ತಿಸುತ್ತಿದೆ' ಎಂದು ನಾನು ನಿಮ್ಮನ್ನು ಪ್ರಶ್ನಿಸಿದರೆ ನೀವು ಹೇಗೆ ಉತ್ತರಿಸಬಹುದು? ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ಸುಮಾರು ಐದು ಸಾವಿರ ನೋಂದಾಯಿತ ಕಂಪನಿಗಳಿದ್ದು, ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಸಿ) ಸುಮಾರು ಎರಡು ಸಾವಿರ ನೋಂದಾಯಿತ ಕಂಪನಿಗಳಿವೆ. ಪ್ರತಿ ಕಂಪನಿಯ ಏರಿಳಿತ ಪರಿಶೀಲಿಸಿ ಉತ್ತರ ದಾಖಲಿಸುವುದು ಸವಾಲಿನ ಕೆಲಸ. ಹಾಗಾಗಿ ನೀವು ಪ್ರಮುಖ ವಲಯಗಳ (key Industrial Sectors) ಆಯ್ದ ಕಂಪನಿಗಳ ಸ್ಥಿತಿಗತಿ ತಿಳಿದು ಮಾರುಕಟ್ಟೆಯ ಏರಿಳಿತವನ್ನು ಕಂಡುಕೊಳ್ಳುತ್ತೀರಿ.

ಏರಿಕೆಯೂ ಇಲ್ಲ, ಇಳಿಕೆಯೂ ಇಲ್ಲ ಎಂದಾದಲ್ಲಿ 'ಮಾರುಕಟ್ಟೆ ಯಥಾಸ್ಥಿತಿಯಲ್ಲಿದೆ' ಎಂದು ಹೇಳುತ್ತೀರಿ. ಆಯ್ದ ಪ್ರಮುಖ ಕಂಪನಿಗಳ ಸ್ಥಿತಿಗತಿ ಆಧರಿಸಿ ಮಾರುಕಟ್ಟೆಯ ಏರಿಳಿತ ತಿಳಿಸುವ ವ್ಯವಸ್ಥೆಯನ್ನೇ ಷೇರುಪೇಟೆ ಸೂಚ್ಯಂಕ (ಮಾರ್ಕೆಟ್ ಇಂಡೆಕ್ಸ್) ಎಂದು ಕರೆಯುತ್ತಾರೆ.

ಪ್ರಮುಖ ಷೇರು ಮಾರುಕಟ್ಟೆ ಸೂಚ್ಯಂಕಗಳು

ಭಾರತದಲ್ಲಿ ಪ್ರಮುಖವಾಗಿ ಎರಡು ಸೂಚ್ಯಂಕಗಳಿವೆ. ಮುಂಬೈ ಷೇರುಪೇಟೆಯನ್ನು ಪ್ರತಿನಿಧಿಸುವ ಎಸ್ ಆ್ಯಂಡ್ ಪಿ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆಯನ್ನು ಪ್ರತಿನಿಧಿಸುವ ಸಿಎನ್‌ಎಕ್ಸ್ ನಿಫ್ಟಿ. 'ಸ್ಟ್ಯಾಂಡರ್ಡ್ ಆ್ಯಂಡ್ ಪೂರ್' ಎನ್ನುವುದು 'ಎಸ್ ಆ್ಯಂಡ್ ಪಿ'ಯ ವಿಸ್ತೃತ ರೂಪ. ಸ್ಟ್ಯಾಂಡರ್ಡ್ ಆ್ಯಂಡ್ ಪೂರ್ ಜಾಗತಿಕ ಮಟ್ಟದ ಒಂದು ಕ್ರೆಡಿಟ್ ರೇಟಿಂಗ್ ಏಜೆನ್ಸಿ. ಈ ಕಂಪನಿಗೆ ಸೂಚ್ಯಂಕಗಳ ರಚನೆಯಲ್ಲಿ ತಾಂತ್ರಿಕ ಪ್ರಾವೀಣ್ಯ ಇದೆ. ಸೆನ್ಸೆಕ್ಸ್‌ನ ಸೂಚ್ಯಂಕ ತಯಾರಿಸಲು ಸ್ಟ್ಯಾಂಡರ್ಡ್ ಆ್ಯಂಡ್ ಪೂರ್ ನೆರವಾಗಿರುವ ಕಾರಣ ಸೆನ್ಸೆಕ್ಸ್ ಜತೆ ಎಸ್ ಆ್ಯಂಡ್ ಪಿ ಎನ್ನುವ ಹೆಸರು ಬೆಸೆದುಕೊಂಡಿದೆ.

ಸಿಎನ್‌ಎಕ್ಸ್ ನಿಫ್ಟಿಯಲ್ಲಿ ಮೇಲಿಂದ ಮೇಲೆ ಮಾರಾಟವಾಗುವ ದೊಡ್ಡ ಕಂಪನಿಗಳ ಷೇರುಗಳಿರುತ್ತವೆ. ಇಂಡಿಯಾ ಇಂಡೆಕ್ಸ್ ಸರ್ವೀಸಸ್ ಮತ್ತು ಪ್ರಾಡಕ್ಟ್ಸ್ ಲಿ. (ಐಐಎಸ್‌ಎಲ್) ನಿಫ್ಟಿಯ ನಿರ್ವಹಣೆಯ ಹೊಣೆ ಹೊತ್ತಿದೆ. ಇದು ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಮತ್ತು ಕ್ರಿಸೆಲ್ ಸಂಸ್ಥೆಯ ಸಹಭಾಗಿತ್ವದಲ್ಲಿ ನಡೆಯುತ್ತಿದೆ. ಸಿಎನ್‌ಎಕ್ಸ್ ಎನ್ನುವುದು ಕ್ರಿಸೆಲ್ ಮತ್ತು ಎನ್‌ಎಸ್‌ಸಿಯನ್ನು ಸೂಚಿಸುತ್ತದೆ.

ಶ್ರದ್ಧಾಂಜಲಿ



ಶ್ರೀ ಬಿ ಎಲ್ ನರೇಂದ್ರ
ಸಹಾಯಕ ಪೊಲೀಸ್ ಆಯುಕ್ತರು (ನಿವೃತ್ತ)
ಜನನ: 06.09.1942 – ಮರಣ : 22.02.2021
ಸೋಮವಾರ ಮಧ್ಯಾಹ್ನ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ಅವರ ತೋಟದಲ್ಲಿ ನೆರವೇರಿಸಲಾಗುವುದು.
ಸ್ಥಳ : ಕುಂಬೀ ಫಾರ್ಮ್ ಹೊಸೂರು ಗ್ರಾಮ, ಬೈರಮಂಗಲ ಕ್ರಾಸ್, ಆದರ್ಶ ಶಾಲೆ ಎದುರು, ಬಿಡದಿ ಹೋಬಳಿ.
ಸಮಯ: ಮಂಗಳವಾರ ಮಧ್ಯಾಹ್ನ 12 ರಿಂದ 2.00 ಗಂಟೆಯೊಳಗೆ,
ಮೊಬೈಲ್ : 98450 19740

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಭಾವಪೂರ್ಣ ಶ್ರದ್ಧಾಂಜಲಿ

ಜನನ: 12.08.1937 – ಮರಣ : 20.02.2021
ಡಾ|| ವೆಂಕಟಗಿರಿಯಪ್ಪ
ಮೃತರು ದಿನಾಂಕ 20ನೇ ಫೆಬ್ರವರಿ ರಾತ್ರಿ 11.04ಕ್ಕೆ ದೈವಾದೀನರಾಗಿರುತ್ತಾರೆ ಎಂದು ತಿಳಿಸಲು ವಿಷಾಧಿಸುತ್ತೇವೆ,
ಇಂತಿ ದುಃಖತಪ್ತರು
ಮಕ್ಕಳು, ಅಳಿಯಂದಿರು ಮತ್ತು ಕುಟುಂಬ ವರ್ಗದವರು

ಬ್ಯಾಂಕಿಂಗ್ ವಲಯದ ಮುನ್ನೋಟ ಸ್ಥಿರ

ಮುಂಬೈ (ಪಿಟಿಐ): ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯು ದೇಶದ ಬ್ಯಾಂಕಿಂಗ್ ವಲಯದ ಮುನ್ನೋಟವನ್ನು ಪರಿಷ್ಕರಿಸಿದೆ. 2021–22ನೇ ಹಣಕಾಸು ವರ್ಷದಲ್ಲಿ ಬ್ಯಾಂಕಿಂಗ್ ವಲಯದ ಮುನ್ನೋಟವು ಸ್ಥಿರವಾಗಿರಲಿದೆ ಎಂದು ಹೇಳಿದೆ.

ಫ್ಯೂಚರ್–ರಿಲಯನ್ಸ್ ಒಪ್ಪಂದ: ಅಂತಿಮ ಆದೇಶ ನೀಡದಿರಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಜೊತೆ ಫ್ಯೂಚರ್ ರಿಟೇಲ್ ಲಿಮಿಟೆಡ್ ಕಂಪನಿಯನ್ನು ವಿಲೀನ ಮಾಡುವ ಪ್ರಕ್ರಿಯೆ ವಿಚಾರದಲ್ಲಿ ಅಂತಿಮ ಆದೇಶ ನೀಡುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಸೂಚನೆ ನೀಡಿದೆ.

ಅಮೆಜಾನ್ ಕಂಪನಿಯು ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ನ್ಯಾಯಮೂರ್ತಿಗಳಾದ ಆರ್.ಎಫ್. ನರಿಮನ್ ಮತ್ತು ಬಿ.ಆರ್. ಗವಾಯಿ ಅವರನ್ನು ಒಳಗೊಂಡ ವಿಭಾಗೀಯ ಪೀಠವು ಫ್ಯೂಚರ್ ರಿಟೇಲ್ ಮತ್ತು ಅದರ ಅಧ್ಯಕ್ಷ ಕಿಶೋರ್ ಬಿಯಾನಿ ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿದೆ. ಅಮೆಜಾನ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ.

ಫ್ಯೂಚರ್ – ರಿಲಯನ್ಸ್ ಒಪ್ಪಂದದ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ದೆಹಲಿ ಹೈಕೋರ್ಟ್‌ನ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ ಅದೇ ಹೈಕೋರ್ಟ್‌ನ ವಿಭಾಗೀಯ ಪೀಠವು ಫೆಬ್ರುವರಿ 8ರಂದು ತಡೆಯಾಜ್ಞೆ ನೀಡಿದೆ. ಏಕಸದಸ್ಯ ಪೀಠದ ಆದೇಶವನ್ನು ಫ್ಯೂಚರ್ ರಿಟೇಲ್ ಕಂಪನಿಯು ಪ್ರಶ್ನಿಸಿತ್ತು.

ಫ್ಯೂಚರ್ ರಿಟೇಲ್ ಕಂಪನಿಯು ತನ್ನ ಚಿಲ್ಲರೆ ವಹಿವಾಟು, ಸಗಟು ವಹಿವಾಟು, ಸರಕು ಸಾಗಣೆ ಮತ್ತು ಗೋದಾಮು ವಹಿವಾಟುಗಳನ್ನು ರಿಲಯನ್ಸ್‌ಗೆ ಮಾರಲು 2020ರ ಆಗಸ್ಟ್‌ನಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಫ್ಯೂಚರ್ ನಡೆ ಪ್ರಶ್ನಿಸಿ ಅಮೆಜಾನ್ ಕಂಪನಿಯು ಸಿಂಗಪುರದ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರದ ಮೊರೆ ಹೋಗಿತ್ತು. ಫ್ಯೂಚರ್ ಸಮೂಹವು ತನ್ನ ಜೊತೆ ಮಾಡಿಕೊಂಡ ಒಪ್ಪಂದವೊಂದನ್ನು ಉಲ್ಲಂಘಿಸಿದೆ ಎಂದು ಅಮೆಜಾನ್ ಆರೋಪಿಸಿತ್ತು.

ಎಲ್‌ಐಸಿ: ಹೊಸ 'ಬಿಮಾ ಜ್ಯೋತಿ' ಯೋಜನೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಸುರಕ್ಷತೆ ಮತ್ತು ಉಳಿತಾಯದ ಸಂಯೋಜನೆಯನ್ನು ಒಳಗೊಂಡ ಹೊಸ 'ಎಲ್‌ಐಸಿ ಬಿಮಾ ಜ್ಯೋತಿ' ಯೋಜನೆಯನ್ನು ಪರಿಚಯಿಸಿದೆ.

ಈ ಯೋಜನೆಯು ಪಾಲಿಸಿದಾರರಿಗೆ, ಯೋಜನೆಯ ಅವಧಿಯ ಅಂತ್ಯದಲ್ಲಿ ಒಂದಷ್ಟು ಮೊತ್ತವನ್ನು ನೀಡುವ ಖಾತರಿ ಒದಗಿಸುತ್ತದೆ. ಅಲ್ಲದೆ, ಯೋಜನೆಯ ಅವಧಿಯಲ್ಲಿ ಪಾಲಿಸಿದಾರ ಮರಣ ಹೊಂದಿದಲ್ಲಿ ಆತನ ಕುಟುಂಬಕ್ಕೆ ಹಣಕಾಸಿನ ಬೆಂಬಲವನ್ನೂ ನೀಡಲಿದೆ. ಪ್ರತಿ ಪಾಲಿಸಿ ವರ್ಷದ ಅಂತ್ಯದ ವೇಳೆಗೆ ಸಾವಿರ ರೂಪಾಯಿ ಕನಿಷ್ಠ ಖಾತರಿ ಹಣಕ್ಕೆ ₹ 50ರಂತೆ ಹೆಚ್ಚುವರಿ ಮೊತ್ತ ನೀಡಲಾಗುವುದು. ಕನಿಷ್ಠ ಖಾತರಿ ಮೊತ್ತ ₹ 1 ಲಕ್ಷ ಇದ್ದು, ಗರಿಷ್ಠ ಮಿತಿ ಇರುವುದಿಲ್ಲ.

ಏಜೆಂಟರ ಬಳಿ ಅಥವಾ ಇತರೆ ಮಧ್ಯವರ್ತಿಗಳು ಹಾಗೂ www.licinidia.in ಜಾಲತಾಣದ ಮೂಲಕವೂ ಯೋಜನೆಯನ್ನು ಖರೀದಿಸಬಹುದಾಗಿದೆ.

ಡಿಎಚ್‌ಎಫ್‌ಎಲ್: ಮತ್ತೊಂದು ಅಕ್ರಮ

ನವದೆಹಲಿ (ಪಿಟಿಐ): ತನ್ನ ವಹಿವಾಟು ಲೆಕ್ಕಪತ್ರ ಪರಿಶೋಧಕ ಸಂಸ್ಥೆ 'ಗ್ರಾಂಟ್ ಥಾರ್ಟನ್', ₹ 6,182 ಕೋಟಿ ಮೊತ್ತದ ಮತ್ತೊಂದು ಅಕ್ರಮ ವ್ಯವಹಾರವನ್ನು ಪತ್ತೆ ಮಾಡಿದೆ ಡಿಎಚ್‌ಎಫ್‌ಎಲ್ ಸೋಮವಾರ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್
NABARD
NATIONAL BANK FOR AGRICULTURE AND RURAL DEVELOPMENT
"ನಬಾರ್ಡ್ ಟವರ್", ನಂ.46, ಕೆಂಪೇಗೌಡ ರಸ್ತೆ, ಪಿ.ಬಿ. ಸಂ.9944, ಬೆಂಗಳೂರು - 560 009
ದೂರವಾಣಿ : +91 80 2207 6561
ಇ ಮೇಲ್: dpsp.bangalore@nabard.org
ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ, ಕೆ ಜಿ ರಸ್ತೆ, ಬೆಂಗಳೂರು ಇಲ್ಲಿನ ಸೌಲಭ್ಯ ನಿರ್ವಹಣೆ, ಭದ್ರತಾ ಸಿಬ್ಬಂದಿ ಸೇವೆಗಳು ಮತ್ತು ಗಾಜಿನ ಮುಂಭಾಗ ಶುಚಿಗೊಳಿಸುವ ಕಾಮಗಾರಿಗೆ ವಾರ್ಷಿಕ ನಿರ್ವಹಣಾ ಗುತ್ತಿಗೆಗೆ ಟೆಂಡರ್ ಆಹ್ವಾನ ಪ್ರಕಟಣೆ
ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ ಇವರು 01.04.2021 ರಿಂದ 31.03.2023 ಅವಧಿಗೆ ಕೆಳಕಂಡ ಕಾಮಗಾರಿಗಳ ವಾರ್ಷಿಕ ನಿರ್ವಹಣಾ ಗುತ್ತಿಗೆ (ಎಎಮ್‌ಸಿ) ಕಾಮಗಾರಿಗಾಗಿ ಪ್ರತಿಷ್ಠಿತ ಹಾಗೂ ಅನುಭವಿ ಗುತ್ತಿಗೆದಾರರಿಂದ/ಸಂಬಂಧಿತ ಕ್ಷೇತ್ರದಲ್ಲಿನ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
1. ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ ಪ್ರಾಂಗಣ ಇಲ್ಲಿನ ಒಟ್ಟಾರೆ ಸೌಲಭ್ಯಗಳ ನಿರ್ವಹಣೆ ಮತ್ತು ಹೌಸ್‌ಕೀಪಿಂಗ್ ಸೇವೆಗಳು – ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 15.03.2021 ರಂದು 14.00 ಗಂಟೆ.
2. ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿಗೆ ಮತ್ತು ಬೆಂಗಳೂರಿನಲ್ಲಿರುವ ವಿವಿಧ ಸಿಬ್ಬಂದಿ ವಸತಿಗೃಹಗಳಿಗೆ ಶಸ್ತ್ರರಹಿತ ಭದ್ರತಾ ಸಿಬ್ಬಂದಿ ಸೇವೆಗಳು –ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 15.03.2021 ರಂದು 14.00 ಗಂಟೆ.
3. ನಬಾರ್ಡ್, ಕರ್ನಾಟಕ ಪ್ರಾದೇಶಿಕ ಕಚೇರಿ ಕಟ್ಟಡದಲ್ಲಿನ ಹೊರಭಾಗದ ಗಾಜು ಮತ್ತು ಆಲ್ಕೊ ಪ್ಯಾನಲ್ (ಗಾಜಿನ ಮುಂಭಾಗ) ಶುಚಿಗೊಳಿಸುವ ಕಾಮಗಾರಿ – ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 10.03.2021 ರಂದು 14.00 ಗಂಟೆ.
ಆಸಕ್ತಿಯುಳ್ಳ ಗುತ್ತಿಗೆದಾರರು/ಸಂಸ್ಥೆಗಳು ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಮ್ಮ www.nabard.org ವೆಬ್‌ಸೈಟ್‌ಗೆ ಮತ್ತು ಸೆಂಟ್ರಲ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಿಪಿಪಿ) ಜಾಲತಾಣಕ್ಕೆ ಭೇಟಿ ನೀಡಬಹುದು.

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ನಿಮ್ಮಾವುದೇ ಘೋರ ನಿಗೂಢ ಗುಪ್ತ ಸಮಸ್ಯೆಗಳಿಗೆ ಕೇವಲ 30ನಿಮಿಷಗಳಲ್ಲಿ ಪರಿಹಾರ ಸೂಚಿಸುತ್ತಾರೆ. ಉಚಿತವಾಗಿ ಸ್ತ್ರೀಪುರುಷ ವಶೀಕರಣವನ್ನು ಮಾಡಿಕೊಡುತ್ತಾರೆ. ಅಯ್ಯಪ್ಪ ಟೆಂಪಲ್ ಪಕ್ಕದಲ್ಲಿ ಮೆಟ್ರೋ ಸ್ಟೇಶನ್ ಹತ್ತಿರ, ಶ್ರೀರಾಂಪುರ ಬೆಂಗಳೂರು. 9845702800

ಭವಿಷ್ಯ

Astrology

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ, ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಉದ್ಯೋಗಾವಕಾಶ

General

TATA MOTORS, ಟಯೋಟಾ, ಬ್ರಿಟಾನಿಯಾ, TVS ಗಳಿಗೆ 7th,SSLC, PUC ಡಿಗ್ರಿಯವರುಗಳು, ITI ನವರುಗಳು,ನೇರನೇಮಕಾತಿಯಿದೆ. 16,500-52,000/- ವಸತಿಯೂಟವಿದೆ. 7795048129, 7795049766

ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿಯಲ್ಲಿರುವ ಜಮೀನಿನಲ್ಲಿ ಕೆಲಸ ಮಾಡಲು, ಆಗ್ರೋ ಕಂಪನಿಯೊಂದಕ್ಕೆ, 10+ವರ್ಷ ಅನುಭವ ಹೊಂದಿರುವ ಕೃಷಿ ಮೇಲ್ವಿಚಾರಕರು ಹಾಗೂ ಕೃಷಿ ಕೆಲಸಗಾರರು ಬೇಕಾಗಿದ್ದಾರೆ.ಸಂಬಳ 15 ಸಾವಿರ+ ವಸತಿ. ಸಂಪರ್ಕಿಸಿ: 9606111195/ 080-26611101

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಸುವರ್ಣಾವಕಾಶ ಪ್ರತಿಷ್ಠಿತ ಕಂಪನಿಗಳಿಗೆ ಹಾಗೂ ಖಾಸಗಿ ಆಫೀಸ್‌ಗಳ ಹುದ್ದೆಗಳಿಗೆ 7th, SSLC, PUC,ITI, Diploma Any Degree Pass/Fail ಆದ ಯುವಕಯುವತಿಯರು ಬೇಕಾಗಿದ್ದಾರೆ.ವಸತಿಯೂಟದೊಂದಿಗೆ ESI/PF +[OT-150/Hour] ಸಂಬಳ 15,600/- ರೂರಿಂದ 34,200/- ರೂವರೆಗೆ.7406000347, 7406000369

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

VIDEOCON, ಟಯೋಟಾ, TVS, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,600-56,000/- ವಸತಿಯೂಟವಿದೆ. 9611715755

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ತಕ್ಷಣ ಬೇಕಾಗಿದ್ದಾರೆ ಕಂಪನಿ ಹಾಗು ಆಫೀಸ್ ಕೆಲಸಗಳಿಗೆ SSLC PUC Any degree ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ Rs.16600 -Rs.60000 7259261011, 9902839010

24 ಗಂಟೆ ಮನೆಕೆಲಸಗೋಸ್ಕರ ಮಹಿಳಾ ಅಭ್ಯರ್ಥಿ ಅಗತ್ಯವಿದೆ ಸಂಬಳ 20000/-ಊಟ +ಇರಲಿಕ್ಕೆ ಸ್ಥಳ ಸಭ್ಯ ಪರಿವಾರದಲ್ಲಿ ಬೆಂಗಳೂರಿನಲ್ಲಿ ಸಂಪರ್ಕಿಸಿ:8879178843, 7045875963

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. 8496922812/ 8073088585

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. 8496922812/ 8073088585

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

ಪ್ರವಾಸ

Travel

★20.04.2021 8ದಿನಗಳು★ ವಿಮಾನ, AC ಬಸ್ಸಿನಲ್ಲಿ ಗುಜರಾತ್, ಸೋಮನಾಥ, ದ್ವಾರಕ, ಡಿಯು, ಭಾವನಗರ್, ಸರ್ದಾರ್‌ಪ್ರತಿಮೆ, ಆರ್.ಗಾಂಧಿ ಟೂರ್ಸ್. 9902433500/ 9945445809

ವಾಹನ

Four Wheelers Selling

Others

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

ಸಮಾಜಸೇವೆ

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಹೂಡಿಕೆದಾರರ ಸಂಪತ್ತು ₹ 3.7 ಲಕ್ಷ ಕೋಟಿಗಳಷ್ಟು ಇಳಿಕೆ

ಸೆನ್ಸೆಕ್ಸ್: 2 ತಿಂಗಳ ದೊಡ್ಡ ಕುಸಿತ

ಮುಂಬೈ (ಪಿಟಿಐ): ಸತತ ನಾಲ್ಕನೆ ದಿನವೂ ಕುಸಿತ ಕಂಡ ಸೆನ್ಸೆಕ್ಸ್, ಸೋಮವಾರದ ವಹಿವಾಟಿನಲ್ಲಿ 1,145 ಅಂಶ ಇಳಿಕೆ ದಾಖಲಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 306 ಅಂಶ ಕುಸಿದು, 14,700ಕ್ಕಿಂತ ಕಡಿಮೆ ಮಟ್ಟಕ್ಕೆ ಇಳಿಯಿತು. ಸೋಮವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತಿನ ಮೌಲ್ಯ ₹ 3.7 ಲಕ್ಷ ಕೋಟಿಯಷ್ಟು ಕಡಿಮೆಯಾಯಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ ಕಂಡರೂ, ಅದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಲು ನೆರವಾಗಲಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವುದು ಹಾಗೂ ಷೇರುಗಳ ಮೌಲ್ಯ ತೀರಾ ಹೆಚ್ಚಾಗಿದೆ ಎಂಬ ಕಳವಳದ ಕಾರಣದಿಂದಾಗಿ ಸೂಚ್ಯಂಕಗಳು ಕುಸಿದವು ಎಂದು ವರ್ತಕರು ಹೇಳಿದ್ದಾರೆ.

ಸೆನ್ಸೆಕ್ಸ್ ಸೋಮವಾರ ಕಂಡಿರುವ ಕುಸಿತವು ಎರಡು ತಿಂಗಳ ಅವಧಿಯಲ್ಲಿ ಆಗಿರುವ ಬಹುದೊಡ್ಡ ಇಳಿಕೆ. ಐದು ವಹಿವಾಟು ದಿನಗಳಲ್ಲಿ ಸೆನ್ಸೆಕ್ಸ್ 2,409 ಅಂಶ ಇಳಿಕೆ ಕಂಡಂತೆ ಆಗಿದೆ. ಸೋಮವಾರದ ವಹಿವಾಟಿನಲ್ಲಿ ಡಾ. ರೆಡ್ಡಿಸ್ ಕಂಪನಿ ಷೇರು ಅತಿಹೆಚ್ಚಿನ, ಅಂದರೆ ಶೇ 4.77ರಷ್ಟು, ಇಳಿಕೆ ಕಂಡಿತು. ಮಹೀಂದ್ರ ಆ್ಯಂಡ್ ಮಹೀಂದ್ರ, ಟೆಕ್ ಮಹೀಂದ್ರ, ಇಂಡಸ್‌ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಟಿಸಿಎಸ್ ಷೇರುಗಳು ಕೂಡ ದೊಡ್ಡ ಮಟ್ಟದ ಕುಸಿತ ಕಂಡವು.

ಒಎನ್‌ಜಿಸಿ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಕೋಟಕ್ ಬ್ಯಾಂಕ್ ಷೇರುಗಳು ಮಾತ್ರ ಏರಿಕೆ ದಾಖಲಿಸಿದವು. 'ಕೋವಿಡ್–19 ಪ್ರಕರಣಗಳಲ್ಲಿ ಹೆಚ್ಚಳ ಆಗಿರುವ ಕಾರಣ ಆರ್ಥಿಕ ಚಟುವಟಿಕೆಗಳಿಗೆ ನಿರ್ಬಂಧ ಎದುರಾಗುತ್ತಿರುವುದು, ಜಾಗತಿಕ ಮಟ್ಟದಲ್ಲಿ ವಹಿವಾಟು ಮಂದಗತಿಯಲ್ಲಿ ಇದ್ದಿದ್ದು ದೇಶಿ ಷೇರು ಮಾರುಕಟ್ಟೆಗಳ ಮೇಲೆ ಪ್ರಭಾವ ಬೀರಿದವು' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಆರ್ಥಿಕ ವ್ಯವಸ್ಥೆಯ ಮೂಲಭೂತ ಅಂಶಗಳು ಉತ್ತಮಗೊಂಡಿರುವ ಕಾರಣ, ಮಾರುಕಟ್ಟೆ ಇಳಿಯುತ್ತಿರುವ ಈ ಸಂದರ್ಭವು ಷೇರು ಖರೀದಿಗೆ ಅವಕಾಶ ಮಾಡಿಕೊಟ್ಟಿದೆ' ಎಂದೂ ಹೇಳಿದ್ದಾರೆ.

ಮುಖ್ಯಾಂಶಗಳು
- ಹೂಡಿಕೆದಾರರ ವಿಶ್ವಾಸ ಹೆಚ್ಚಿಸದ ರೂಪಾಯಿ ಮೌಲ್ಯ ಚೇತರಿಕೆ
- ಡಾ. ರೆಡ್ಡೀಸ್ ಷೇರು ಶೇ 4.77ರಷ್ಟು ಗರಿಷ್ಠ ಕುಸಿತ
- ಕಳವಳ ಮೂಡಿಸಿದ ಕೋವಿಡ್–19 ಪ್ರಕರಣಗಳ ಹೆಚ್ಚಳ

ತೈಲ ಬೆಲೆ ಏರಿಕೆ

ಬ್ರೆಂಟ್ ಕಚ್ಚಾ ತೈಲ ಬೆಲೆಯಲ್ಲಿ ಏರಿಕೆ ಆಗಿದೆ. ಕಚ್ಚಾ ತೈಲ ಬೆಲೆಯು ಬ್ಯಾರೆಲ್‌ಗೆ ಶೇಕಡ 0.66ರಷ್ಟು ಹೆಚ್ಚಳವಾಗಿ, 62.55 ಅಮೆರಿಕನ್ ಡಾಲರ್‌ನಂತೆ ಮಾರಾಟವಾಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 16 ಪೈಸೆಯಷ್ಟು ಚೇತರಿಕೆ ಕಂಡಿದೆ.

ದಿಗ್ವಿಜಯ ಸಿಂಗ್ ವಿರುದ್ಧ ಜಾಮೀನು ರಹಿತ ವಾರಂಟ್

ಹೈದರಾಬಾದ್: ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗದ ಕಾಂಗ್ರೆಸ್‌ನ ಹಿರಿಯ ಮುಖಂಡ ದಿಗ್ವಿಜಯ ಸಿಂಗ್ ಅವರ ವಿರುದ್ಧ ಇಲ್ಲಿನ ಸ್ಥಳೀಯ ನ್ಯಾಯಾಲಯ ಜಾಮೀನುರಹಿತ ವಾರಂಟ್ ಹೊರಡಿಸಿದೆ.

ಮುಂಬೈ ಧಾರಣೆ

ಶೇಂಗಾ
22-2-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1480)
ಒಂದು ವಾರದ ಡೆಲಿವರಿ	1505 (1475)
ಸೋಯಾ ಕಚ್ಚಾ	1120 (1115)
ಪಾಮ್ ವಾರದ ಡೆಲಿವರಿ	1128 (1118)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,500 (46,400)
ಬೆಳ್ಳಿ ಕೆ.ಜಿ
69,500 (69,000)

ಆವರಣದಲ್ಲಿ ಶನಿವಾರದ ಧಾರಣೆ

ಸಂಸದ ಮೋಹನ್ ಡೇಲ್ಕರ್ ಶಂಕಾಸ್ಪದ ಸಾವು

ಮುಂಬೈ (ಪಿಟಿಐ): ಸಂಸದ ಮೋಹನ್ ಡೇಲ್ಕರ್ (58) ಅವರು ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಅವರ ಮೃತದೇಹ ಸೋಮವಾರ ದಕ್ಷಿಣ ಮುಂಬೈನ ಮರಿನಾ ಡ್ರೈವ್ ಹೋಟೆಲ್‌ನಲ್ಲಿ ಪತ್ತೆಯಾಗಿದೆ. ಸಾವಿನ ಕಾರಣ ತಿಳಿದುಬಂದಿಲ್ಲ.

ಪಕ್ಷೇತರ ಸದಸ್ಯರಾಗಿದ್ದ ಡೇಲ್ಕರ್ (58) ಲೋಕಸಭೆಯಲ್ಲಿ ದಾದ್ರಾ ಮತ್ತು ನಗರ ಹವೇಲಿ ಕ್ಷೇತ್ರ ಪ್ರತಿನಿಧಿಸುತ್ತಿದ್ದರು. 2019ರ ಚುನಾವಣೆಯಲ್ಲಿ 7ನೇ ಬಾರಿಗೆ ಲೋಕಸಭೆಗೆ ಆಯ್ಕೆಯಾಗಿದ್ದರು.

ಇವರಿಗೆ ಪತ್ನಿ, ಒಬ್ಬ ಮಗ, ಒಬ್ಬ ಮಗಳು ಇದ್ದಾರೆ. 'ಸಾವಿಗೆ ಮುನ್ನ ಗುಜರಾತಿಯಲ್ಲಿ ಬರೆದಿರುವ ಪತ್ರ ದೊರೆತಿದೆ. ಮರಣೋತ್ತರ ಪರೀಕ್ಷೆಯ ಬಳಿಕವೇ ಸಾವಿನ ನಿಖರ ಕಾರಣ ತಿಳಿಯಬಹುದು' ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಪ್ರಾಥಮಿಕ ವರದಿ ಆಧರಿಸಿ ಅಸಹಜ ಸಾವು ಪ್ರಕರಣ ದಾಖಲಿಸಿದ್ದು, ತನಿಖೆ ನಡೆದಿದೆ. ಇವರು, ಸಂಸತ್ತಿನ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ಸ್ಥಾಯಿ ಸಮಿತಿಯ ಸದಸ್ಯರೂ ಆಗಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42500
ಹಳತು	42500-51000
ಬೆಳ್ತಂಗಡಿ	
ಕೋಕ	18000-29500
ಹೊಸತು	20000-42000
ಚಿತ್ರದುರ್ಗ	
ಆಪಿ	42819-43229
ಬೆಟ್ಟೆ	33249-33669
ಕೆಂಪುಗೋಟು	29200-29600
ರಾಶಿ	42339-42779
ಪುತ್ತೂರು	
ಕೋಕ	9500-23000
ಹೊಸತು	29000-42500
ಸಿದ್ದಾಪುರ	
ಬಿಳಿಗೋಟು	24299-30899
ಕೋಕ	22980-28382
ಚಾಲಿ	35499-39311
ಕೆಂಪುಗೋಟು	27989-30469
ರಾಶಿ	39699-42489
ತಟ್ಟಿಬೆಟ್ಟೆ	32189-39099
ಯಲ್ಲಾಪುರ	
ಬಿಳಿಗೋಟು	23126-32189
ಕೋಕ	21212-29399
ಚಾಲಿ	32619-41119
ಕೆಂಪುಗೋಟು	26899-33699
ರಾಶಿ	39999-48119
ತಟ್ಟಿಬೆಟ್ಟೆ	35019-39899
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42509-44669
ಗೊರಬಲು	15129-31879
ರಾಶಿ	37669-43099
ಸರಕು	45009-72740
ಶಿವಮೊಗ್ಗ ಮ್ಯಾಕ್ಕೋಸ್	
ಬೆಟ್ಟೆ	42009-44229
ಹಸ	50599-71086
ರಾಶಿಇಡಿ	39509-42699
ಗೊರಬಲು	23099-31599
ಚನ್ನಗಿರಿ ತುಮ್ಕೋಸ್	
ಬೆಟ್ಟೆ	31250-35279
ರಾಶಿ	39299-43099
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	300-425
ದ್ವಿತಳಿ (ಬಿ.ವಿ)	288-515

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	10000
ಎಸಿ	4005
ಆರ್‌ಪಿ	5200
ಆರ್‌ಸಿ	3000

ಟಾಟಾ ಸಫಾರಿ: ಆರಂಭಿಕ ಬೆಲೆ ₹ 14.69 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ಮಾರುಕಟ್ಟೆಗೆ ಪುನಃ ಬಿಡುಗಡೆ ಮಾಡಿರುವ ಸಫಾರಿ ಎಸ್‌ಯುವಿ ಬೆಲೆಯನ್ನು ಬಹಿರಂಗಪಡಿಸಿದೆ. ಈ ವಾಹನದ ಆರಂಭಿಕ ಮಾದರಿಯ ಎಕ್ಸ್‌ಷೋರೂಂ ಬೆಲೆ ₹ 14.69 ಲಕ್ಷ.

ಟಾಟಾ ಸಫಾರಿ ಅಡ್ವೆಂಚರ್ ಎಡಿಷನ್ ಮಾದರಿಯ ವಾಹನಗಳ ಬೆಲೆಯನ್ನೂ ಕಂಪನಿ ಬಹಿರಂಗಪಡಿಸಿದೆ. ಇದರ ಬೆಲೆ ₹ 20.20 ಲಕ್ಷದಿಂದ ಆರಂಭವಾಗಿ, ₹ 21.45 ಲಕ್ಷದವರೆಗೆ ಇದೆ.

ಸಫಾರಿ ವಾಹನದ ಆರು ಮಾದರಿಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಮ್ಯಾನುವಲ್ ಟ್ರಾನ್ಸ್‌ಮಿಷನ್ ಹಾಗೂ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಯನ್ನು ಕಂಪನಿ ನೀಡಿದೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಯಾದರೆ ಫೋರ್‌ವೀಲ್ ಡ್ರೈವ್ ಸೌಲಭ್ಯ ಇರುವ ಸಫಾರಿ ವಾಹನಗಳನ್ನೂ ಬಿಡುಗಡೆ ಮಾಡುವುದಾಗಿ ಕಂಪನಿ ತಿಳಿಸಿದೆ.

ಸಫಾರಿ ವಾಹನದ ಬೆಲೆಯನ್ನು ಪ್ರಕಟಿಸುವ ವರ್ಚುವಲ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಟಾಟಾ ಮೋಟರ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು, '1998ರಲ್ಲಿ ಬಿಡುಗಡೆ ಆಗಿದ್ದ ಸಫಾರಿ ಒಂದು ಮರೆಯಲಾಗದ ಬ್ರ್ಯಾಂಡ್ ಆಗಿ ಬೆಳೆದಿತ್ತು. ಈಗ ಸಫಾರಿ ವಾಹನವನ್ನು ಹೊಸ ಅವತಾರದಲ್ಲಿ ಮತ್ತೆ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತಿದೆ' ಎಂದು ಹೇಳಿದರು.

ಈಗ 'ಹಾರ್ನ್‌ಬಿಲ್' ಎಂಬ ಹೆಸರು ಹೊತ್ತಿರುವ ಪುಟ್ಟ ಎಸ್‌ಯುವಿ ವಾಹನವನ್ನು ಈ ವರ್ಷದ ಅಂತ್ಯದ ಸುಮಾರಿಗೆ ಮಾರುಕಟ್ಟೆಗೆ ಬಿಡುಗಡೆ ಮಾಡುವ ಉದ್ದೇಶ ಇದೆ ಎಂದು ಕಂಪನಿಯ ಪ್ರಯಾಣಿಕ ವಾಹನಗಳ ವಿಭಾಗದ ಅಧ್ಯಕ್ಷ ಶೈಲೇಶ್ ಚಂದ್ರ ತಿಳಿಸಿದರು.

ಕಂಪನಿಯು ಮಾರುಕಟ್ಟೆಗೆ ಬಿಡುಗಡೆ ಮಾಡಿರುವ ಹ್ಯಾರಿಯರ್ ಹಾಗೂ ಸಫಾರಿ ವಾಹನಗಳು ಎಲೆಕ್ಟ್ರಿಕ್ ಎಂಜಿನ್ ಅಳವಡಿಕೆಗೆ ಕೂಡ ಸೂಕ್ತವಾಗಿವೆ. ಮಾರುಕಟ್ಟೆಯಲ್ಲಿ ಬೇಡಿಕೆ ಎದುರಾದರೆ ಈ ಎರಡು ವಾಹನಗಳ ಎಲೆಕ್ಟ್ರಿಕ್ ಅವತರಣಿಕೆಗಳನ್ನೂ ಮಾರುಕಟ್ಟೆಗೆ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ರಾಜೇಂದ್ರ ಪೇಟ್ಕರ್ ತಿಳಿಸಿದರು.

ಚಿನ್ನ ₹ 278, ಬೆಳ್ಳಿ ₹ 265 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ 10 ಗ್ರಾಂ ಚಿನ್ನದ ದರ ₹ 278ರಷ್ಟು ಏರಿಕೆಯಾಗಿ ₹ 46,013ರಂತೆ ಹಾಗೂ ಬೆಳ್ಳಿ ಧಾರಣೆ ಕೆ.ಜಿ.ಗೆ ₹ 265ರಷ್ಟು ಹೆಚ್ಚಾಗಿ ₹ 68,587ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಚೇತರಿಕೆ ಕಂಡಿದ್ದರಿಂದ ದೇಶಿ ಮಾರುಕಟ್ಟೆಯ ಮೇಲೂ ಅದರ ಪ್ರಭಾವ ಉಂಟಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

‘ರೂಪಾಂತರ ಕೊರೊನಾ ಸೋಂಕು ರಾಜ್ಯಕ್ಕೆ ಬಂದಿಲ್ಲ’

ಬೆಂಗಳೂರು: ‘ರೂಪಾಂತರಗೊಂಡ ಕೋವಿಡ್ ಸೋಂಕು ರಾಜ್ಯದಯಾರಲ್ಲಿಯೂ ಸದ್ಯಕ್ಕೆ ಕಾಣಿಸಿಕೊಂಡಿಲ್ಲ’ ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ. ವಿ.ರವಿ ಸ್ಪಷ್ಟಪಡಿಸಿದರು.

ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಸಿ.ಟಿ (ಸೈಕಲ್ ಥ್ರೆಶ್‌ಹೋಲ್ಡ್) ಮೌಲ್ಯ 20ಕ್ಕೂ ಕಡಿಮೆ ಇರುವ ಬೆಂಗಳೂರಿನ ನರ್ಸಿಂಗ್ ಕಾಲೇಜಿನ 14 ವಿದ್ಯಾರ್ಥಿಗಳ ಗಂಟಲು ದ್ರವದ ಮಾದರಿಯನ್ನು ಹೆಚ್ಚಿನ ಪರೀಕ್ಷೆಗಾಗಿ ದೆಹಲಿಗೆ ಕಳುಹಿಸಲಾಗಿತ್ತು.

‘ಯಾರಲ್ಲೂ ಬ್ರಿಟನ್, ಬ್ರೆಜಿಲ್ ಅಥವಾ ದಕ್ಷಿಣ ಆಫ್ರಿಕಾ ಮಾದರಿಯ ರೂಪಾಂತರ ಸೋಂಕು ದೃಢ ಆಗಿಲ್ಲ. ಮಂಗಳೂರು ಅಥವಾ ಇನ್ನಾವುದೇ ಕ್ಲಸ್ಟರ್‌ಗಳಲ್ಲಿ ಸೋಂಕಿತರಾದ ಯಾರಲ್ಲೂ ಸಿ.ಟಿ ಮೌಲ್ಯ 20ಕ್ಕಿಂತ ಕಡಿಮೆ ಇಲ್ಲ. ಹೀಗಾಗಿ ಹೆಚ್ಚಿನ ಪರೀಕ್ಷೆಗೆ ಕಳಹಿಸಿಲ್ಲ. ಅದರ ಅಗತ್ಯವೂ ಇಲ್ಲ’ ಎಂದರು.

‘ಕೋವಿಡ್ ಪರೀಕ್ಷೆ ಕಡಿಮೆ ಮಾಡದಂತೆ ಸರ್ಕಾರಕ್ಕೆ ಸಲಹೆ ನೀಡಲಾಗಿದೆ. ಸೋಂಕು ಹರಡುವ ಪ್ರಮಾಣ ರಾಜ್ಯದಲ್ಲಿ ಶೇ 1ಕ್ಕಿಂತ ಕಡಿಮೆ ಇರುವ ಕಾರಣ ಭಯಪಡುವ ಅಗತ್ಯ ಇಲ್ಲ. ಆದರೆ, ನಿರ್ಲಕ್ಷ್ಯ ವಹಿಸಿದರೆ ಮಹಾರಾಷ್ಟ್ರ ಮತ್ತು ಕೇರಳದಿಂದ ಸೋಂಕು ಹರಡುವ ಸಾಧ್ಯತೆ ಇದೆ. ಹೀಗಾಗಿ, ಸಾರ್ವಜನಿಕರು ಎಚ್ಚರಿಕೆ ವಹಿಸಲೇಬೇಕು’ ಎಂದು ಹೇಳಿದರು.

‘ಎರಡನೇ ಅಲೆ ರಾಜ್ಯಕ್ಕೆ ಇನ್ನೂ ಪ್ರವೇಶ ಮಾಡಿಲ್ಲ. ಇನ್ನು ಐದಾರು ಕ್ಲಸ್ಟರ್‌ಗಳಲ್ಲಿ ಸೋಂಕು ಕಾಣಿಸಿಕೊಂಡರೆ ನಾವು ಎರಡನೇ ಅಲೆಗೆ ಹೋಗುವ ಸಾಧ್ಯತೆ ಇದೆ. ನೆರೆ ರಾಜ್ಯಗಳಲ್ಲಿ ಸೋಂಕು ಹರಡುತ್ತಿರುದನ್ನು ನೋಡಿದರೆ ನಾವು ಜಾಗೃತ ವಹಿಸಬೇಕು. ಎರಡನೇ ಅಲೆ ತಡೆಯುವುದು ಜನರ ಕೈನಲ್ಲೇ ಇದೆ’ ಎಂದರು.

ಅಮರಾವತಿ ಬೇನಾಮಿ ವ್ಯವಹಾರ ಪ್ರಕರಣ

ಈ ತನಿಖೆಗೆ ತಡೆಯಾಜ್ಞೆ ನೀಡುವಂತೆ ಕೋರಿ ಮಾಜಿ ನ್ಯಾಯಮೂರ್ತಿ ಈಶ್ವರಯ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.

‘ದೂರವಾಣಿ ಮಾತುಕತೆಯ ತನಿಖೆಗೆ ಆದೇಶಿಸುವುದಿಲ್ಲ’

ನವದೆಹಲಿ: ಅಮರಾವತಿ ಭೂ ಹಗರಣಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ವಿ. ಈಶ್ವರಯ್ಯ ಮತ್ತು ಅಮಾನತುಗೊಂಡಿರುವ ಜಿಲ್ಲಾ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಎಸ್. ರಾಮಕೃಷ್ಣ ನಡುವೆ ನಡೆದ ದೂರವಾಣಿ ಮಾತುಕತೆ ಬಗ್ಗೆ ತನಿಖೆ ನಡೆಸಲು ಆದೇಶ ನೀಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.



ಈ ಬಗ್ಗೆ ಹೈಕೋರ್ಟ್ ನಿರ್ಧಾರ ಕೈಗೊಳ್ಳಬೇಕು ಎಂದು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಆರ್.ಎಸ್. ರೆಡ್ಡಿ ಅವರನ್ನೊಳಗೊಂಡ ಪೀಠವು ತಿಳಿಸಿದೆ.

ಎಸ್. ರಾಮಕೃಷ್ಣ ಜತೆ ಈಶ್ವರಯ್ಯ ಅವರು ನಡೆಸಿದ ದೂರವಾಣಿ ಮಾತುಕತೆ ಬಗ್ಗೆ ತನಿಖೆ ನಡೆಸುವಂತೆ ಆಂಧ್ರಪ್ರದೇಶ ಹೈಕೋರ್ಟ್ ಆದೇಶ ನೀಡಿತ್ತು. ನ್ಯಾಯಾಂಗದ ವಿರುದ್ಧ ಗಂಭೀರ ಸಂಚು ರೂಪಿಸಿದ್ದು ಈ ಇಬ್ಬರ ನಡುವಣ ಮಾತುಕತೆಯಿಂದ ಬಹಿರಂಗವಾಗಿತ್ತು ಎಂದು ಹೈಕೋರ್ಟ್ ತಿಳಿಸಿತ್ತು.

‘ಅಮಾನತುಗೊಂಡಿರುವ ನ್ಯಾಯಾಂಗ ಅಧಿಕಾರಿಯಿಂದ ಬೇನಾಮಿ ವ್ಯವಹಾರಗಳ ಬಗ್ಗೆ ದೂರವಾಣಿ ಮೂಲಕ ಮಾಹಿತಿ ಪಡೆದುಕೊಂಡಿದ್ದೆ. ಈ ಮಾಹಿತಿಗಳು ಆಂಧ್ರಪ್ರದೇಶದ ಹೊಸ ರಾಜಧಾನಿಯಲ್ಲಿನ ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರದ ಆರೋಪಕ್ಕೆ ಸಂಬಂಧಿಸಿದ್ದಾಗಿದ್ದವು’ ಎಂದು ಈಶ್ವರಯ್ಯ ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಅಮಾನತುಗೊಂಡಿರುವ ಜಿಲ್ಲಾ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಜತೆ ನಡೆಸಿದ ಮಾತುಕತೆ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಜನವರಿ 11ರಂದು ಮಾಜಿ ನ್ಯಾಯಮೂರ್ತಿ ಈಶ್ವರಯ್ಯ ಅವರಿಗೆ ಸೂಚನೆ ನೀಡಿತ್ತು.

ಮಹಾರಾಷ್ಟ್ರದಲ್ಲಿ ಹಲವು ನಿರ್ಬಂಧ: ಕಾರ್ಯಕ್ರಮ ರದ್ದುಗೊಳಿಸಿದ ರಾಜಕೀಯ ನಾಯಕರು

ಕೋವಿಡ್ ತಡೆಗೆ ಇನ್ನಷ್ಟು ಬಿಗಿ ಕ್ರಮ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸರ್ಕಾರವು ಹೊಸದಾಗಿ ಕೆಲವು ನಿರ್ಬಂಧಗಳನ್ನು ಜಾರಿ ಮಾಡಿದೆ. ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ.

ಭಾನುವಾರ ಒಂದೇ ದಿನ ರಾಜ್ಯದಲ್ಲಿ 6,971 ಹೊಸ ಸೋಂಕಿತರು ಪತ್ತೆಯಾಗಿದ್ದು, ಒಟ್ಟು ಸಂಖ್ಯೆ 21 ಲಕ್ಷಕ್ಕೆ ತಲುಪಿದೆ. ಎಲ್ಲ ರೀತಿಯ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಭಾನುವಾರ ಆದೇಶಿಸಿದ್ದರು.

ಕಾರ್ಯಕ್ರಮ ರದ್ದು: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ತಮ್ಮ ಎಲ್ಲ ಪೂರ್ವ ನಿಗದಿತ ಸಾರ್ವಜನಿಕ ಕಾರ್ಯಕ್ರಮಗಳನ್ನು ಸೋಮವಾರ ರದ್ದುಗೊಳಿಸಿದ್ದಾರೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯ ಮನವಿ ಮೇರೆಗೆ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸುತ್ತಿರುವುದಾಗಿ ಪವಾರ್ ಟ್ವೀಟ್ ಮಾಡಿದ್ದಾರೆ.

ನಾಗ್ಪುರದಲ್ಲಿ ಹಲವು ನಿರ್ಬಂಧ: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಾಗ್ಪುರ ಜಿಲ್ಲೆಯಲ್ಲಿ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ಸಚಿವ ನಿತಿನ್ ರಾವುತ್ ತಿಳಿಸಿದ್ದಾರೆ. ಶಾಲೆಗಳು, ಕಾಲೇಜುಗಳು, ಕೋಚಿಂಗ್ ಕೇಂದ್ರಗಳು ಮಾರ್ಚ್ 7ರವರೆಗೆ ಮುಚ್ಚಲಿವೆ.

ಮುಂಬೈನ ಧಾರಾವಿಯಲ್ಲಿ ಆರೋಗ್ಯ ಕಾರ್ಯಕರ್ತರೊಬ್ಬರು ಸೋಮವಾರ ಗಂಟಲುದ್ರವ ಸಂಗ್ರಹಿಸಿದರು–ಪಿಟಿಐ ಚಿತ್ರ

ಇಬ್ಬರ ಬಂಧನ: ಕೋವಿಡ್ ನಿಯಮಾವಳಿಯನ್ನು ಉಲ್ಲಂಘಿಸಿದ ಆರೋಪದ ಮೇಲೆ ಮುಂಬೈನ ಚೆಂಬೂರ್ ಪ್ರದೇಶದಲ್ಲಿ ಇಬ್ಬರನ್ನು ಬಂಧಿಸಲಾಗಿದೆ. 150ಕ್ಕಿಂತ ಹೆಚ್ಚು ಜನರು ಸೇರಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಜಿಮ್ಖಾನಾ ಕಾರ್ಯದರ್ಶಿ ಹಾಗೂ ಸಹಾಯಕನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಎರಡು ದಿನಗಳ ಅವಧಿಯಲ್ಲಿ ಪಾಲ್ಘರ್ ಜಿಲ್ಲೆಯಲ್ಲಿ ಮಾಸ್ಕ್ ಧರಿಸದ 189 ಜನರಿಂದ ₹36,000 ವಸೂಲಿ ಮಾಡಲಾಗಿದೆ.

ಅಮಿತ್ ಶಾ ಪರಿಶೀಲನೆ: ಕೆಲವು ರಾಜ್ಯಗಳಲ್ಲಿ ಪ್ರಕರಣಗಳು ಏರಿಕೆಯಾದ ಕಾರಣ ದೇಶದ ಕೋವಿಡ್ ಪರಿಸ್ಥಿತಿಯನ್ನು ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಪರಿಶೀಲಿಸಿದರು. ಆರೋಗ್ಯ ಸಚಿವ ಹರ್ಷವರ್ಧನ್, ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಮತ್ತು ಎರಡೂ ಸಚಿವಾಲಯಗಳ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು.

ಲಸಿಕಾ ಕಾರ್ಯಕ್ರಮ ಮತ್ತು ವೈರಸ್ ಹರಡುವುದನ್ನು ತಡೆಯಲು ತೆಗೆದುಕೊಂಡ ಕ್ರಮಗಳನ್ನು ಪರಾಮರ್ಶಿಸಲಾಯಿತು. ಪ್ರಕರಣ ಹೆಚ್ಚಿರುವ ರಾಜ್ಯಗಳಿಗೆ ನೀಡಬಹುದಾದ ಸಂಭಾವ್ಯ ಸಹಾಯವನ್ನೂ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಹಾರಾಷ್ಟ್ರ, ಕೇರಳ, ಪಂಜಾಬ್, ಛತ್ತೀಸಗಡ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ.

ಕೊರೊನಿಲ್ ಬಗ್ಗೆ ಸುಳ್ಳು ಹೇಳಿಕೆ: ಐಎಂಎ ಕಿಡಿ

ನವದೆಹಲಿ: ಪತಂಜಲಿ ಸಂಸ್ಥೆಯ ಕೊರೊನಿಲ್ ಮಾತ್ರೆಗಳಿಗೆ ವಿಶ್ವಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಪ್ರಮಾಣಪತ್ರ ಸಿಕ್ಕಿದೆ ಎಂಬ ಸುಳ್ಳು ಹೇಳಿಕೆಗೆ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸೋಮವಾರ ಆಘಾತ ವ್ಯಕ್ತಪಡಿಸಿದೆ. ಈ ಬಗ್ಗೆ ಸ್ಪಷ್ಟನೆ ನೀಡುವಂತೆ ಆರೋಗ್ಯ ಸಚಿವ ಹರ್ಷವರ್ಧನ್ ಅವರಿಗೆ ಬೇಡಿಕೆ ಇಟ್ಟಿದೆ. ಹರ್ಷವರ್ಧನ್ ಸಮ್ಮುಖದಲ್ಲಿ ಔಷಧವನ್ನು ಬಿಡುಗಡೆ ಮಾಡಲಾಗಿತ್ತು.

‘ವಿಶ್ವ ಆರೋಗ್ಯ ಸಂಸ್ಥೆಯ ಪ್ರಮಾಣೀಕರಣ ಯೋಜನೆಯ ಪ್ರಕಾರ, ಕೋವಿಡ್ ಚಿಕಿತ್ಸೆಯನ್ನು ಬೆಂಬಲಿಸುವ ಔಷಧವಾಗಿ ಕೊರೊನಿಲ್ ಮಾತ್ರೆ ಆಯುಷ್ ಸಚಿವಾಲಯದಿಂದ ಪ್ರಮಾಣೀಕರಣ ಪಡೆದಿದೆ’ ಎಂದು ಯೋಗ ಗುರು ರಾಮದೇವ್ ಅವರ ಪತಂಜಲಿ ಆಯುರ್ವೇದ ಸಂಸ್ಥೆಯು ಫೆಬ್ರುವರಿ 19ರಂದು ಹೇಳಿತ್ತು. ‘ಇದು ಕೋವಿಡ್ ವಿರುದ್ಧ ಹೋರಾಡುವ, ಪುರಾವೆ ಆಧರಿತ ಔಷಧವಾಗಿದೆ’ ಎಂದು ಹೇಳಿಕೊಂಡಿತ್ತು.

ಜಾಗತಿಕ ಆರೋಗ್ಯ ಸಂಸ್ಥೆಯು ಕೋವಿಡ್ ಚಿಕಿತ್ಸೆಗೆ ಯಾವುದೇ ಸಾಂಪ್ರದಾಯಿಕ ಔಷಧಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸಿಲ್ಲ ಅಥವಾ ಪ್ರಮಾಣೀಕರಿಸಿಲ್ಲ ಎಂದ ಹಿನ್ನೆಲೆಯಲ್ಲಿ ವೈದ್ಯಕೀಯ ಸಂಘವು ಸ್ಪಷ್ಟನೆ ಕೇಳಿದೆ.

‘ದೇಶದ ಆರೋಗ್ಯ ಸಚಿವರಾಗಿ ಇಂತಹ ಸುಳ್ಳು ಕಟ್ಟುಕಥೆಯ ಅವೈಜ್ಞಾನಿಕ ಉತ್ಪನ್ನವನ್ನು ಇಡೀ ದೇಶದ ಜನರಿಗೆ ಬಿಡುಗಡೆ ಮಾಡುವುದು ಎಷ್ಟು ಸಮಂಜಸ’ ಎಂದು ಸೋಮವಾರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಭಾರತೀಯ ವೈದ್ಯಕೀಯ ಸಂಘ ಪ್ರಶ್ನಿಸಿದೆ. ಕೊರೊನಾ ತಡೆ ಉತ್ಪನ್ನವನ್ನು ಮಾನವನ ಮೇಲೆ ಪ್ರಯೋಗಿಸಿದ ಸಮಯ ಹಾಗೂ ವಿವರಗಳನ್ನು ನೀಡುವಂತೆ ಸಂಘ ಕೇಳಿದೆ.

ಪತಂಜಲಿಯ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರು ಟ್ವೀಟ್ ಮಾಡಿ, ಗೊಂದಲ ಬಗೆಹರಿಸುವ ಯತ್ನ ಮಾಡಿದ್ದಾರೆ. ‘ಕೊರೊನಿಲ್‌ಗೆ ಸಿಒಪಿಪಿ ಪ್ರಮಾಣಪತ್ರವನ್ನು ಭಾರತ ಸರ್ಕಾರದ ಡಿಸಿಜಿಐ ನೀಡಿದೆ. ವಿಶ್ವ ಆರೋಗ್ಯ ಸಂಸ್ಥೆಯು ಯಾವುದೇ ಔಷಧಿಗಳನ್ನು ಅನುಮೋದಿಸುವುದಿಲ್ಲ ಅಥವಾ ತಿರಸ್ಕರಿಸುವುದಿಲ್ಲ ಎಂಬುದು ಸ್ಪಷ್ಟ. ಪ್ರಪಂಚದಾದ್ಯಂತದ ಜನರಿಗೆ ಉತ್ತಮ ಹಾಗೂ ಆರೋಗ್ಯಕರ ಭವಿಷ್ಯವನ್ನು ನಿರ್ಮಿಸಲು ಡಬ್ಲ್ಯುಎಚ್‌ಒ ಕಾರ್ಯನಿರ್ವಹಿಸುತ್ತಿದೆ’ ಎಂದು ಅವರು ಹೇಳಿದ್ದರು.

ಮದುವೆ ಸಮಾರಂಭಕ್ಕೆ ಮಾರ್ಷಲ್ ನೇಮಕ

ಮಾರ್ಚ್‌ನಿಂದ ಸಾಮಾನ್ಯ ಜನರಿಗೂ ಲಸಿಕೆ: ಸಚಿವ ಡಾ.ಕೆ.ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಸಮಾರಂಭಗಳಲ್ಲಿ ಕೋವಿಡ್ ಸುರಕ್ಷತಾ ಕ್ರಮ ಪಾಲಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸಲು ಇನ್ನು ಮುಂದೆ ಮಾರ್ಷಲ್‌ಗಳನ್ನು ನಿಯೋಜಿಸಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಎಲ್ಲ ಜಿಲ್ಲೆಗಳ ಆರೋಗ್ಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಮದುವೆಗಳಲ್ಲಿ ಅಂತರ ಕಾಯ್ದುಕೊಳ್ಳುತ್ತಿಲ್ಲ. ಹಲವೆಡೆ ಮದುವೆ ಸಮಾರಂಭಗಳಿಗೆ ಹೋದಾಗ ಮಾಸ್ಕ್ ತೆಗೆಯಿರಿ ಎಂದು ನನಗೇ ಹೇಳಿದ್ದಾರೆ. ಆದ್ದರಿಂದ ಮದುವೆ ಸಮಾರಂಭಗಳಲ್ಲಿ ತಲಾ ಒಬ್ಬ ಮಾರ್ಷಲ್ ನೇಮಿಸಲು ತೀರ್ಮಾನಿಸಲಾಗಿದೆ. ಮದುವೆಗಳಲ್ಲಿ 500ಕ್ಕಿಂತ ಹೆಚ್ಚು ಜನ ಸೇರಬಾರದು.

ಸುಧಾಕರ್

ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಿ ನಿಯಮಗಳನ್ನು ಪಾಲಿಸಬೇಕು. ಆಹಾರ ಪೂರೈಕೆ ಮಾಡುವವರಿಗೂ ಪರೀಕ್ಷೆ ಮಾಡಿಸಲು ಸೂಚಿಸಲಾಗಿದೆ’ ಎಂದು ಸುಧಾಕರ್ ಹೇಳಿದರು.

‘ಕೋವಿಡ್ ಮಾರ್ಗಸೂಚಿಗೆ ವಿರುದ್ಧವಾಗಿ ಸಭೆ, ಸಮಾರಂಭ, ಹೋರಾಟ ನಡೆಯುತ್ತಿದೆ. ಇದನ್ನು ಪಾಲಿಸದೇ ಕೋವಿಡ್ ಸೋಂಕು ಹೆಚ್ಚಾದರೆ ಮತ್ತಷ್ಟು ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಹಾರಾಷ್ಟ್ರದ ಕೆಲವು ಜಿಲ್ಲೆಗಳಲ್ಲಿ ಲಾಕ್‌ಡೌನ್ ಆಗಿದ್ದು, ಆ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬರಬೇಕೆ ಆಲೋಚಿಸಿ’ ಎಂದು ಸಚಿವರು ಹೇಳಿದರು.

- ಕೇರಳ, ಮಹಾರಾಷ್ಟ್ರ ಜನರ ಪ್ರಯಾಣಕ್ಕೆ ನಿರ್ಬಂಧ ಹೇರಲಿಲ್ಲ. ಆದರೆ ರಾಜ್ಯದೊಳಗೆ ಬರುವವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯ.
- ಶಾಲೆಗಳನ್ನು ಹಂತಹಂತವಾಗಿ ತೆರೆಯುತ್ತಿದ್ದು, ಕೋವಿಡ್ ಸೋಂಕು ಹೆಚ್ಚಳದ ಸಮಸ್ಯೆಯಾಗಿಲ್ಲ.
- ಕೋವಿಡ್ 2 ನೇ ಅಲೆ ಬಾರದಂತೆ ಕ್ರಮ ವಹಿಸಲಾಗುತ್ತಿದೆ. ಮಾರ್ಚ್‌ನಿಂದ ಸಾಮಾನ್ಯ ಜನರಿಗೆ ಲಸಿಕೆ ನೀಡುವ ಬಗ್ಗೆ ಕೇಂದ್ರ ಸರ್ಕಾರ ಶೀಘ್ರವೇ ನಿರ್ಣಯ ಕೈಗೊಳ್ಳಲಿದೆ.

ಆರೋಗ್ಯ ಸಿಬ್ಬಂದಿಯ ಲಸಿಕೆ ಅಭಿಯಾನದಲ್ಲಿ ಬೆಂಗಳೂರು ಹಿಂದುಳಿದಿದೆ. ಬಾಗಲಕೋಟೆ, ದಾವಣಗೆರೆ, ಬೆಂಗಳೂರು ನಗರ, ಧಾರವಾಡ ಜಿಲ್ಲೆಗಳಲ್ಲಿ ಶೇ.50 ಕ್ಕಿಂತ ಕಡಿಮೆ ಇದೆ.

ಚಿಕ್ಕಬಳ್ಳಾಪುರ ಶೇ 79, ತುಮಕೂರು ಶೇ 78, ಉತ್ತರ ಕನ್ನಡ ಶೇ 73, ಗದಗ ಶೇ 71, ಚಿಕ್ಕಮಗಳೂರು ಶೇ 70, ಚಾಮರಾಜನಗರ ಶೇ 70 ರಷ್ಟು ಸಾಧನೆಯಾಗಿದೆ. ಮುಂಚೂಣಿ ಸಿಬ್ಬಂದಿಗೆ ಲಸಿಕೆ ನೀಡುವಲ್ಲಿ ಗದಗ ಶೇ 84, ತುಮಕೂರು ಶೇ 71 ಮುಂದಿದೆ. ಬಾಗಲಕೋಟೆ ಶೇ 23, ಬೆಂಗಳೂರು ನಗರ ಶೇ 26, ಚಾಮರಾಜನಗರ ಶೇ 27 ಇದೆ. ಈ ಜಿಲ್ಲೆಗಳಲ್ಲಿ ಶೇ 80 ರಷ್ಟು ಗುರಿ ಸಾಧಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	11.20 ಕೋಟಿ ▲	1.100 ಕೋಟಿ ▲	9,48,466 ▲
ಸಕ್ರಿಯ ಪ್ರಕರಣ	2.21 ಕೋಟಿ ▼	1.44 ಲಕ್ಷ ▲	6,061 ▲
ಗುಣಮುಖ	8.74 ಕೋಟಿ ▲	1.07 ಕೋಟಿ ▲	9,30,087 ▲
ಸಾವು	24.79 ಲಕ್ಷ ▲	1.56 ಲಕ್ಷ	12,299 ▲
ದಿನದ ಏರಿಕೆ: ಹೊಸ ಪ್ರಕರಣ	3.74 ಲಕ್ಷ ▼	14,278 ▲	317 ▼
ದಿನದ ಏರಿಕೆ: ಗುಣಮುಖ	3.62 ಲಕ್ಷ ▲	9,715 ▼	287 ▼
ದಿನದ ಏರಿಕೆ: ಸಾವು	8,528 ▼	83 ▼	05 ▲

128 ಐಸಿಯುನಲ್ಲಿ ಇರುವವರು ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 57,225 ಅಮೆರಿಕ ▼; 29,026 ಬ್ರೆಜಿಲ್ ▼; 22,046 ಫ್ರಾನ್ಸ್ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 92.81 ಅಮೆರಿಕ ▼; 32.73 ಫ್ರಾನ್ಸ್ ▲; 15.00 ಬ್ರಿಟನ್ ▼

ಎಲ್ಲಿ ಹೆಚ್ಚು ಸಾವು: ▲51,788 ಮಹಾರಾಷ್ಟ್ರ; ▲12,460 ತಮಿಳುನಾಡು; ▲10,901 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 21.00 ಮಹಾರಾಷ್ಟ್ರ; 10.36 ಕೇರಳ ▲; 8.89 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಕೇರಳ ಗಡಿಯಲ್ಲಿ ಕಟ್ಟುನಿಟ್ಟು

ಒಂದನೇ ಪುಟದಿಂದ

ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ವಿರುದ್ಧ ಘೋಷಣೆ ಕೂಗಿ, ರಸ್ತೆಯಲ್ಲಿ ಮಲಗಿ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಮಂಜೇಶ್ವರ ಇನ್‌ಸ್ಪೆಕ್ಟರ್ ಅರುಣ್ ದಾಸ್, ಕಾಸರಗೋಡು ಜಿಲ್ಲಾಡಳಿತದ ಜತೆಗೆ ಮಾತುಕತೆ ನಡೆಸುವುದಾಗಿ ತಿಳಿಸಿ, ಪ್ರತಿಭಟನಕಾರರ ಮನವೊಲಿಸಿದರು. ಮಂಗಳವಾರವೂ ತೊಂದರೆಯಾದಲ್ಲಿ ಪ್ರತಿಭಟನೆ ಮುಂದುವರಿಸುವುದಾಗಿ ಹೋರಾಟಗಾರರು ಹೇಳಿದ್ದಾರೆ.

‘ಅಂತರ ರಾಜ್ಯ ಗಡಿಗಳಲ್ಲಿ ವಾಹನಗಳಿಗೆ ತಡೆಯೊಡ್ಡಬಾರದು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ಈ ಆದೇಶವನ್ನು ಮುಂದಿಟ್ಟುಕೊಂಡು ನ್ಯಾಯಾಲಯದ ಮೆಟ್ಟಿಲು ಹತ್ತುತ್ತೇವೆ’ ಎಂದು ಕಾಸರಗೋಡು ಜಿಲ್ಲಾ ಪಂಚಾಯ್ತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹರ್ಷಾದ್ ವರ್ಕಾಡಿ ಹೇಳಿದ್ದಾರೆ.

ಗಡಿಯಲ್ಲಿ ಯಾರೇ ನಿರ್ಬಂಧ ಹೇರಿದರೂ ಕಾಸರಗೋಡಿನ ಜನರು ತೊಂದರೆ ಅನುಭವಿಸಬೇಕಾಗುತ್ತದೆ. ಈ ಆದೇಶ ಕೂಡಲೇ ಹಿಂಪಡೆಯಬೇಕು ಎಂದು ಬಿಜೆಪಿ ಕಾಸರಗೋಡು ಜಿಲ್ಲಾ ಘಟಕದ ಅಧ್ಯಕ್ಷ ಕೆ. ಶ್ರೀಕಾಂತ್ ಅವರು ಕರ್ನಾಟಕದ ಮುಖ್ಯಮಂತ್ರಿಯನ್ನು ಒತ್ತಾಯಿಸಿದ್ದಾರೆ.

ನಾಲ್ಕು ಕಡೆ ಚೆಕ್‌ಪೋಸ್ಟ್: ಕೇರಳದಿಂದ ಜಿಲ್ಲೆಗೆ ಬರುವ ಜನರಿಗೆ ತಲಪಾಡಿ, ಬಂಟ್ವಾಳ ತಾಲ್ಲೂಕಿನ ಸಾರಡ್ಕ, ಪುತ್ತೂರು ತಾಲ್ಲೂಕಿನ ನೆಟ್ಟಣಿಗೆ ಮುಡ್ನೂರು, ಮೇಣಾಲ ಹಾಗೂ ಸುಳ್ಯ ತಾಲ್ಲೂಕಿನ ಜಾಲ್ಸೂರು ಮೂಲಕ ಮಾತ್ರ ಅನುಮತಿ ನೀಡಲಾಗಿದೆ.

ಉಳಿದೆಲ್ಲಾ ಗಡಿ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಿದ್ದು, ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ತೆರೆದಿರುವ ಗಡಿ ಭಾಗದಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದ್ದು, ಕೋವಿಡ್ ನೆಗೆಟಿವ್ ವರದಿ ಇದ್ದವರಿಗೆ ಮಾತ್ರ ಒಳಬರಲು ಅವಕಾಶ ನೀಡಲಾಗುತ್ತಿದೆ.

ಬಸ್ ಪ್ರಯಾಣಕ್ಕೂ ಕಡ್ಡಾಯ: ಬಸ್‌ಗಳಲ್ಲಿ ಪ್ರಯಾಣಿಸುವವರೂ ಕಡ್ಡಾಯವಾಗಿ ನೆಗೆಟಿವ್ ವರದಿ ಹೊಂದಿರಬೇಕು. ವರದಿ ಪರಿಶೀಲಿಸಿದ ಬಳಿಕವೇ ಪ್ರಯಾಣಿಸಲು ಅವಕಾಶ ನೀಡಬೇಕು. ಅದಕ್ಕೆ ಆಯಾ ಬಸ್‌ನ ನಿರ್ವಾಹಕರು ಕ್ರಮ ವಹಿಸಬೇಕು. ನಿತ್ಯ ಪ್ರಯಾಣಿಸುವ ನೌಕರರು ಹಾಗೂ ವಿದ್ಯಾರ್ಥಿಗಳು ಪ್ರತಿ 15 ದಿನಕ್ಕೊಮ್ಮೆ ಕೋವಿಡ್ ನೆಗೆಟಿವ್ ವರದಿಯನ್ನು ಚೆಕ್‌ಪೋಸ್ಟ್‌ಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ಸೂಚಿಸಲಾಗಿದೆ.

ವರದಿ ಕಡ್ಡಾಯ: ವಿಜಯಪುರ–ಸೋಲಾಪುರ ರಾಷ್ಟ್ರೀಯ ಹೆದ್ದಾರಿಯ ಧೂಳಖೇಡ ಚೆಕ್‌ಪೋಸ್ಟ್ ಮತ್ತು ಚಡಚಣ– ಪಂಢರಾಪುರ ನಡುವಿನ ಶಿರಡೋಣ ಚೆಕ್ ಪೋಸ್ಟ್ ಮೂಲಕ ಕರ್ನಾಟಕಕ್ಕೆ ಪ್ರವೇಶಿಸುವ ಜನರಿಗೆ ಕೋವಿಡ್ ತಪಾಸಣೆ ನಡೆಸಿದ ಬಳಿಕವೇ ಬಿಡಲಾಗುತ್ತಿದೆ. ಕೋವಿಡ್ ಪರೀಕ್ಷಾ ವರದಿ ಇಲ್ಲದೇ ಬರುವವರನ್ನು ಮರಳಿ ಕಳುಹಿಸಲಾಗುತ್ತಿದೆ.

‘ಮಹಾರಾಷ್ಟ್ರದಿಂದ ಬರುವವರು 72 ಗಂಟೆಯ ಒಳಗಿನ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯವಾಗಿ ತರಬೇಕು. ನೆಗೆಟಿವ್ ವರದಿ ಇಲ್ಲದೇ ಜಿಲ್ಲೆಗೆ ಬರುವವರನ್ನು ವರದಿ ಬರುವರೆಗೂ ಕಡ್ಡಾಯವಾಗಿ ಕ್ವಾರಂಟೈನ್‌ನಲ್ಲಿ ಇರಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ವಿಜಯಪುರ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ತಿಳಿಸಿದ್ದಾರೆ

ರಾಹುಲ್ ಗಾಂಧಿ ಟ್ರ್ಯಾಕ್ಟರ್ ರ‍್ಯಾಲಿ

ವಯನಾಡ್ (ಪಿಟಿಐ): ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಬೆಂಬಲ ಸೂಚಿಸುವ ಸಲುವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಲೋಕಸಭಾ ಕ್ಷೇತ್ರ ಕೇರಳದ ವಯನಾಡ್‌ನಲ್ಲಿ ಟ್ರ್ಯಾಕ್ಟರ್ ರ‍್ಯಾಲಿ ನಡೆಸಿದರು.

ವಯನಾಡ್‌ನ ತ್ರಿಕ್ಕೈಪಟ್ಟದಿಂದ ಮುತ್ತಿಲ್ ವರೆಗೆ 6 ಕಿ.ಮೀ. ಟ್ರ್ಯಾಕ್ಟರ್ ರ‍್ಯಾಲಿ ನಡೆಸಿದ ಬಳಿಕ ಮಾತನಾಡಿದ ಅವರು, ‘ಕೃಷಿ ಮಾತ್ರವೇ ಭಾರತ ಮಾತೆಗೆ ಸಂಬಂಧಿಸಿದ ಏಕೈಕ ಉದ್ಯಮ. ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಜನರು ಒತ್ತಡ ಹೇರಬೇಕು’ ಎಂದು ಕರೆ ನೀಡಿದ್ದಾರೆ.

‘ಭಾರತೀಯ ರೈತರು ಎದುರಿಸುತ್ತಿರುವ ಕಷ್ಟಗಳನ್ನು ಇಡೀ ಜಗತ್ತು ನೋಡುತ್ತಿದೆ. ಆದರೆ, ಕೇಂದ್ರ ಸರ್ಕಾರಕ್ಕೆ ರೈತರ ನೋವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ರಾಹುಲ್ ದೂರಿದ್ದಾರೆ.

ಭಾರತೀಯ ರೈತರ ಸ್ಥಿತಿಯ ಬಗ್ಗೆ ಪಾಪ್ ತಾರೆಯರು ಪ್ರತಿಕ್ರಿಯಿಸುತ್ತಾರೆ. ಆದರೆ ಭಾರತ ಸರ್ಕಾರಕ್ಕೆ ಆಸಕ್ತಿ ಇಲ್ಲ. ಒತ್ತಡ ಹೇರದ ಹೊರತು ಅವರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲಾರರು ಎಂದು ಅವರು ಹೇಳಿದ್ದಾರೆ.

2014ರಲ್ಲಿ ನರೇಂದ್ರ ಮೋದಿ ಅರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ವಿರೋಧಿಸಿ ವ್ಯಂಗ್ಯ ಮಾಡಿದ್ದರು. ಆದರೆ, ಕೋವಿಡ್–19 ಸಂದರ್ಭದಲ್ಲಿ ಜನಸಾಮಾನ್ಯರಿಗೆ ಇದೇ ಯೋಜನೆ ನೆರವಾಯಿತು ಎಂದು ಹೇಳಿದರು.

ಅಮೆರಿಕದಲ್ಲಿ ‘ಕೋವಿಡ್’ನಿಂದ ಸತ್ತವರ ಸಂಖ್ಯೆ ಸುಮಾರು 5 ಲಕ್ಷ!

ವಾಷಿಂಗ್ಟನ್: ಅಮೆರಿಕದಲ್ಲಿ ‘ಕೋವಿಡ್ 19‘ ಸಾಂಕ್ರಾಮಿಕದಿಂದ ಸತ್ತವರ ಸಂಖ್ಯೆ 5 ಲಕ್ಷ ತಲುಪುತ್ತಿದೆ.

ಕೋವಿಡ್ ಸಾಂಕ್ರಾಮಿಕ ಆವರಿಸಿ ಒಂದು ವರ್ಷ ಕಳೆದಿದೆ. ಈ ಸೋಂಕಿಗೆ 4,98,000 ಜೀವಗಳು ಬಲಿಯಾಗಿವೆ. ಈ ಸಂಖ್ಯೆ ಅಂದಾಜು ಅಮೆರಿಕದ ಮಿಸ್ಸೂರಿಯ ಕಾನ್ಸಾಸ್ ನಗರದ ಜನಸಂಖ್ಯೆಗೆ ಸಮಾನವಾದದ್ದು. ಹೆಚ್ಚು ಕಡಿಮೆ ಅಟ್ಲಾಂಟಾದಷ್ಟೇ ಗಾತ್ರದ ಪ್ರದೇಶವಿದು. ಈ ಪ್ರಮಾಣದ ಸಾವುಗಳು ನಿಜಕ್ಕೂ ಆತಂಕಕಾರಿ.

ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ ಸಂಗ್ರಹಿಸಿದ ಈ ಅಂಕಿ– ಅಂಶಗಳು, 2019ರಲ್ಲಿ ಧೀರ್ಘಕಾಲದಿಂದ ಉಸಿರಾಟದ ಸಮಸ್ಯೆಗಳನ್ನು ಹೊಂದಿರುವವರು, ಪಾರ್ಶ್ವವಾಯು ಪೀಡಿತರು, ಅಲ್ಜಮೈರ್, ಜ್ವರ ಮತ್ತು ನ್ಯುಮೋನಿಯಾಗಳಿಂದ ಸಾವನ್ನಪ್ಪಿದವರ ಸಂಖ್ಯೆಯನ್ನೂ ಮೀರಿಸುತ್ತದೆ.

‘1918ರಲ್ಲಿ ಇನ್‌ಫ್ಲೂಯೆಂಜ ಸೋಂಕು ಹೊರತುಪಡಿಸಿದರೆ, ಕಳೆದ 102 ವರ್ಷಗಳಲ್ಲಿ ಸೋಂಕಿನಿಂದ ಇಷ್ಟು ಪ್ರಮಾಣದಲ್ಲಿ ಸಾವನ್ನಪ್ಪಿದವರನ್ನು ದೇಶ ಕಂಡಿರಲಿಲ್ಲ‘ ಎಂದು ಸೋಂಕು ರೋಗ ತಜ್ಞ ಡಾ. ಆಂಥೋನಿ ಫೌಸಿ ‘ಸಿಎನ್‌ಎನ್ ‘ಸ್ಟೇಟ್ ಆಫ್ ದಿ ಯೂನಿಯನ್‘ನಲ್ಲಿ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ, ಈ ವರ್ಷದ ಜನವರಿ 19ರವರೆಗಿನ ಅಂಕಿ ಅಂಶಗಳ ಪ್ರಕಾರ, ಅಮೆರಿಕದಲ್ಲಿ ಕೊರೊನಾ ಸೋಂಕಿನಿಂದ ಸಾವನ್ನಪ್ಪಿದವರ ಸಂಖ್ಯೆ 4 ಲಕ್ಷ ತಲುಪಿತ್ತು.

ಅಮೆರಿಕದಲ್ಲಿ ಕೊರೊನಾ ಸೋಂಕಿನಿಂದ ಮೊದಲ ಸಾವು ಸಂಭವಿಸಿದ್ದು ಫೆಬ್ರವರಿ 2020ರ ಆರಂಭದಲ್ಲಿ. ಕ್ಯಾಲಿಫೋರ್ನಿಯಾದ ಸಾಂತಾ ಕ್ಲಾರಾ ಕೌಂಟಿಯಲ್ಲಿ ಈ ಸೋಂಕಿನಿಂದ ಇಬ್ಬರು ಮೃತಪಟ್ಟರು. ಅದಾದ ಮೇಲೆ, ನಾಲ್ಕು ತಿಂಗಳ ನಂತರ 1 ಲಕ್ಷ ಮಂದಿ ಸಾವನ್ನಪ್ಪಿದರು.

ಸೆಪ್ಟೆಂಬರ್ ತಿಂಗಳಲ್ಲಿ ಈ ಸಾವಿನ ಪ್ರಮಾಣ 2 ಲಕ್ಷ ಮತ್ತು ಡಿಸೆಂಬರ್‌ನಲ್ಲಿ 3 ಲಕ್ಷಕ್ಕೆ ತಲುಪಿತು. ಆದರೆ, ಒಂದೇ ತಿಂಗಳಲ್ಲಿ ಸಾವಿನ ಸಂಖ್ಯೆ 3 ಲಕ್ಷದಿಂದ 4 ಲಕ್ಷಕ್ಕೆ ಏರಿತು.

ಆ ನಂತರದ ಎರಡು ತಿಂಗಳಲ್ಲಿ ಸಾವಿನ ಸಂಖ್ಯೆ 4 ಲಕ್ಷದಿಂದ 5 ಲಕ್ಷದ ಅಂಚಿಗೆ ತಲುಪಿದೆ.

ವಯನಾಡ್‌ನ ತ್ರಿಕ್ಕೈಪಟ್ಟದಿಂದ ಮುತ್ತಿಲ್‌ವರೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ರ್ಯಾಕ್ಟರ್ ರ‍್ಯಾಲಿ ನಡೆಸಿದರು ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಧ್ವಜ ಹಾರಿಸಿದ ಮತ್ತೊಬ್ಬನ ಬಂಧನ

ನವದೆಹಲಿ: ಗಣರಾಜ್ಯೋತ್ಸವ ದಿನದಂದು ನವದೆಹಲಿಯಲ್ಲಿ ನಡೆದ ಹಿಂಸಾಚಾರ ಹಾಗೂ ಕೆಂಪು ಕೋಟೆಯಲ್ಲಿ ಧ್ವಜ ಹಾರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ 29 ವರ್ಷದ ಜಸ್‌ಪ್ರೀತ್ ಸಿಂಗ್ ಅವರನ್ನು ದೆಹಲಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಐತಿಹಾಸಿಕ ಸ್ಮಾರಕದಲ್ಲಿ ಖಡ್ಗವನ್ನು ಹಿಡಿದು ಧಾರ್ಮಿಕ ಧ್ವಜ ಹಾರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಸ್‌ಪ್ರೀತ್ ಸಿಂಗ್ ಅವರನ್ನು ಬಂಧಿಸಲಾಗಿದೆ. ಕಳೆದ ವಾರ ಬಂಧಿಸಲಾಗಿರುವ ಮಣಿಂದರ್ ಸಿಂಗ್ ಅವರ ಸಹಚರರಲ್ಲಿ ಇವರು ಒಬ್ಬರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಜನವರಿ 26ರಂದು ರೈತ ಸಂಘಟನೆಗಳು ನಡೆಸಿದ ಟ್ರ್ಯಾಕ್ಟರ್ ರ‍್ಯಾಲಿ ಸಾವಿರಾರು ಪ್ರತಿಭಟನಾಕಾರರು ಪೊಲೀಸರೊಂದಿಗೆ ಸಂಘರ್ಷಕ್ಕಿಳಿದಿದ್ದರು.

ಅಭಿಷೇಕ್ ನಾದಿನಿ ಮನೆಯಲ್ಲಿ ತಪಾಸಣೆ

ಕೋಲ್ಕತ್ತ: ಕಲ್ಲಿದ್ದಲು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತಂಡ ಸೋಮವಾರ ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ನಾದಿನಿ ಮೇನಕಾ ಗಂಭೀರ್ ಅವರ ಮನೆಯಲ್ಲಿ ತಪಾಸಣೆ ನಡೆಸಿತು.

ಸಿಬಿಐ ಇಬ್ಬರು ಮಹಿಳಾ ಅಧಿಕಾರಿಗಳು ಸುಮಾರು ಮೂರು ಗಂಟೆಗಳ ಕಾಲ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಗರದ ಮೆಟ್ರೊಪಾಲಿಟನ್ ಬೈಪಾಸ್ ಬಳಿಯ ಮೇನಕಾ ನಿವಾಸದಲ್ಲಿ ದಾಖಲೆಗಳನ್ನು ಪರಿಶೀಲಿಸಿದರು.

ಕಲ್ಲಿದ್ದಲು ಅಕ್ರಮ ಪ್ರಕರಣದಲ್ಲಿ ತನಿಖೆಗೆ ಸಹಕರಿಸುವಂತೆ ಮೇನಕಾ ಅವರಿಗೆ ಸಿಬಿಐ ಭಾನುವಾರ ನೋಟಿಸ್ ನೀಡಿತ್ತು.

ಕಳೆದ ವರ್ಷ ನವೆಂಬರ್‌ನಲ್ಲಿ ಕಲ್ಲಿದ್ದಲು ದಂಧೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಮಾಂಝಿ ಅಲಿಯಾಸ್ ಲಾಲಾ ಸೇರಿದಂತೆ ಹಲವರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿತ್ತು.



ದಿಶಾ ರವಿ

ಟೂಲ್‌ಕಿಟ್: ಮತ್ತೆ ಒಂದು ದಿನ ಪೊಲೀಸ್ ವಶಕ್ಕೆ ದಿಶಾ ರವಿ

ನವದೆಹಲಿ: ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸುವ ಹೆಸರಿನಲ್ಲಿ ಟೂಲ್‌ಕಿಟ್ ರಚಿಸಲಾಗಿದೆ ಎಂಬ ಆರೋಪದಲ್ಲಿ ಬಂಧಿಸಲಾಗಿರುವ ದಿಶಾ ರವಿ ಅವರನ್ನು ಮತ್ತೆ ಒಂದು ದಿನದ ಮಟ್ಟಿಗೆ ಪೊಲೀಸ್ ವಶಕ್ಕೆ ಒಪ್ಪಿಸಲಾಗಿದೆ.

ಫೆಬ್ರುವರಿ 13ರಂದು ದೆಹಲಿ ಪೊಲೀಸರು ದಿಶಾ ಅವರನ್ನು ಬಂಧಿಸಿದ್ದರು. ಸೋಮವಾರ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಮುಂದೆ ದಿಶಾ ಅವರನ್ನು ಹಾಜರುಪಡಿಸಲಾಯಿತು. ನ್ಯಾಯಾಲಯ ಕೇವಲ ಒಂದು ದಿನದ ಮಟ್ಟಿಗೆ ಪೊಲೀಸ್ ವಶಕ್ಕೆ ನೀಡಲು ಒಪ್ಪಿಗೆ ಸೂಚಿಸಲಾಯಿತು. ಮಂಗಳವಾರ ಮತ್ತೆ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು.

ಹೆಚ್ಚಿನ ವಿಚಾರಣೆಗಾಗಿ ಐದು ದಿನಗಳ ಕಾಲ ತಮ್ಮ ವಶಕ್ಕೆ ನೀಡಬೇಕು ಎಂದು ದೆಹಲಿ ಪೊಲೀಸರು ಕೋರಿದ್ದರು.

ದಿಶಾ ಸಲ್ಲಿಸಿರುವ ಜಾಮೀನು ಅರ್ಜಿಯ ಬಗ್ಗೆ ವಿಶೇಷ ನ್ಯಾಯಾಲಯ ಮಂಗಳವಾರ ತೀರ್ಪು ನೀಡುವ ಸಾಧ್ಯತೆ ಇದೆ.

ಆರೋಗ್ಯ ಪರಿಸ್ಥಿತಿ ಆಧಾರದ ಮೇಲೆ ಜಾಮೀನು ನೀಡಿದ ಬಾಂಬೆ ಹೈಕೋರ್ಟ್

ಎಲ್ಗರ್ ಪ್ರಕರಣ: ವರವರ ರಾವ್‌ಗೆ ಜಾಮೀನು

ಮುಂಬೈ(ಪಿಟಿಐ): ಸಾಮಾಜಿಕ ಕಾರ್ಯಕರ್ತ ಮತ್ತು ಕವಿ ವರವರ ರಾವ್ ಅವರಿಗೆ ಆರೋಗ್ಯ ಪರಿಸ್ಥಿತಿಯ ಆಧಾರದ ಮೇಲೆ ಬಾಂಬೆ ಹೈಕೋರ್ಟ್ ಸೋಮವಾರ ಆರು ತಿಂಗಳು ಮಧ್ಯಂತರ ಜಾಮೀನು ನೀಡಿದೆ.

82 ವರ್ಷದ ರಾವ್ ಅವರ ಆರೋಗ್ಯ ಮತ್ತಷ್ಟು ಹದಗೆಡುವುದನ್ನು ನೋಡುತ್ತ ‘ಮೌನ ವೀಕ್ಷಕನಾಗಲು’ ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಎಲ್ಗರ್ ಪರಿಷತ್ ಪ್ರಕರಣದಲ್ಲಿ ಆರೋಪಿಯಾಗಿರುವ ವರವರ ರಾವ್ ಅವರನ್ನು ತಲೋಜಾ ಕೇಂದ್ರೀಯ ಕಾರಾಗೃಹದಲ್ಲಿರಿಸಲಾಗಿತ್ತು. ಅಸ್ವಸ್ಥರಾದ ಬಳಿಕ ಅವರನ್ನು ಮುಂಬೈನ ನಾನಾವತಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.



ವರವರ ರಾವ್

ಮಾನವೀಯತೆ ಆಧಾರದ ಮೇಲೆ ರಾವ್ ಅವರಿಗೆ ಪರಿಹಾರ ದೊರೆಯಲು ಸಾಧ್ಯವಿಲ್ಲ ಎನ್ನುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಾದವನ್ನು ನ್ಯಾಯಾಲಯ ತಿರಸ್ಕರಿಸಿತು. ಆದರೆ, ಹಲವು ಷರತ್ತುಗಳನ್ನು ವಿಧಿಸಲಾಗಿದೆ.

ಆರು ತಿಂಗಳ ಜಾಮೀನಿನ ಅವಧಿಯಲ್ಲಿ ಎನ್‌ಐಎ ನ್ಯಾಯಾಲಯದ ವ್ಯಾಪ್ತಿಯಲ್ಲೇ ಇರಬೇಕು ಎಂದು ನ್ಯಾಯಮೂರ್ತಿಗಳಾದ ಎಸ್.ಎಸ್. ಶಿಂಧೆ ಮತ್ತು ಮನಿಷ್ ಪಿಟಾಲೆ ಅವರನ್ನೊಳಗೊಂಡ ಪೀಠವು ನಿರ್ದೇಶನ ನೀಡಿದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಸಹ ಆರೋಪಿಗಳನ್ನು ಸಂಪರ್ಕಿಸಬಾರದು. ಮುಂಬೈನಲ್ಲೇ ಇರಬೇಕು. 15 ದಿನಗಳಿಗೊಮ್ಮೆ ಸಮೀಪದ ಪೊಲೀಸ್ ಠಾಣೆಗೆ ವಿಡಿಯೊ ಕಾಲ್ ಮೂಲಕ ಸಂಪರ್ಕಿಸಬೇಕು ಹಾಗೂ ಬೃಹತ್ ಸಭೆಗಳಲ್ಲಿ ಪಾಲ್ಗೊಳ್ಳಬಾರದು ಎಂದು ರಾವ್ ಅವರಿಗೆ ಸೂಚಿಸಲಾಗಿದೆ.

ನಾನಾವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡ ಬಳಿಕ ಮುಂಬೈನಲ್ಲಿರುವ ಸರ್ಕಾರಿ ಜೆ.ಜೆ. ಆಸ್ಪತ್ರೆಯ ಕಾರಾಗೃಹ ವಾರ್ಡ್‌ಗೆ ದಾಖಲಿಸಲಾಗುವುದು ಎಂದು ಮಹಾರಾಷ್ಟ್ರ ಸರ್ಕಾರ ಮಂಡಿಸಿದ್ದ ವಾದವನ್ನು ಸಹ ಪೀಠವು ತಿರಸ್ಕರಿಸಿದೆ. ತಲೋಜಾ ಕೇಂದ್ರೀಯ ಕಾರಾಗೃಹಕ್ಕೆ ಮತ್ತೆ ಕಳುಹಿಸುವುದರಿಂದ ರಾವ್ ಅವರ ಜೀವವನ್ನು ಅಪಾಯಕ್ಕೆ ಒಡ್ಡಿದಂತಾಗುತ್ತದೆ. ಜತೆಗೆ, ಆರೋಗ್ಯ ಮತ್ತು ಜೀವನದ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ ಎಂದು 92 ಪುಟಗಳ ಆದೇಶದಲ್ಲಿ ಪೀಠವು ಹೇಳಿದೆ.

ಕಾರಾಗೃಹದಲ್ಲಿದ್ದಾಗಲೇ ರಾವ್ ತೀವ್ರ ಅನಾರೋಗ್ಯಕ್ಕಿಡಾಗಿದ್ದರು. ಜತೆಗೆ, ಕೋವಿಡ್–19 ಸೋಂಕಿಗೆ ಒಳಗಾಗಿದ್ದರು. ಹೈಕೋರ್ಟ್ ಮಧ್ಯಪ್ರವೇಶಿಸಿದ ಬಳಿಕವೇ ಅವರನ್ನು ನಾನಾವತಿ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಪೀಠವು ಉಲ್ಲೇಖಿಸಿತು. ಆರು ತಿಂಗಳ ಜಾಮೀನಿನ ಅವಧಿ ಮುಗಿದ ಬಳಿಕ ಎನ್‌ಐಎ ನ್ಯಾಯಾಲಯಕ್ಕೆ ಶರಣಾಗಬೇಕು ಅಥವಾ ಜಾಮೀನು ಅವಧಿ ವಿಸ್ತರಣೆಗೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ.

ಚೀನಾ ಕಂಪನಿಗಳ ಹೂಡಿಕೆಗೆ ಕೇಂದ್ರ ಸರ್ಕಾರ ಒಪ್ಪಿಗೆ?

ನವದೆಹಲಿ (ರಾಯಿಟರ್ಸ್): ಚೀನಾದ ವಿವಿಧ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡುವ 45 ಪ್ರಸ್ತಾವಗಳಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡುವ ಸಾಧ್ಯತೆ ಇದೆ. ಚೀನಾದ ಜತೆಗೆ ಲಡಾಖ್‌ನಲ್ಲಿನ ಗಡಿ ಸಂಘರ್ಷವು ಶಮನವಾದ ಬೆನ್ನಲ್ಲೇ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ ಎಂದು ಮೂಲಗಳು ಹೇಳಿವೆ.

45 ಪ್ರಸ್ತಾವಗಳಲ್ಲಿ ಚೀನಾದ ಆಟೊಮೊಬೈಲ್ ದೈತ್ಯ ಗ್ರೇಟ್ ವಾಲ್ ಮೋಟರ್ಸ್ ಭಾರತದಲ್ಲಿ ಕಾರ್ಯಾಚರಣೆ ಆರಂಭಿಸುವ ಪ್ರಸ್ತಾವವೂ ಇದೆ. ಅಮೆರಿಕದ ಜನರಲ್ ಮೋಟರ್ಸ್‌ನ ಭಾರತದಲ್ಲಿನ ಕಾರು ತಯಾರಿಕಾ ಘಟಕ ಖರೀದಿಸಿ, ತಯಾರಿಕೆ ಆರಂಭಿಸುವ ಪ್ರಸ್ತಾವನ್ನು ಗ್ರೇಟ್ ವಾಲ್ ಮೋಟರ್ಸ್ ಮತ್ತು ಜನರಲ್ ಮೋಟರ್ಸ್ ಈ ಹಿಂದೆ ಜಂಟಿಯಾಗಿ ಸಲ್ಲಿಸಿದ್ದವು. ಈ ಪ್ರಸ್ತಾವಕ್ಕೆ ಒಪ್ಪಿಗೆ ದೊರೆತಿರಲಿಲ್ಲ. ಗ್ರೇಟ್ ವಾಲ್ ಮೋಟರ್ಸ್ ಮುಂದಿನ ಒಂದೆರಡು ವರ್ಷಗಳಲ್ಲಿ ಭಾರತದಲ್ಲಿ ನೂರು ಕೋಟಿ ಅಮೆರಿಕನ್ ಡಾಲರ್ (ಅಂದಾಜು ₹7,250 ಕೋಟಿ) ಹೂಡಿಕೆ ಮಾಡುವ ಯೋಜನೆ ಹೊಂದಿದೆ. ಭಾರತದಲ್ಲಿ ವಿದ್ಯುತ್‌ಚಾಲಿತ ವಾಹನಗಳ ತಯಾರಿಕೆ, ಮಾರಾಟಕ್ಕೆ ಒತ್ತು ನೀಡಲಾಗುತ್ತದೆ ಎಂದು ಕಂಪನಿಯ ವಕ್ತಾರರು ಹೇಳಿದ್ದಾರೆ.

45 ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲು ಸರ್ಕಾರವು ಅಂತಿಮ ಹಂತದ ಸಿದ್ಧತೆ ನಡೆಸಿದೆ ಎಂದು ಸರ್ಕಾರದ ಇಬ್ಬರು ಉನ್ನತಾಧಿಕಾರಿಗಳು ಮತ್ತು ಇಬ್ಬರು ಕೈಗಾರಿಕೋದ್ಯಮಿಗಳು ತಿಳಿಸಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಸರಣಿಯ ಮೂರನೇ ಪಂದ್ಯ: 100ನೇ ಟೆಸ್ಟ್‌ಗೆ ಸಜ್ಜಾಗಿರುವ ಬೌಲರ್

ಐಸಿಸಿ ಚಾಂಪಿಯನ್‌ಷಿಪ್ ಮೇಲೆ ಇಶಾಂತ್ ಕಣ್ಣು

ಅಹಮದಾಬಾದ್ (ಎಎಫ್‌ಪಿ): ವಿಶ್ವದ ಅತಿದೊಡ್ಡ ಕ್ರಿಕೆಟ್ ಮೈದಾನ ಎಂದು ಹೇಳಲಾಗುವ ನವೀಕೃತ ಮೊಟೆರಾ ಕ್ರೀಡಾಂಗಣದಲ್ಲಿ ಮೂರನೇ ಟೆಸ್ಟ್ ಪಂದ್ಯ ಆಡಲು ಭಾರತ ಮತ್ತು ಇಂಗ್ಲೆಂಡ್ ತಂಡಗಳು ಸಜ್ಜಾಗಿವೆ. ಬುಧವಾರ ಆರಂಭವಾಗಲಿರುವ ಹೊನಲು ಬೆಳಕಿನ (ಪಿಂಕ್ ಬಾಲ್) ಟೆಸ್ಟ್ ಪಂದ್ಯದಲ್ಲಿ ಭಾರತದ ಇಶಾಂತ್ ಶರ್ಮಾ 'ಶತಕ'ದ ಮೈಲುಗಲ್ಲು ಸ್ಥಾಪಿಸಲು ಸಿದ್ಧವಾಗಿದ್ದಾರೆ.

ಆದರೆ 100ನೇ ಪಂದ್ಯ ಆಡುವುದಕ್ಕಿಂತ, ಈ ಪಂದ್ಯ ಗೆದ್ದು ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ಗೆ ಲಗ್ಗೆ ಇಡುವ ಕನಸು ಜೀವಂತವಾಗಿರಿಸುವುದರ ಬಗ್ಗೆ ಹೆಚ್ಚು ಉತ್ಸುಕನಾಗಿರುವುದಾಗಿ ಇಶಾಂತ್ ಹೇಳಿದ್ದಾರೆ.

ಚೆನ್ನೈನಲ್ಲಿ ನಡೆದ ಮೊದಲೆರಡು ಪಂದ್ಯಗಳಲ್ಲಿ ಉಭಯ ತಂಡಗಳು ತಲಾ ಒಂದೊಂದನ್ನು ಗೆದ್ದುಕೊಂಡಿವೆ. ಆದ್ದರಿಂದ ಸರಣಿ ಗೆಲುವಿಗೆ ಮೊಟೆರಾ ಅಂಗಣದ ಪಂದ್ಯದಲ್ಲಿ ಜಯ ಗಳಿಸುವತ್ತ ಎರಡೂ ತಂಡಗಳು ಚಿತ್ತ ಹರಿಸಲಿವೆ. ಈ ಪಂದ್ಯದಲ್ಲಿ ಗೆದ್ದರೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೆಣಸುವ ಹಾದಿಯೂ ಸುಗಮವಾಗಲಿದೆ. ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೇರಲು ಭಾರತ ಈ ಸರಣಿಯಲ್ಲಿ ಜಯ ಗಳಿಸಬೇಕು. ಇಂಗ್ಲೆಂಡ್ 3–1ರಲ್ಲಿ ಗೆಲ್ಲಬೇಕು.

'ಈಗ ನನ್ನ ಮನಸ್ಸಿನಲ್ಲಿರುವುದು ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಕುರಿತ ವಿಚಾರ ಮಾತ್ರ. ನಾನು ಈಗ ಟೆಸ್ಟ್ ಮಾದರಿಯಲ್ಲಷ್ಟೇ ಆಡುತ್ತಿದ್ದೇನೆ. ಆದ್ದರಿಂದ ಈ ಚಾಂಪಿಯನ್‌ಷಿಪ್ ನನಗೆ ವಿಶ್ವಕಪ್ ಇದ್ದಂತೆ. ಹೀಗಾಗಿ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದರೆ ನನ್ನ ಪಾಲಿಗೆ ವಿಶ್ವಕಪ್ ಗೆಲುವು ಆಗಲಿದೆ' ಎಂದು 32 ವರ್ಷದ ಇಶಾಂತ್ ಹೇಳಿದರು.

ಕಳೆದ ವರ್ಷ ಫೆಬ್ರುವರಿಯಲ್ಲಿ ಅಮೆರಿಕದ ಅಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತ ಪ್ರವಾಸ ಕೈಗೊಂಡಿದ್ದಾಗ ಸಮಾವೇಶ ಏರ್ಪಡಿಸಿದ್ದ ಮೊಟೆರಾ ಕ್ರೀಡಾಂಗಣದಲ್ಲಿ ಒಂದು ಲಕ್ಷದ 10 ಸಾವಿರ ಆಸನಗಳು ಇವೆ. ಟೆಸ್ಟ್ ಪಂದ್ಯಕ್ಕೆ 50 ಸಾವಿರಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಲಿವೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಪಿಂಕ್ ಬಾಲ್, ಎಲ್ಇಡಿ ಬಲ್ಬ್‌ಗಳ ಬೆಳಕು ಮತ್ತು ಕ್ರೀಡಾಂಗಣದ ವಿಸ್ತಾರ ನಿಜಕ್ಕೂ ವಿಶೇಷ ಅನುಭವ ನೀಡಲಿದೆ. ಹೊಸ ಕ್ರೀಡಾಂಗಣದಲ್ಲಿ ಕೆಲವೊಂದು ಸವಾಲನ್ನೂ ಎದುರಿಸಬೇಕಾಗಿದೆ' ಎಂದು ಭಾರತದ 'ಹಿಟ್ ಮ್ಯಾನ್' ರೋಹಿತ್ ಶರ್ಮಾ ಅಭಿಪ್ರಾಯಪಟ್ಟರು.

ಮೊಟೆರಾ ಕ್ರೀಡಾಂಗಣದ ಪ್ರೇಕ್ಷಕರ ಸ್ಟ್ಯಾಂಡ್‌ಗಳನ್ನು ಸ್ವಚ್ಛಗೊಳಿಸಿದ ಸಿಬ್ಬಂದಿ – ಎಎಫ್‌ಪಿ ಚಿತ್ರ

ಇಶಾಂತ್ ಶರ್ಮಾ–ಪಿಟಿಐ ಚಿತ್ರ

ಉಮೇಶ್ ಯಾದವ್‌ಗೆ ಸ್ಥಾನ

ಉಮೇಶ್ ಯಾದವ್

ಇಂಗ್ಲೆಂಡ್ ಎದುರಿನ ಕೊನೆಯ ಎರಡು ಟೆಸ್ಟ್ ಪಂದ್ಯಗಳಿಗೆ ಸೋಮವಾರ ಪ್ರಕಟಿಸಿರುವ ತಂಡದಲ್ಲಿ ವೇಗಿ ಉಮೇಶ್ ಯಾದವ್ ಸ್ಥಾನ ಗಳಿಸಿದ್ದಾರೆ. ಫಿಟ್‌ನೆಸ್ ಪರೀಕ್ಷೆಯ ನಂತರ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಬಿಸಿಸಿಐ ತಿಳಿಸಿದೆ. ಶಾರ್ದೂಲ್ ಠಾಕೂರ್ ಅವರನ್ನು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಮುಂಬೈ ಪರವಾಗಿ ಆಡುವುದಕ್ಕಾಗಿ ಬಿಟ್ಟುಕೊಡಲಾಗಿದೆ.

ಮೆಲ್ಬರ್ನ್‌ನಲ್ಲಿ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ ಉಮೇಶ್ ಯಾದವ್ ಮೀನಖಂಡದ ನೋವಿನಿಂದ ಬಳಲಿದ್ದರು. ಹೀಗಾಗಿ ತವರಿಗೆ ಮರಳಿದ್ದರು. ಮೊಟೆರಾದಲ್ಲಿ ನಡೆಯಲಿರುವ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಉಮೇಶ್ ಸೇರಿದಂತೆ ಮೂವರು ವೇಗಿಗಳಿಗೆ ಭಾರತ ತಂಡದಲ್ಲಿ ಅವಕಾಶ ಸಿಗುವ ಸಾಧ್ಯತೆ ಇದೆ.

ಕೊನೆಯ ಎರಡು ಪಂದ್ಯಗಳಿಗೆ ತಂಡ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಮಯಂಕ್ ಅಗರವಾಲ್, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ (ಉಪನಾಯಕ), ಕೆ.ಎಲ್.ರಾಹುಲ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್ ಕೀಪರ್), ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಆರ್.ಅಶ್ವಿನ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಇಶಾಂತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್.

'ಫಿಟ್ ಇಂಡಿಯಾಗಾಗಿ ಫಿಟ್ ಬೆಂಗಳೂರು' ಕಾರ್ಯಕ್ರಮದಲ್ಲಿ ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಬಸವನಗುಡಿ ಈಜು ಕೇಂದ್ರದಲ್ಲಿ ಈಜಿದರು. – ಪ್ರಜಾವಾಣಿ ಚಿತ್ರ

ಸಾಯ್‌ಯಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ಕೇಂದ್ರದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಸಿದ್ಧವಾಗಲಿದೆ. ಮಹಿಳೆಯರಿಗೆ 330 ಹಾಸಿಗೆಗಳ ವಸತಿ ನಿಲಯ, ಅಡುಗೆ ಮನೆ ಮತ್ತು ಊಟದ ಕೋಣೆಯೂ ನಿರ್ಮಾಣವಾಗಲಿದೆ. ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಸೋಮವಾರ ಕಾಮಗಾರಿಗಳಿಗೆ ಚಾಲನೆ ನೀಡಿದರು.

400 ಮೀಟರ್ಸ್ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ನಲ್ಲಿ ಎಂಟು ಲೇನ್‌ಗಳು ಇರಲಿದ್ದು ಎರಡು ಹೆಚ್ಚುವರಿ ನೇರ ಲೇನ್‌ಗಳೂ ಇರುತ್ತವೆ. 500 ಮೀಟರ್ಸ್ ಆವೆಮಣ್ಣಿನ ಟ್ರ್ಯಾಕ್ ಮತ್ತು 100 ಮೀಟರ್ಸ್ ಮರಳಿನ ಟ್ರ್ಯಾಕ್ ಕೂಡ ಇರಲಿದ್ದು ಹೈ ಪರ್ಫಾರ್ಮೆನ್ಸ್ ತರಬೇತಿಯನ್ನು ಗುರಿಯಾಗಿರಿಕೊಂಡು ಈ ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಖೇಲೊ ಇಂಡಿಯಾದಲ್ಲಿ ಮೀಸಲಿಟ್ಟಿರುವ ಬಜೆಟ್‌ನ ₹ 13.86 ಕೋಟಿ ಮೊತ್ತವನ್ನು ಇದಕ್ಕಾಗಿ ಬಳಸಲಾಗುತ್ತಿದ್ದು 2022ರಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ.

ಸಾಯ್‌ನಲ್ಲಿ ತರಬೇತಿ ಪಡೆಯುವ ಹಾಕಿಪಟುಗಳಿಗಾಗಿ ₹ 4.41 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಜಿಮ್‌ಗೆ ಸಚಿವರು ಚಾಲನೆ ನೀಡಿದರು. ಇದರಲ್ಲಿ ಫಿಜಿಯೊ ಥೆರಪಿ ಮತ್ತು ಮಸಾಜ್ ಕೊಠಡಿ ಇರದೆ. ರಾಜ್ಯ ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಮತ್ತು ಸಾಯ್ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಅಜಯ್ ಬಹ್ಲ್ ಇದ್ದರು.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಯಲ್ಲಿ ಖೇಲೊ ಇಂಡಿಯಾ ಬ್ಯಾಡ್ಮಿಂಟನ್ ಕೇಂದ್ರವನ್ನು ಸಚಿವರು ಉದ್ಘಾಟಿಸಿದರು. ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಕ್ರೀಡಾಪಟುಗಳಿಗೆ ಎಲ್ಲ ರೀತಿಯ ನೆರವನ್ನು ನೀಡಲಾಗುವುದು. ಕೋವಿಡ್ ಲಸಿಕೆ ನೀಡುವಾಗ ಅವರನ್ನು ಆದ್ಯತೆ ಮೇಲೆ ಪರಿಗಣಿಸಲಾಗುವುದು ಎಂದು ಸಚಿವರು ತಿಳಿಸಿದರು.

ವಿಜಯ್ ಹಜಾರೆ ಟ್ರೋಫಿ: ಶತಕ ಸಿಡಿಸಿದ ನಾಯಕ; ಮಿಂಚಿದ ದೇವದತ್ತ ಪಡಿಕ್ಕಲ್, ಪ್ರಸಿದ್ಧ ಕೃಷ್ಣ

ಕರ್ನಾಟಕದ 'ಸಮರ್ಥ' ಆಟಕ್ಕೆ ಬಿಹಾರ ತತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕನಾಗಿ ಪದಾರ್ಪಣೆ ಮಾಡಿದ ಪಂದ್ಯದಲ್ಲಿ ನಿರಾಸೆ ಅನುಭವಿಸಿದ್ದ ಆರ್. ಸಮರ್ಥ್ (ಔಟಾಗದೆ 158; 144 ಎಸೆತ, 15 ಬೌಂಡರಿ, 1 ಸಿಕ್ಸರ್) ಅವರು ಜಸ್ಟ್ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಸೋಮವಾರ ಮೋಹಕ ಬ್ಯಾಟಿಂಗ್ ಮೂಲಕ ಎದುರಾಳಿ ಬೌಲರ್‌ಗಳನ್ನು ಕಾಡಿದರು. ಐಪಿಎಲ್ ಹೀರೊ ದೇವದತ್ತ ಪಡಿಕ್ಕಲ್ (97; 98ಎ, 8ಬೌಂ, 2ಸಿ) ಮತ್ತು ಭರವಸೆಯ ಬ್ಯಾಟ್ಸ್‌ಮನ್ ಸಿದ್ಧಾರ್ಥ್ ಕೂಡ ಸ್ಫೋಟಕ ಬ್ಯಾಟಿಂಗ್ ಮೂಲಕ ಮಿಂಚಿದರು. ಈ ಮೂವರ ಭರ್ಜರಿ ಆಟದ ಫಲವಾಗಿ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಭಾರಿ ಜಯ ಗಳಿಸಿತು.

ಎಲೀಟ್ 'ಸಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕ 267 ರನ್‌ಗಳಿಂದ ಬಿಹಾರವನ್ನು ಮಣಿಸಿತು. ನಾಲ್ಕು ವಿಕೆಟ್ ಉರುಳಿಸಿದ ವೇಗಿ ಪ್ರಸಿದ್ಧ ಕೃಷ್ಣ ಮತ್ತು ತಲಾ ಎರಡು ವಿಕೆಟ್ ಗಳಿಸಿದ ಅಭಿಮನ್ಯು ಮಿಥುನ್ ಹಾಗೂ ಶ್ರೇಯಸ್ ಗೋಪಾಲ್ ಎದುರಾಳಿಗಳ ಬ್ಯಾಟಿಂಗ್ ಬಳಗವನ್ನು ಛಿದ್ರ ಮಾಡಿದರು. ಈ ಜಯದೊಂದಿಗೆ ನಾಕೌಟ್ ಹಂತಕ್ಕೇರುವ ಕರ್ನಾಟಕದ ಕನಸು ಜೀವಂತವಾಗಿ ಉಳಿಯಿತು.

ಟಾಸ್ ಗೆದ್ದ ಬಿಹಾರ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡು ಕೈಸುಟ್ಟುಕೊಂಡಿತು. ಮೊದಲ ಪಂದ್ಯದಲ್ಲಿ ಉತ್ತರ ಪ್ರದೇಶಕ್ಕೆ ಮಣಿದಿದ್ದ ಕರ್ನಾಟಕ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. ಉತ್ತರ ಪ್ರದೇಶ ವಿರುದ್ಧ ಬ್ಯಾಟಿಂಗ್ ವೈಫಲ್ಯ ಕಂಡಿದ್ದ ಸಮರ್ಥ್ ಬೌಂಡರಿಗಳನ್ನು ಸಿಡಿಸುತ್ತ ಸಾಗಿದರು. ಅವರಿಗೆ ಉತ್ತಮ ಸಹಕಾರ ನೀಡಿದ ದೇವದತ್ತ ಪಡಿಕ್ಕಲ್ ಮೊದಲ ವಿಕೆಟ್‌ಗೆ 177 ಎಸೆತಗಳಲ್ಲಿ 153 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಶತಕದ ಅಂಚಿನಲ್ಲಿದ್ದಾಗ ದೇವದತ್ತ ಅವರನ್ನು ಮಧ್ಯಮ ವೇಗಿ ರಾಹುಲ್ ಕುಮಾರ್ ಬೌಲ್ಡ್ ಮಾಡಿದರು.

30ನೇ ಓವರ್‌ನಲ್ಲಿ ನಾಯಕನ ಜೊತೆಗೂಡಿದ ಸಿದ್ಧಾರ್ಥ್ ಬೌಲರ್‌ಗಳನ್ನು ದಂಡಿಸಿದರು. 138.18ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಅವರು ಎರಡನೇ ವಿಕೆಟ್‌ಗೆ 112 ಎಸೆತಗಳಲ್ಲಿ 171 ರನ್ ಸೇರಿಸಿ ಮೊತ್ತವನ್ನು 300ರ ಗಡಿ ದಾಟಿಸಿದರು. ಕೊನೆಯ 10 ಎಸೆತಗಳಲ್ಲಿ ಅನಿರುದ್ಧ ಜೋಶಿ ಮತ್ತು ಅಭಿಮನ್ಯು ಮಿಥುನ್ ಜೊತೆಗೂಡಿ ನಿರಾಯಾಸವಾಗಿ ರನ್‌ಗಳನ್ನು ಕಲೆ ಹಾಕಿದ ಸಮರ್ಥ್ ಔಟಾಗದೇ ಉಳಿದರು.

ಪ್ರಸಿದ್ಧ ಕೃಷ್ಣ ದಾಳಿಗೆ ನಲುಗಿದ ಬಿಹಾರ: ಆತಿಥೇಯರ ರನ್ ಗುಡ್ಡದ ಮುಂದೆ ಬೆಕ್ಕಸ ಬೆರಗಾಗಿದ್ದ ಬಿಹಾರ ಗುರಿ ಬೆನ್ನತ್ತಿ ಆರಂಭದಲ್ಲೇ ಸಂಕಷ್ಟಕ್ಕೆ ಒಳಗಾಯಿತು. ಎರಡು ರನ್ ಗಳಿಸುವಷ್ಟರಲ್ಲಿ ತಂಡದ ಎರಡು ವಿಕೆಟ್‌ಗಳು ಉರುಳಿದವು. 13 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡ ಅಶುತೋಷ್ ಅಮನ್ ಬಳಗಕ್ಕೆ ಆರಂಭಿಕ ಬ್ಯಾಟ್ಸ್‌ಮನ್ ಶಕೀಬುಲ್ ಗನಿ ಮತ್ತು ಏಳನೇ ಕ್ರಮಾಂಕದ ಅಶುತೋಷ್ ಅವರು ಕೊಂಚ ಸಮಾಧಾನ ತಂದುಕೊಟ್ಟರು. ಆದರೆ ಆ ಪ್ರಯತ್ನ ಎಲ್ಲೆಲ್ಲಿಗೂ ಸಾಕಾಗಲಿಲ್ಲ. 28ನೇ ಓವರ್‌ನಲ್ಲಿ ತಂಡ ಸೋಲೊಪ್ಪಿಕೊಂಡಿತು.

ವೇಗಿಗಳಾದ ಪ್ರಸಿದ್ಧ ಕೃಷ್ಣ ಮತ್ತು ಅಭಿಮನ್ಯು ಮಿಥುನ್ ಅಗ್ರ ಕ್ರಮಾಂಕಕ್ಕೆ ಪೆಟ್ಟು ನೀಡಿದರೆ ಸ್ಪಿನ್ನರ್‌ಗಳಾದ ಜೆ.ಸುಚಿತ್ ಮತ್ತು ಶ್ರೇಯಸ್ ಗೋಪಾಲ್ ಎದುರಾಳಿಗಳ 'ಬಾಲ' ಕತ್ತರಿಸಿದರು.



ಆರ್.ಸಮರ್ಥ್

ದೇವದತ್ತ ಪಡಿಕ್ಕಲ್

ಮುಖ್ಯಾಂಶಗಳು

- ಕೆ.ಸಿದ್ಧಾರ್ಥ್ ಅರ್ಧಶತಕದ ಆಟ
- ನಾಲ್ಕು ವಿಕೆಟ್ ಗಳಿಸಿದ ಪ್ರಸಿದ್ಧ ಕೃಷ್ಣ

ಸ್ಕೋರ್‌ಕಾರ್ಡ್

ಕರ್ನಾಟಕ 3ಕ್ಕೆ 354 (50 ಓವರ್‌ಗಳಲ್ಲಿ)

ರವಿಕುಮಾರ್ ಸಮರ್ಥ್ ಔಟಾಗದೆ	158
ದೇವದತ್ತ ಪಡಿಕ್ಕಲ್ ಬಿ ರಾಹುಲ್ ಕುಮಾರ್	97
ಕೆ. ಸಿದ್ಧಾರ್ಥ್ ಸಿ ಮತ್ತು ಬಿ ಎ.ಎನ್.ರಾಜ	76
ಅನಿರುದ್ಧ ಜೋಶಿ ಸಿ ಗನಿ ಬಿ ಎ.ಎನ್.ರಾಜ	6
ಅಭಿಮನ್ಯು ಮಿಥುನ್ ಔಟಾಗದೆ	7
ಇತರೆ (ಬೈ 2, ಲೆಗ್‌ಬೈ 1, ನೋಬಾಲ್ 1, ವೈಡ್ 6)	10

ವಿಕೆಟ್ ಪತನ: 1-153 (ದೇವದತ್ತ ಪಡಿಕ್ಕಲ್, 29.3), 2-324 (ಕೆ.ಸಿದ್ಧಾರ್ಥ್, 48.1), 3-335 (ಅನಿರುದ್ಧ ಜೋಶಿ, 48.5)

ಬೌಲಿಂಗ್: ಅನುಜ್ ರಾಜ್ 10–0–68–2, ಶಬ್ಬೀರ್ ಖಾನ್ 10–0–66–0, ರಾಹುಲ್ ಕುಮಾರ್ 9–0–69–1, ಅಶುತೋಷ್ ಅಮನ್ 9–0–43–0, ಸಮರ್ ಖಾದ್ರಿ 9–0–67–0, ಶಂಶೀಮ್ ರಾಥೋಡ್ 2–0–20–0, ಆಕಾಶ್ ರಾಜ್ 1–0–18–0

ಬಿಹಾರ 87 (27.2 ಓವರ್‌ಗಳಲ್ಲಿ)

ಶಕೀಬುಲ್ ಗನಿ ಸಿ ಕರುಣ್ ನಾಯರ್ ಬಿ ಪ್ರಸಿದ್ಧ ಕೃಷ್ಣ	37
ಶಂಶೀಮ್ ರಾಥೋಡ್ ರನ್ ಔಟ್ (ಸಿದ್ಧಾರ್ಥ್)	0
ಬಾಬುಲ್ ಕುಮಾರ್ ಎಲ್‌ಬಿಡಬ್ಲ್ಯು ಪ್ರಸಿದ್ಧ ಕೃಷ್ಣ	0
ಮಂಗಲ್ ಮಹರೋರ್ ಬಿ ಪ್ರಸಿದ್ಧ ಕೃಷ್ಣ	8
ಆಕಾಶ್ ರಾಜ್ ಎಲ್‌ಬಿಡಬ್ಲ್ಯು ಅಭಿಮನ್ಯು ಮಿಥುನ್	1
ವಿಕಾಸ್ ರಂಜನ್ ಎಲ್‌ಬಿಡಬ್ಲ್ಯು ಅಭಿಮನ್ಯು ಮಿಥುನ್	0
ಅಶುತೋಷ್ ಅಮನ್ ಸಿ ಅನಿರುದ್ಧ ಜೋಶಿ ಬಿ ಜೆ. ಸುಚಿತ್	11
ಶಬ್ಬೀರ್ ಖಾನ್ ಎಲ್‌ಬಿಡಬ್ಲ್ಯು ಶ್ರೇಯಸ್ ಗೋಪಾಲ್	1
ಅನುಜ್ ರಾಜ್ ಸಿ ಅಭಿಮನ್ಯು ಮಿಥುನ್ ಬಿ ಶ್ರೇಯಸ್ ಗೋಪಾಲ್	10
ರಾಹುಲ್ ಕುಮಾರ್ ಬಿ ಪ್ರಸಿದ್ಧ ಕೃಷ್ಣ	0
ಸಮರ್ ಖಾದ್ರಿ ಔಟಾಗದೆ	6
ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 3, ವೈಡ್ 4)	13

ವಿಕೆಟ್ ಪತನ: 1-2 (ಶಂಶೀಮ್ ರಾಥೋಡ್, 1.2), 2-2 (ಬಾಬುಲ್ ಕುಮಾರ್, 1.6), 3-12 (ಮಂಗಲ್ ಮಹರೋರ್, 5.4), 4-13 (ಆಕಾಶ್ ರಾಜ್, 6.1), 5-13 (ವಿಕಾಸ್ ರಂಜನ್, 6.2), 6-57 (ಅಶುತೋಷ್ ಅಮನ್, 18.3), 7-64 (ಶಬ್ಬೀರ್ ಖಾನ್, 19.4), 8-70 (ಶಕೀಬುಲ್ ಗನಿ, 24.5), 9-70 (ರಾಹುಲ್ ಕುಮಾರ್, 24.6), 10-87 (ಅನುಜ್ ರಾಜ್, 27.2)

ಬೌಲಿಂಗ್: ಅಭಿಮನ್ಯು ಮಿಥುನ್ 5–3–7–2, ಪ್ರಸಿದ್ಧ ಕೃಷ್ಣ 6.1–3–17–4, ಜೆ.ಸುಚಿತ್ 7.5–2–14–1, ರೋನಿತ್ ಮೋರೆ 4–0–21–0, ಶ್ರೇಯಸ್ ಗೋಪಾಲ್ 4.2–0–22–2

ಫಲಿತಾಂಶ: ಕರ್ನಾಟಕಕ್ಕೆ 267 ರನ್‌ಗಳ ಜಯ; ಮುಂದಿನ ಪಂದ್ಯ 24ರಂದು, ಒಡಿಶಾ ವಿರುದ್ಧ.

ಬಾಕ್ಸಿಂಗ್: ಭಾರತಕ್ಕೆ 10 ಪದಕ

ನವದೆಹಲಿ (ಪಿಟಿಐ): ಬೇಬಿರೋಜಿಸಾನ ಚಾನು ಮತ್ತು ಅರುಂಧತಿ ಚೌಧರಿ ಯುರೋಪ್‌ನ ಮಾಂಟೆನಿಗ್ರೊದಲ್ಲಿ ನಡೆದ ಯೂತ್ ಮಹಿಳೆಯರ ಅಡ್ರಿಯಾಟಿಕ್ ಪರ್ಲ್ ಬಾಕ್ಸಿಂಗ್ ಟೂರ್ನಿಯಲ್ಲಿ ಸೋಮವಾರ ಚಿನ್ನದ ಪದಕ ಗಳಿಸಿದರು. ಇದರೊಂದಿಗೆ ಭಾರತ ಐದು ಚಿನ್ನದೊಂದಿಗೆ ಒಟ್ಟು 10 ಪದಕಗಳನ್ನು ಗಳಿಸಿ ಅಗ್ರಸ್ಥಾನ ತನ್ನದಾಗಿಸಿಕೊಂಡಿತು.

ಬೇಬಿರೋಜಿಸಾನ ಚಾನು 51 ಕೆಜಿ ವಿಭಾಗದಲ್ಲಿ ಮತ್ತು ಅರುಂಧತಿ 69 ಕೆಜಿ ವಿಭಾಗದಲ್ಲಿ ಮೊದಲಿಗರಾದರು. ಲಕ್ಕಿ ರಾಣ 64 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದರು. ಇದರೊಂದಿಗೆ ಐದು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳು ಭಾರತದ ಪಾಲಾದವು.

ರೆಬೆಲ್ಸ್‌ಗೆ ಗೆಲುವು

ಬೆಂಗಳೂರು: ನಿಸೀಲಿಯ ಮಾಜೋ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ರೆಬೆಲ್ಸ್ ವಿಮೆನ್ಸ್ ಎಫ್‌ಸಿ ತಂಡ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಸೂಪರ್ ಡಿವಿಷನ್ ತಂಡಗಳ ಮಹಿಳಾ ಲೀಗ್‌ನಲ್ಲಿ ಸೋಮವಾರ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೆಬೆಲ್ಸ್ ಏಕಪಕ್ಷೀಯವಾದ ಏಳು ಗೋಲುಗಳಿಂದ ಬೆಂಗಳೂರು ಸಾಕರ್ ಗ್ಯಾಲಕ್ಸಿ ತಂಡವನ್ನು ಮಣಿಸಿತು.

ಮೈಸೂರು ರೇಸ್

'ಅಬರ್ಲರ್' ಗೆಲ್ಲುವ ನಿರೀಕ್ಷೆ

ಅಂದೋಲನ ಟ್ರೋಫಿ ಮಂಗಳವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, 'ಅಬರ್ಲರ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00 ರಿಂದ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಂಟ್ರೆಸ್ ಶೇರ್ 3, ಎಂಗೆಲ್‌ಬರ್ಗ್ 4, ಸೇಫ್ ಬೆಟ್ 2
2ನೇ ರೇಸ್: ರೆಡ್ ಕೆಪ್ರಿ 7, ಫ್ಯಾಕ್ಟ್ಸ್ ಆಫ್ ಲೈಫ್ 4, ಬ್ರೇಕ್ ಅವೇ 1
3ನೇ ರೇಸ್: ಫೆಸ್ಟಿವ್ ಸ್ಟಾರ್ 1, ಹೈಲ್ಯಾಂಡ್ ಪಾರ್ಕ್ 4, ಇಟಾಲಿಯನ್ ಸ್ಟಾಲಿಯನ್ 9
4ನೇ ರೇಸ್: ಡೀಮಸ್ 3, ಕಂಟ್ರೆಸ್ ಟೈಗ್ರೆಸ್ 1, ಡಿ ಬ್ರದರ್ 4
5ನೇ ರೇಸ್: ಸ್ಟ್ರಿಪ್ಡ್ ವೈಟರ್ 3, ಸ್ಟಾರ್ ಆಫ್ ಥಿಯಾ 1, ಕ್ರೆಸೆಂಡೊ 2
6ನೇ ರೇಸ್: ಅಬರ್ಲರ್ 7, ಸಿಲ್ವರ್ ಡೇಸ್ ಎಗೈನ್ 8, ಎಡ್ಡಿ ದಿ ಈಗಲ್ 4
7ನೇ ರೇಸ್: ಇಂಡಿಯನ್ ಡ್ರೀಮ್ಸ್ 11, ಆರೆಲಿಯಾ 10, ಆಫ್ರಿಕನ್ ಎಂಪರರ್ 2
8ನೇ ರೇಸ್: ಟಚ್ ಆಫ್ ಕ್ಲಾಸ್ 12, ಅಸಿಡೆನ್ಸಿ 3, ಮ್ಯಾಟಿಯೊ 4

ಉತ್ತಮ ಬೆಟ್: ಕಂಟ್ರೆಸ್ ಶೇರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಕ್ರಿಕೆಟ್: ನ್ಯೂಜಿಲೆಂಡ್‌ಗೆ ಜಯ ತಂದಿತ್ತ ಕಾನ್ವೆ

ಕ್ರೈಸ್ಟ್‌ಚರ್ಚ್ (ಎಪಿ): ಡೆವೊನ್ ಕಾನ್ವೆ (ಔಟಾಗದೆ 99, 59 ಎಸೆತ) ನ್ಯೂಜಿಲೆಂಡ್ ತಂಡದ ಜಯಕ್ಕೆ ಕಾರಣವಾದರು. ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ನಡೆದ ಮೊದಲ ಟ್ವೆಂಟಿ–20 ಪಂದ್ಯದಲ್ಲಿ ಆತಿಥೇಯ ತಂಡವು 53 ರನ್‌ಗಳ ಗೆಲುವು ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 184 (ಡೆವೊನ್ ಕಾನ್ವೆ ಔಟಾಗದೆ 99, ಗ್ಲೆನ್ ಫಿಲಿಪ್ 30, ಜಿಮ್ಮಿ ನೀಶಾಮ್ 26; ಜೇ ರಿಚರ್ಡ್ಸನ್ 31ಕ್ಕೆ 2, ಡ್ಯಾನಿಯಲ್ ಸ್ಯಾಮ್ಸ್ 40ಕ್ಕೆ 2, ಮಾರ್ಕಸ್ ಸ್ಟೋಯಿನಿಸ್ 17ಕ್ಕೆ1). ಆಸ್ಟ್ರೇಲಿಯಾ: 17.3 ಓವರ್‌ಗಳಲ್ಲಿ 131 (ಮಿಚೆಲ್ ಮಾರ್ಷ್ 45, ಆ್ಯಷ್ಟನ್ ಅಗರ್ 23, ಆ್ಯಡಂ ಜಂಪಾ ಔಟಾಗದೆ 13; ಇಶ್ ಸೋಧಿ 28ಕ್ಕೆ 4, ಟಿಮ್ ಸೌಥಿ 10ಕ್ಕೆ 2, ಟ್ರೆಂಟ್ ಬೌಲ್ಟ್ 22ಕ್ಕೆ 2, ಮಿಚೆಲ್ ಸ್ಯಾಂಟನರ್ 29ಕ್ಕೆ 1)

ಸಂಕ್ಷಿಪ್ತ ಸುದ್ದಿ

ಐಶ್ವರ್ಯ ಪಿಸೆಗೆ ಮೂರನೇ ಸ್ಥಾನ

ದುಬೈ: ಕರ್ನಾಟಕದ ಐಶ್ವರ್ಯ ಪಿಸೆ ಅವರು ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ ಬಾಜಾ ಮೋಟರ್ ರೇಸ್‌ನ ವಿಮೆನ್ಸ್ ಕ್ಲಾಸ್ ವಿಭಾಗದಲ್ಲಿ ಮೂರನೇ ಸ್ಥಾನ ಗಳಿಸಿದ್ದಾರೆ. ಈ ಮೂಲಕ ಟಿವಿಎಸ್ ರೇಸಿಂಗ್ ತಂಡದ ಚಾಲಕಿ, 2021ರ ಋತುವಿನಲ್ಲಿ ಶುಭಾರಂಭ ಮಾಡಿದರು.
25 ವರ್ಷದ ಐಶ್ವರ್ಯ, ಹೋದ ವರ್ಷ ನಡೆದ ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ಷಿಪ್‌ನ ವಿಮೆನ್ಸ್ ಕ್ಲಾಸ್ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದರು.

ಐಶ್ವರ್ಯ ಪಿಸೆ

ಚೆಸ್‌ಗೂ ಬಂತು ಅಂತರರಾಷ್ಟ್ರೀಯ ಲೀಗ್

ಚೆನ್ನೈ (ಪಿಟಿಐ): ವಿಶ್ವ ಚೆಸ್ ಲೀಗ್ ಆಯೋಜಿಸಲು ಟೆಕ್ ಮಹಿಂದ್ರಾ ಮಾಹಿತಿ ತಂತ್ರಜ್ಞಾನ ಸಂಸ್ಥೆ ಮುಂದಾಗಿದ್ದು ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರು ಲೀಗ್‌ನ ರೂಪುರೇಷೆ ಸಿದ್ಧಗಪಡಿಸಲಿದ್ದಾರೆ ಎಂದು ಸೋಮವಾರ ತಿಳಿಸಲಾಗಿದೆ. ಫ್ರಾಂಚೈಸ್ ಮಾದರಿಯಲ್ಲಿ ನಡೆಯಲಿರುವ ಲೀಗ್‌ನಲ್ಲಿ ವೃತ್ತಿಪರ ಮತ್ತು ಇತರ ಟೆನಿಸ್ ಪಟುಗಳು ಪಾಲ್ಗೊಳ್ಳಲಿದ್ದಾರೆ. ವಿಶ್ವದ ವಿವಿಧ ಕಡೆಗಳ ಎಂಟು ತಂಡಗಳು ಇರುತ್ತವೆ. ಪುರುಷ, ಮಹಿಳೆ, ಜೂನಿಯರ್ ಮತ್ತು ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಆಟಗಾರರು ತಂಡದಲ್ಲಿ ಇರುತ್ತಾರೆ. ರೌಂಡ್ ರಾಬಿನ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ ಎಂದು ಸಂಸ್ಥೆ ತಿಳಿಸಿದೆ.

ಟೆನಿಸ್: ರಾಮಕುಮಾರ್ ಪರಾಭವ

ಸಿಂಗಪುರ (ಪಿಟಿಐ): ಭಾರತದ ರಾಮಕುಮಾರ್ ರಾಮನಾಥನ್, ಸಿಂಗಪುರ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದಾರೆ. ಸೋಮವಾರ ನಡೆದ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಅವರು 3–6, 7–6, 3–6ರಿಂದ ಅಮೆರಿಕದ ತಾರೊ ಡೇನಿಯಲ್ ಎದುರು ಸೋತರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 200ನೇ ಸ್ಥಾನದಲ್ಲಿರುವ ಭಾರತದ ಆಟಗಾರ, ತನಗಿಂತ 80 ಕ್ರಮಾಂಕ ಮೇಲಿರುವ ತಾರೊ ವಿರುದ್ಧ ಎರಡು ತಾಸು ಆರು ನಿಮಿಷಗಳಲ್ಲಿ ಪರಾಭವಗೊಂಡರು.

ಐಎಸ್‌ಎಲ್: ಎಚ್‌ಎಫ್‌ಸಿ ಜಯಕ್ಕೆ ಪ್ರೀತಮ್ ಅಡ್ಡಿ

ವಾಸ್ಕೊ, ಗೋವಾ: ಕೊನೆಯ ವರೆಗೂ ಜಯದ ಹಾದಿಯಲ್ಲಿದ್ದ ಹೈದರಾಬಾದ್ ಎಫ್‌ಸಿ ತಂಡಕ್ಕೆ ಪ್ರೀತಮ್ ಪೆಟ್ಟು ನೀಡಿದರು. ತಿಲಕ್ ಮೈದಾನದಲ್ಲಿ ಸೋಮವಾರ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಹೈದರಾಬಾದ್ ಎಫ್‌ಸಿ ಮತ್ತು ಎಟಿಕೆ ಮೋಹನ್ ಬಾಗನ್ ತಂಡಗಳ ನಡುವಿನ ಪಂದ್ಯ 2–2ರಲ್ಲಿ ಡ್ರಾ ಆಯಿತು.

ಎಂಟನೇ ನಿಮಿಷದಲ್ಲಿ ಅರಿದಾನೆ ಸಂಟಾನಾ ಗಳಿಸಿದ ಗೋಲಿನ ಮೂಲಕ ಹೈದರಾಬಾದ್ ಮುನ್ನಡೆ ಗಳಿಸಿತ್ತು. 57ನೇ ನಿಮಿಷದಲ್ಲಿ ಮನ್ವಿರ್ ಗೋಲು ಗಳಿಸಿ ಎಟಿಕೆಎಂಬಿಗೆ ಸಮಬಲ ತಂದುಕೊಟ್ಟರು. 75ನೇ ನಿಮಿಷದಲ್ಲಿ ಅಲ್ಬರ್ಗ್ ಕಾಲ್ಚಳಕದ ಬಲದಿಂದ ಹೈದರಾಬಾದ್ ಮತ್ತೆ ಮುನ್ನಡೆ ಸಾಧಿಸಿತು. ಆದರೆ ಇಂಜುರಿ ಅವಧಿಯಲ್ಲಿ ಪ್ರೀತಮ್ ಗೋಲು ಗಳಿಸಿ ಎಟಿಕೆ ಪಾಳಯದಲ್ಲಿ ಸಂಭ್ರಮ ಮೂಡಿಸಿದರು. ಐದನೇ ನಿಮಿಷದಲ್ಲೇ ಚಿಂಗ್ಲೆನ್ಸಾನ ಸಿಂಗ್‌ಗೆ ರೆಡ್ ಕಾರ್ಡ್ ತೋರಿಸಿದ ಕಾರಣ ಹೈದರಾಬಾದ್ ಎಫ್‌ಸಿಗೆ 10 ಆಟಗಾರರ ಬಲ ಮಾತ್ರ ಇತ್ತು.

ನಾರ್ತ್ ಈಸ್ಟ್–ಈಸ್ಟ್ ಬೆಂಗಾಲ್ ಹಣಾಹಣಿ: ಫತೋರ್ಡದಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ತಂಡಗಳು ಸೆಣಸಲಿವೆ. ಈಸ್ಟ್ ಬೆಂಗಾಲ್ ತಂಡದ ಪ್ಲೇ ಆಫ್ ಕನಸು ಈಗಾಗಲೇ ಕಮರಿದೆ.

ಡೆನ್ವರ್ ನಿಲ್ದಾಣದಲ್ಲಿ ತುರ್ತು ಭೂ ಸ್ಪರ್ಶ ಮಾಡಿದ್ದ ವಿಮಾನ

'ಬೋಯಿಂಗ್ 777' ತಪಾಸಣೆಗೆ ಆದೇಶ

ವಾಷಿಂಗ್ಟನ್(ಎಎಫ್‌ಪಿ): ಬೋಯಿಂಗ್ 777 ಮಾದರಿಯ ವಿಮಾನಗಳ ತಪಾಸಣೆ ನಡೆಸುವಂತೆ ಅಮೆರಿಕದ ಫೆಡರಲ್ ವಿಮಾನಯಾನ ಸಂಸ್ಥೆಯು ಯುನೈಟೆಡ್ ಏರ್‌ಲೈನ್ಸ್ ಕಂಪನಿಗೆ ಆದೇಶಿಸಿದೆ.

231 ಪ್ರಯಾಣಿಕರು ಮತ್ತು ಹತ್ತು ಸಿಬ್ಬಂದಿಯೊಂದಿಗೆ ಡೆನ್ವರ್ ಅಂತರರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆಗಿದ್ದ ಯುನೈಟೆಡ್ ಏರ್‌ಲೈನ್ ವಿಮಾನ 'ಯುಎ328', ಎಂಜಿನ್ ದೋಷದಿಂದಾಗಿ, ತಕ್ಷಣವೇ ತುರ್ತಾಗಿ ಭೂ ಸ್ಪರ್ಶ ಮಾಡಿತ್ತು. ಘಟನೆಯಲ್ಲಿ ಯಾವುದೇ ಸಾವುನೋವು ಸಂಭವಿಸಿರಲಿಲ್ಲ. ವಿಮಾನದ ಕೆಲವು ಬಿಡಿಭಾಗಗಳು ಡೆನ್ವರ್ ನಗರದ ಕೆಲವೆಡೆ ಬಿದ್ದಿದ್ದವು.

ಈ ಘಟನೆ ನಡೆದು ಒಂದು ದಿನದ ನಂತರ ಅಮೆರಿಕ ಸರ್ಕಾರದ ವಿಮಾನಯಾನ ನಿಯಂತ್ರಣ ಸಂಸ್ಥೆ ಎಂಜಿನ್ ತಪಾಸಣೆಗೆ ಆದೇಶಿಸಿದೆ.

'ಪಿಡಬ್ಲ್ಯು400' ಎಂಜಿನ್‌ಗಳನ್ನು ಹೊಂದಿರುವ ಬೋಯಿಂಗ್ 777 ವಿಮಾನಗಳನ್ನು ಪರಿಶೀಲಿಸುವಂತೆ ವೈಮಾನಿಕ ಸುರಕ್ಷತಾ ತಜ್ಞರಿಗೆ ಸೂಚಿಸಲಾಗಿದೆ. ಕೆಲವು ಬೋಯಿಂಗ್ 777 ವಿಮಾನಗಳನ್ನು ಸೇವೆಯಿಂದ ಹಿಂದಕ್ಕೆ ಪಡೆಯುವ ಸಾಧ್ಯತೆ ಇದೆ' ಎಂದು ಫೆಡರಲ್ ವಿಮಾನಯಾನ ಸಂಸ್ಥೆಯ ಆಡಳಿತಾಧಿಕಾರಿ ಸ್ಟೀವ್ ಡಿಕ್ಸನ್ ತಿಳಿಸಿದ್ದಾರೆ.

ದಕ್ಷಿಣ ಕೊರಿಯಾ ಮತ್ತು ಜಪಾನ್ ಸಹ 'ಪಿಡಬ್ಲ್ಯು400' ಎಂಜಿನ್‌ಗಳನ್ನು ಹೊಂದಿರುವ ವಿಮಾನಗಳನ್ನು ಬಳಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನಯಾನ ನಿಯಂತ್ರಣ ಸಂಸ್ಥೆ ತಪಾಸಣೆ ಪೂರ್ಣಗೊಳಿಸಿ, ಈ ಮಾದರಿಯ ಎಂಜಿನ್‌ಗಳನ್ನು ಶಿಫಾರಸು ಮಾಡುವವರೆಗೆ, ಆ ವಿಮಾನಗಳನ್ನು ತಾತ್ಕಾಲಿಕವಾಗಿ ಸೇವೆಯಿಂದ ಹಿಂದಕ್ಕೆ ಪಡೆಯುವುದಾಗಿ ಯುನೈಟೆಡ್ ಏರ್‌ಲೈನ್ ಸಂಸ್ಥೆ ಹೇಳಿದೆ.

ತುರ್ತು ಭೂಸ್ಪರ್ಶ ಮಾಡುವ ಮುನ್ನ ಯುನೈಟೆಡ್ ಏರ್‌ಲೈನ್ಸ್ ವಿಮಾನ 328 ಚಿತ್ರ– ಎಪಿ/ಪಿಟಿಐ ಚಿತ್ರ

128 ವಿಮಾನಗಳ ಕಾರ್ಯಾಚರಣೆ ಸ್ಥಗಿತ

ಪ್ಯಾರಿಸ್ (ಎಎಫ್‌ಪಿ): 'ಪಿಡಬ್ಲ್ಯು400' ಎಂಜಿನ್‌ಗಳನ್ನು ಹೊಂದಿರುವ ಸುಮಾರು 128 ಬೋಯಿಂಗ್ 777 ವಿಮಾನಗಳ ಹಾರಾಟವನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಅಮೆರಿಕದ ವಿಮಾನಯಾನ ನಿಯಂತ್ರಣ ಸಂಸ್ಥೆ ವಿಮಾನಗಳ ತಪಾಸಣೆಗೆ ಸೂಚಿಸಿರುವುದರಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ಬೋಯಿಂಗ್ ಕಂಪನಿ ತಿಳಿಸಿದೆ.

ಇಂಡೊನೇಷ್ಯಾದ ಬೇಕರ್ಸಿ ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದ ಉಂಟಾದ ಪ್ರವಾಹ ಹಿನ್ನೆಲೆಯಲ್ಲಿ ಜನರು ಸುರಕ್ಷಿತ ಸ್ಥಳಕ್ಕೆ ತೆರಳುತ್ತಿರುವುದು

ಇಂಡೊನೇಷ್ಯಾದಲ್ಲಿ ಪ್ರವಾಹ: ಸುರಕ್ಷಿತ ಸ್ಥಳಕ್ಕೆ ಸಂತ್ರಸ್ತರ ಸ್ಥಳಾಂತರ

ಬೇಕಸಿ, ಇಂಡೊನೇಷ್ಯಾ (ಎಪಿ): ಧಾರಾಕಾರ ಮಳೆ ಮತ್ತು ಸಿಟರಂ ನದಿ ಒಡ್ಡು ಒಡೆದು ಉಂಟಾದ ಪ್ರವಾಹ ಪರಿಸ್ಥಿತಿಯಿಂದಾಗಿ ಇಂಡೊನೇಷ್ಯಾದ ಬೇಕಸಿ ಜಿಲ್ಲೆಯಲ್ಲಿ ಸಾವಿರಾರು ನಿವಾಸಿಗಳಿಗೆ ಸಮಸ್ಯೆಯಾಗಿದೆ. ನದಿ ಪಾತ್ರದ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು.

ಪಶ್ಚಿಮ ಜಾವಾ ಪ್ರಾಂತ್ಯದಲ್ಲಿನ ಬೇಕಸಿ ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ನೀರಿನ ಹರಿವು ಹೆಚ್ಚಾಗಿದ್ದು, ನದಿ ಉಕ್ಕಿ ಹರಿದಿತ್ತು. 'ನೀರಾವರಿ ಯೋಜನೆಯ ಕಾಮಗಾರಿಗೆ ಸಮಸ್ಯೆಯಾಗಿದೆ ಹಾಗೂ ಕೆಲವೆಡೆ ಒಡ್ಡು ಒಡೆದಿವೆ' ಎಂದು ಸಚಿವ ಬಸುಕಿ ಹಡಿಮುಲ್ಜೊನೊ ಅವರು ಸೋಮವಾರ ತಿಳಿಸಿದರು.

ಪರಿಹಾರ ಕಾರ್ಯಗಳಿಗಾಗಿ ರಾಷ್ಟ್ರೀಯ ಶೋಧ ಮತ್ತು ರಕ್ಷಣಾ ತಂಡದ ಸಿಬ್ಬಂದಿ ನಿಯೋಜಿಸಲಾಗಿದೆ. ರಾಷ್ಟ್ರೀಯ ಪ್ರಾಕೃತಿಕ ವಿಕೋಪ ನಿರ್ವಹಣಾ ಸಂಸ್ಥೆಯ ವಕ್ತಾರ ರಡಿತ್ಯಾ ಜಟಿ ಪ್ರಕಾರ, ಸುಮಾರು 28 ಸಾವಿರ ನಿವಾಸಿಗಳು ಸಂತ್ರಸ್ತರಾಗಿದ್ದು, 4,184 ಜನರನ್ನು ಸ್ಥಳಾಂತರಿಸಲಾಗಿದೆ.



ಆಯುರ್ವೇದಿಕ ಔಷಧಿ

ಚತುರ್ಭುಜ® ತೈಲ ಮತ್ತು ಟ್ಯಾಬ್ಲೆಟ್

ಕೀಲು ಮತ್ತು ಸ್ನಾಯು

ನೋವುಗಳಿಗೆ ಅತ್ಯಂತ ಪರಿಣಾಮಕಾರಿ ಔಷಧಿ.

ಕೀಲು ಮತ್ತು ಸ್ನಾಯುಗಳ ನೋವು, ಮಂಡಿ ನೋವು, ಸೊಂಟ ನೋವು, ತಲೆ ನೋವು, ಸೆಳೆತ, ಉಳುಕು, ಊತ, ಹಳೆಯ ಏಟಿನ ನೋವು, ಕತ್ತು ಸೆಳೆತ, ಮೀನಗಂಡ ನೋವು, ಭುಜದ ನೋವು, ಹಿಮ್ಮಡಿ ನೋವು, ಮಣಿಕಟ್ಟು ನೋವು, ನರಗಳಿಗೆ ಸಂಬಂಧಿತ ತೊಂದರೆಗಳು, ಶೀತದಿಂದ ಉಂಟಾಗುವ ನೋವು, ಹಳೆಯ ನೋವುಗಳಿಗೆ ಕೂಡ ಇದು ಪ್ರಯೋಜನಕಾರಿ.

ಸೂಚನೆ: ಸಾರ್ವಜನಿಕರ ಪ್ರಯೋಜನಕ್ಕಾಗಿ ಈ ಮಾಹಿತಿ ನೀಡಲಾಗುತ್ತಿದ್ದು, ಕೀಲುಗಳ ನೋವಿನಿಂದ ಮುಕ್ತರಾಗಿರಿ.

ಬಳಸುವ ವಿಧಾನ : ಪ್ರತಿದಿನ ಮೂರು ಬಾರಿ 8–10 ಮಿ.ಲೀ. ತೈಲದಿಂದ 15–20 ನಿಮಿಷಗಳ ಕಾಲ ಮಾಲಿಶ್ ಮಾಡಿರಿ, ತೈಲವನ್ನು ಧಾರಾಳವಾಗಿ ಬಳಸಲು ಹಿಂಜರಿಯದಿರಿ. ನೋವುಗಳು ತ್ವಚೆಯ ಮೇಲ್ಭಾಗದಲ್ಲಿ ಇರುವುದಿಲ್ಲ, ಮೂಳೆ ಮತ್ತು ಸ್ನಾಯುಗಳಲ್ಲಿ ಹುದುಗಿರುತ್ತದೆ. ಹೀಗಾಗಿ, ಸಾಕಷ್ಟು ಪ್ರಮಾಣದ ತೈಲದಿಂದ ಮಾಲಿಶ್ ಮಾಡುವುದರಿಂದ ತೈಲವು ಆಳಕ್ಕೆ ಇಳಿದು ಆರಾಮ ನೀಡುತ್ತದೆ. ಕಡಿಮೆ ತೈಲ ಬಳಸುವುದರಿಂದ ಆಳಕ್ಕೆ ತಲುಪುವುದಿಲ್ಲ. ಅಧಿಕ ಪರಿಣಾಮ ಪಡೆಯಲು ಚತುರ್ಭುಜ ತೈಲದ ಜೊತೆಗೆ ನಿಯಮಿತವಾಗಿ ಬೆಳಗ್ಗೆ 1 ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಕೂಡ ಸೇವಿಸಿರಿ. ನಿಯಮಿತವಾಗಿ ಉಪಯೋಗಿಸಿದ ಬಹುತೇಕ ರೋಗಿಗಳಿಗೆ ಸಾಕಷ್ಟು ಲಾಭವಾಗಿದೆ.

ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ.